ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಯ ಪ್ರಬಂಧ

"ಸರಸ್ವತಿದೇವಿ ಗೌಡರ ಸಾಹಿತ್ಯ ಒಂದು ಅಧ್ಯಯನ"

ಸಂಶೋಧಕರು

ಶ್ರೀಮತಿ ಕಲಾವತಿ ಶಿ. ಅಪರಾಜ

ಮರಾಠಾ ಮಂಡಳ ಬೆಳಗಾವಿ

ಮಾರ್ಗದರ್ಶಕರು

ಡಾ|| ಕೆ.ಆರ್.ಸಿದ್ದಗಂಗಮ್ಮ

ಮುಖ್ಯಸ್ಥರು, ಕನ್ನಡ ವಿಭಾಗ

ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ

947

ಶ್ರೀ ಬಿ.ಆರ್.ದರೂರ, ಸಂಶೋಧನಾ ಕೇಂದ್ರ, ಹಾರೂಗೇರಿ ಜಿಲ್ಲೆ:

ಬೆಳಗಾವಿ ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ ಹಂಪಿ

2011-12

ಶಂ.ವಿಂ.ಕ.ಅಗಿಪ.
947
AKSHARA GRANTHALAYA
ACC.NO.048756

947

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ

ಕನ್ನಡ ವಿಷಯದಲ್ಲಿ ಎಂ.ಫಿಲ್ ಪದವಿಯ ಪ್ರಬಂಧ

"ಸರಸ್ವತಿದೇವಿ ಗೌಡರ ಸಾಹಿತ್ಯ ಒಂದು ಅಧ್ಯಯನ"

ಸಂಶೋಧಕರು

ಶ್ರೀಮತಿ ಕಲಾವತಿ ಶಿ. ಅಪರಾಜ

ಮರಾಠಾ ಮಂಡಳ ಬೆಳಗಾವಿ

ಮಾರ್ಗದರ್ಶಕರು

ಡಾ|| ಕೆ.ಆರ್.ಸಿದ್ಧಗಂಗಮ್ಮ

ಮುಖ್ಯಸ್ಥರು, ಕನ್ನಡ ವಿಭಾಗ

ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ

ಶ್ರೀ ಬಿ.ಆರ್.ದರೂರ, ಸಂಶೋಧನಾ ಕೇಂದ್ರ, ಹಾರೂಗೇರಿ ಜಿಲ್ಲೆ:

ಬೆಳಗಾವಿ ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ ಹಂಪಿ

2011–12

8K0.9
KAL S
048756

ಅಭ್ಯರ್ಥಿಯ ಪ್ರಮಾಣ ಪತ್ರ

ಶ್ರೀ ಬಿ.ಆರ್. ಸಂಶೋಧನಾ ಕೇಂದ್ರ ಹಾರೂಗೇರಿ ಮೂಲಕ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ 2011-12ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಸರಸ್ವತಿದೇವಿಗೌಡರ ಸಾಹಿತ್ಯ ಒಂದು ಅಧ್ಯಯನ"** ಎಂಬ ಸಂಶೋಧನಾ ಪ್ರಬಂಧವನ್ನು ಡಾ॥ ಕೆ.ಆರ್. ಸಿದ್ಧಗಂಗಮ್ಮ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿ ಸಲ್ಲಿಸುತ್ತೇನೆ.

ಈ ಪ್ರಬಂಧ ನನ್ನ ಸ್ವಂತ ಬರವಣಿಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪಕಟಪಡಿಸಿಲ್ಲ ಮತ್ತು ಬೇರೆಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: ೦೮-೦೬-೨೦೧೨
ಸ್ಥಳ: ಬೆಳಗಾವಿ

Aparaj
(ಕಲಾವತಿ ಅಪರಾಜ)
ಸಂಶೋಧನಾ ವಿದ್ಯಾರ್ಥಿನಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ ಹಾರೂಗೇರಿ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ 2011-12 ಸಾಲಿನ ಎಂ.ಫಿಲ್ ಪದವಿಗಾಗಿ **"ಸರಸ್ವತಿದೇವಿಗೌಡರ ಸಾಹಿತ್ಯ ಒಂದು ಅಧ್ಯಯನ"** ಎಂಬ ಪ್ರಬಂಧವನ್ನು ಶ್ರೀಮತಿ ಕಲಾವತಿ ಅಪರಾಜ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ್ದಾರೆ.

ಈ ಪ್ರಬಂಧವು ವಿದ್ಯಾರ್ಥಿನಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ. ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ. ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೦೮-೦೬-೨೦೧೨

ಸ್ಥಳ : ಬೆಳಗಾವಿ

ಮಾರ್ಗದರ್ಶಕರು

ಡಾ|| ಕೆ.ಆರ್. ಸಿದ್ಧಗಂಗಮ್ಮ



ಪರಿವಿಡಿ

ಅಧ್ಯಾಯ : ೧) ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

ಪುಟ ಸಂಖ್ಯೆ

೧.೧ ಪ್ರವೇಶ ೦೧-೦೩
೧.೨ ಅಧ್ಯಯನದ ಸ್ವರೂಪ
೧.೩ ಅಧ್ಯಯನದ ಉದ್ದೇಶ
೧.೪ ಅಧ್ಯಯನದ ವ್ಯಾಪ್ತಿ

ಅಧ್ಯಾಯ : ೨) ಸರಸ್ವತಿ ದೇವಿಯವರ ಪರಿಸರ ಪ್ರಭಾವ ೦೪-೧೪
ಅಧ್ಯಾಯ : ೩) ಸರಸ್ವತಿ ದೇವಿಯವರ ಕತೆಗಳು ೧೫-೩೭
೩.೧ ಕಥೆಗಳಲ್ಲಿ ವೈಚಾರಿಕತೆ
೩.೨ ಉತ್ತರ ಕರ್ನಾಟಕದ ಸಾಂಸ್ಕೃತಿಕ ಸಂಗತಿಗಳು

ಅಧ್ಯಾಯ : ೪) ಸರಸ್ವತಿ ದೇವಿಯವರ ಕವಿತೆಗಳು ೩೮-೪೨
೪.೧ ಬದುಕಿನ ಆದರ್ಶಗಳು

ಅಧ್ಯಾಯ : ೫) ಸರಸ್ವತಿ ದೇವಿಯವರ ನಾಟಕಗಳು ೪೪-೫೨
೫.೧ ಸಾಮಾಜಿಕ ನಾಟಕಗಳು
೫.೨ ಚಾರಿತ್ರಿಕ ನಾಟಕಗಳು

ಅಧ್ಯಾಯ ೬) ಸರಸ್ವತಿ ದೇವಿಯವರ ಇತರ ಸಾಹಿತ್ಯಿಕ ಕೃತಿಗಳು ೫೩-೬೧
೬.೧ ಪ್ರಬಂಧಗಳು, ಭಾಷಣಗಳು ಇತ್ಯಾದಿ

ಅಧ್ಯಾಯ : ೭ ಸಮಾರೋಪ ೬೨-೬೪

ಪರಾಮರ್ಶನ ಗ್ರಂಥಸೂಚಿ ೬೫-೬೭

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ

೧೯ ನೇ ಶತಮಾನವು ಭಾರತದಲ್ಲಿ ಸಂಕ್ರಮಣಯುಗ. ಆಗ ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಹಾಗೂ ಗಟ್ಟಿಯಾದ ಕನ್ನಡದ ಸಾಂಸ್ಕೃತಿಕ ಬೇರುಗಳಿಂದ ಕನ್ನಡ ಸಾಹಿತ್ಯವು ಚಿಗಿತು ಹೊಸಗನ್ನಡ ಸಾಹಿತ್ಯದ ಹಲವು ಪ್ರಕಾರಗಳಾಗಿ ಬೆಳೆದವು. ಕರ್ನಾಟಕದಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ, ಧಾರವಾಡ ವಿದ್ಯಾವರ್ಧಕ ಸಂಘದ ಸುತ್ತ-ಮುತ್ತ, ಮಂಗಳೂರು ಕಾರವಾರದ ಕಡಲತೀರಗಳಲ್ಲಿ ಹೊಸಗನ್ನಡ ಸಾಹಿತ್ಯವು ಏಕ ಕಾಲಕ್ಕೆ ರೂಪಗೊಂಡಿತು. ನಮ್ಮ ಮಹಿಳಾ ಸಾಹಿತ್ಯದಲ್ಲಿ ತಿರುಮಲಾಂಬಾ, ಜಾನಕ್ಕಮ್ಮ ಬೆಳೆಗೆರೆ, ಆರ್.ಕಲ್ಯಾಣಮ್ಮ, ಶ್ಯಾಮಲಾದೇವಿ ಮುಂತಾದವರ ಹೆಸರುಗಳು ಕೇಳ ಬರಲಾರಂಭಿಸಿದವು. ತಿರುಮಲಾಂಬ ಸಾಹಿತ್ಯದಲ್ಲಿ ದೊಡ್ಡ ಶಕ್ತಿಯಾಗಿ ಮುಂದುವರೆದು ತಮ್ಮ ಸೋದರಿಯರಿಗೆ ದಾರಿ ದೀಪವಾಗಿ ಬೆಳಗಲು ಸಹಾಯಕರಾದರು. ಉತ್ತರ ಕರ್ನಾಟಕದ ಈ ಭಾಗದಲ್ಲಿ ಹಾಗೆ ಶ್ರೀರಕ್ಷೆಯಾಗಿ ನಿಂತವರು ಜಯದೇವಿ ತಾಯಿ ಲಿಗಾಡೆ, ಶಾಂತಾದೇವಿ ಮಾಳವಾಡ, ಶಾಮಲಾದೇವಿ ಇವರ ಕಿರಿಯ ಗೆಳತಿಯಾಗಿ ತನ್ನ ಸಾಹಿತ್ಯದ ಹಸಿವನ್ನು ತಣಿಸಿಕೊಂಡವರೂ ಜೊತೆಗೇ ಬೆಳೆದವರು ನಮ್ಮ ಲೇಖಕಿ ಸರಸ್ವತಿದೇವಿ ಗೌಡರ.

'ಎಲೆಯ ಮರೆಯ ಕಾಯಿ'ಯಂತೆ ಬೆಳಕಿಗೆ ಬಾರದ ಅದೆಷ್ಟೋ ಹೆಣ್ಣು ಮಕ್ಕಳ ಸಾಹಿತ್ಯವು ಇತ್ತೀಚಿನ ದಿನಗಳಲ್ಲಿ ಪ್ರಕಟಣೆಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ವಿಜಯಾ ದಬ್ಬೆಯವರನ್ನು ನಾವೆಲ್ಲ ಕೃತಜ್ಞತೆಯಿಂದ ನೆನಪಿಸಿಕೊಳ್ಳಬೇಕು. ಅವರು ತಂದ 'ಶ್ಯಾಮಲಾ ಸಂಚಯ', 'ಸಾರಾಸರಸ್ವತಿ' ಕನ್ನಡ ಸಾಹಿತ್ಯ ಲೋಕದಲ್ಲೇ ದಬ್ಬೆಯವರ ಹೆಸರನ್ನು ಅಜರಾಮರವಾಗಿಸಿಟ್ಟಿವೆ. ನಮ್ಮ ಮಹಿಳಾ ಸಾಹಿತ್ಯ ಚರಿತ್ರೆಯನ್ನು ನಾವೇ ಗುರುತಿಸಿ ಬರೆಯಬಲ್ಲೆವು ಎಂಬುದಕ್ಕೆ ಸಾಕ್ಷಿಯಾಗಿ ಮೊದಲ ಹೆಜ್ಜೆಯಲ್ಲಿರುವ ಪ್ರತಿ 'ಸಾರಸರಸ್ವತಿ' ಇದರಲ್ಲಿ ಸರಸ್ವತಿದೇವಿಯವರ ಬದುಕು-ಬರಹಗಳನ್ನು ಸಂಗ್ರಹಿಸಿದ್ದಾರೆ. ಇಲ್ಲಿ ಅರುಣಸರಸ್ವತಿ, ಕಾವ್ಯಸರಸ್ವತಿ, ದೃಶ್ಯ ಸರಸ್ವತಿ, ಕಥಾಸರಸ್ವತಿ, ಪ್ರಬಂಧ ಸರಸ್ವತಿ ಎಂಬ ಭಾಗಗಳಲ್ಲಿ ಇಡಿಯಾಗಿ ಅವರ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ. ನಾನು ಪ್ರಮುಖವಾಗಿ 'ಸಾರಸರಸ್ವತಿ' ಮತ್ತು ಇತರ ಲಭ್ಯವಿರುವ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಈ ಸಂಶೋಧನೆಯನ್ನು ಕೈಗೊಂಡಿದ್ದೇನೆ. ಆದರೆ ಈ ಲೇಖಕಿಯ ಕುರಿತು ಆಳವಾದ ಅವರ ಎಲ್ಲ ಸಾಹಿತ್ಯದ ಅಧ್ಯಯನವಾಗಿಲ್ಲ ಈ ಅಧ್ಯಯನದ ಅವಶ್ಯಕತೆ ಇದೆ.

ಸಾಂದರ್ಭಿಕವಾಗಿ ಸರಸ್ವತಿಯವರ ಕಥೆಗಳನ್ನು ಚರ್ಚಿಸಲಾಗಿದೆ. ಒಟ್ಟಾರೆಯಾಗಿ ಇವರ ಸಾಹಿತ್ಯದ ಅಧ್ಯಯನ ಮಾಡುವ ಉದ್ದೇಶ ನನ್ನದು. ಇವರ ಸಾಹಿತ್ಯ ಮತ್ತು ಪ್ರಬಂಧ, ಭಾಷಣಗಳ ಅಧ್ಯಯನದಿಂದ ಆ ಕಾಲದ ವಿಚಾರ ಧಾರೆಗಳನ್ನು, ಹೆಣ್ಣುಮಕ್ಕಳು ಎದುರಿಸಿದ ಸಮಸ್ಯೆಗಳನ್ನು ಆ ಕಾಲದ ಜನ ವಿಶ್ಲೇಷಿಸುವ ಕ್ರಮಗಳನ್ನು ನೋಡಬಹುದು. ಇವರ ಸಾಹಿತ್ಯ ಮತ್ತು ವೈಚಾರಿಕ ಬರಹಗಳ ಮೂಲಕ ಆ ಕಾಲದ ಮೌಲ್ಯಗಳನ್ನು ಕಂಡುಕೊಳ್ಳುವ ಪ್ರಯತ್ನವಿದೆ.

ನಮ್ಮ ಉತ್ತರ ಕರ್ನಾಟಕದ ಸಾಂಸ್ಕೃತಿಕ ಆಚರಣೆಗಳು ಹೇಗೆ ಅನಾವರಣಗೊಂಡಿವೆ ಎಂದು ತಿಳಿಯುವ ಉದ್ಧೇಶವೂ ನನ್ನದಾಗಿದೆ. ಇದಕ್ಕಾಗಿ ನಾನು ವಿಮರ್ಶೆ, ವಿಶ್ಲೇಷಣೆ ಕ್ರಮವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಕಾಲದ ಮಿತಿಯಿಂದ ನಾನು ಕೇವಲ ಕೃತಿಗಳ ವಿಮರ್ಶೆಗೆ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಿದ್ದೇನೆ ಜೊತೆಗೆ ಲೇಖಕಿಯ ಮಕ್ಕಳ ಜೊತೆಯ ಸಂದರ್ಶನ, ಮನೆಗೆ ಭೇಟಿ ಹಾಗೂ ಅವರ ವಿಚಾರಗಳು ಸಂಗ್ರಹವನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿದ್ದೇನೆ.

ಸರಸ್ವತಿದೇವಿಯವರ ವಿಚಾರಧಾರೆಗಳು ಇಂದಿಗೂ ಪ್ರಸ್ತುತವೇ? ಇವು ಎಲ್ಲ ಕಾಲಕ್ಕೂ ಬದುಕನ್ನು ಕಲಿಸುತ್ತವೆಯೇ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಉದ್ದೇಶ ನನ್ನದಾಗಿದೆ. ಈ ಸಂಶೋಧನ ಅಧ್ಯಯನದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉಧ್ಧೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತದ್ದಾಗಿದೆ. ಅಧ್ಯಯನದ ಉಧ್ಧೇಶವನ್ನು ಸ್ಪಷ್ಟಪಡಿಸಲಾಗಿದೆ. ಅಧ್ಯಯನದ ಸ್ವರೂಪ ಮತ್ತು ಅದರ ವ್ಯಾಪ್ತಿಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸರಸ್ವತಿದೇವಿಯವರ ಜೀವನ ಅದು ರೂಪುಗೊಂಡ ಬಗೆ ಅವರ ಸಾಹಿತ್ಯಿಕ ಒಲವುಗಳನ್ನು ಕುರಿತು ವಿವರಿಸಲಾಗಿದೆ. ಇವರ ಮದುವೆಯ ಮೊದಲೆಯೇ ಇವರ ಕಥಾಸಂಕಲನವೊಂದು ಬಿಡುಗಡೆಯಾಗಿತ್ತು. ಉನ್ನತ ಅಧಿಕಾರಿಯಾಗಿದ್ದ ತಂದೆಯೂ ಮಗಳ ಉನ್ನತಿಗೆ ಹಾರೈಸಿದರು. ಮದುವೆಯ ನಂತರ ಅವರ ಪತಿಯು ಸಾಹಿತ್ಯಕ್ಕೆ ಸಹಕಾರ ನೀಡಿದರು. ಜೊತೆಗೆ ಅವರ ಸಾಹಿತ್ಯಿಕ ಸಂಗಾತಿಗಳಾದ ಜಯದೇವಿ ತಾಯಿ ಲಿಗಾಡೆ, ಶಾಂತಾದೇವಿ ಮಾಳವಾಡ ಮತ್ತು ಶಾಮಲಾದೇವಿಯವರ ಪರಿಸರ ಪ್ರಭಾವಗಳನ್ನು ಹೇಳಲಾಗಿದೆ.

ಸರಸ್ವತಿದೇವಿಯವರಂತಹ ಸಾಹಿತ್ಯಿಕ ವ್ಯಕ್ತಿತ್ವವೊಂದು ರೂಪುಗೊಳ್ಳಲು ಪರಿಸರವು ಮುಖ್ಯವಾಗುತ್ತದೆಯೇ? ಎಂಬ ಪ್ರಶ್ನೆಯನ್ನಿರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯನದಲ್ಲಿ ಸರಸ್ವತಿದೇವಿಯವರ ಕಥೆಗಳನ್ನು ಚರ್ಚಿಸಲಾಗಿದೆ. ಅವರ ಮೊದಲ ಕಥಾಸಂಕಲನ 'ಅಲ್ಪವಿರಾಮ' (೧೯೪೨) ದ ಮೊದಲ ಕಥೆಯಲ್ಲಿಯೇ ಅವರು ಸ್ತ್ರೀಗೆ ಆರ್ಥಿಕ ಸ್ವಾತಂತ್ರ್ಯದ ಕುರಿತು ಚರ್ಚಿಸಿರುವುದು ಅವರ ವೈಚಾರಿಕ ಪ್ರಜ್ಞೆಯನ್ನು ಹೇಳುತ್ತದೆ. ಅವರ ಕಥೆಗಳಲ್ಲಿ ಸ್ವಂತಿಕೆ ಎದ್ದು ಕಾಣುತ್ತದೆ. ಕಥೆಗಳ ಆಳವಾದ ಅಧ್ಯಯನ ಇಲ್ಲಿದೆ. ಅವರ ಕಥೆಗಳಲ್ಲಿ ವೈಚಾರಿಕತೆ, ಸಾಂಸ್ಕೃತಿಕ ಸಂಗತಿಗಳನ್ನು ಗುರುತಿಸುವ ವಿಚಾರವಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಅವರ ಕವಿತೆಗಳನ್ನು ಚರ್ಚಿಸಲಾಗಿದೆ. ಕವಿತೆಗಳಲ್ಲಿ ಸ್ವತಂತ್ರಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಕುರಿತು ಮತ್ತು ಆಯಾ ಕಾಲದ ಒತ್ತಡಗಳು ಸರಸ್ವತಿಯವರಲ್ಲಿ ಸ್ಪಂದನ ಪಡೆದಿವೆ. ಕವಿತೆಗಳ ವಸ್ತುವಿಷಯ, ವೈಚಾರಿಕತೆ, ಕಲ್ಪನಾಲೋಕ, ಸಾಂಸ್ಕೃತಿಕ ಸತ್ವವನ್ನು ಹುಡುಕುವ ಪ್ರಯತ್ನವನ್ನು ಇವರ ಕವಿತೆಗಳ ಮೂಲಕ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಅವರ ನಾಟಕಗಳ ಕುರಿತು ಚರ್ಚಿಸಲಾಗಿದೆ. ಅವರು ಪ್ರಧಾನವಾಗಿ ಚಾರಿತ್ರಿಕ ಮತ್ತು ಸಾಮಾಜಿಕ ನಾಟಕಗಳನ್ನು ಬರೆದರು. ಚಾರಿತ್ರಿಕ ನಾಟಕಗಳು ಶಿವ ಶರಣರನ್ನು, ದೇಶಭಕ್ತರನ್ನು ಕೇಂದ್ರವಾಗಿಟ್ಟುಕೊಂಡರೆ, ಸಾಮಾಜಿಕ ನಾಟಕಗಳಲ್ಲಿ ಸಮಾಜದ ಗಂಭಿರ ಸಮಸ್ಯೆಗಳನ್ನು ಎತ್ತಿ ತೋರಿಸಿದ್ದಾರೆ. ಮತ್ತು ಅವು ಇಂದಿಗೂ ಹೇಗೆ ಪ್ರಸ್ತುತವೆಂಬ ವಿಚಾರವನ್ನು ಚರ್ಚಿಸುವ ಕ್ರಮವಿದೆ.

ಆರನೆಯ ಅಧ್ಯಾಯದಲ್ಲಿ ಅವರ ಸಾಹಿತ್ಯದ ಇತರ ಮಾದರಿಗಳನ್ನು ಕುರಿತು ಚರ್ಚಿಸಲಾಗಿದೆ. ಮುಖ್ಯವಾಗಿ ಪ್ರಬಂಧಗಳು, ಲಘು ಭಾಷಣಗಳು ಇತ್ಯಾದಿಗಳಲ್ಲಿನ ವೈಚಾರಿಕತೆಯನ್ನು ವಿವರಿಸಲಾಗಿದೆ. ವೈಚಾರಿಕತೆಯ ಮೂಲ ಸ್ತ್ರೀ ಏಳಗೆಯಾಗಿದೆ.


ಅಧ್ಯಾಯ ಏಳರಲ್ಲಿ ಸರಸ್ವತಿದೇವಿಯವರದು ದೀಮಂತ ವ್ಯಕ್ತಿತ್ವ ಕಾರ್ಮೋಡದ ಹಿಂದಿರುವ ಅರುಣನಂತೆ ಬೆಳಕಿಗೆ ಬಾರದವರು. ಅವರ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಶರಣರ ಬದುಕು, ನಡೆನುಡಿಗಳನ್ನು ತಮ್ಮ ಬದುಕಿನ ದಾರಿಗಳಲ್ಲಿ ತುಳಿದವರು. ಅವರ ಕೃತಿಗಳಲ್ಲಿರುವ 'ಬದುಕಿನ ಕಲೆ'ಯನ್ನು ಈ ಅಧ್ಯಯನದ ಮೂಲಕ ಶೋಧಿಸುವ ಪ್ರಯತ್ನ ನನ್ನದು.



ಸರಸ್ವತಿ ದೇವಿಗೌಡರರ ಹುಟ್ಟಿದ ಮನೆ (ತಿಗಡಿ)

ತಂದೆ : ಶ್ರೀ ಬಸವಲಿಂಗಪ್ಪ ನಿರಡಿಯವರು

ತಾಯಿ : ಪಾರ್ವತಿದೇವಿ ನಿರಡಿಯವರು



ಪತಿ ಸದಾಶಿವ ಗೌಡರ ಅವರೊಂದಿಗೆ



ಸರಸ್ವತಿ ದೇವಿಯವರ ಮಕ್ಕಳು

ಅಧ್ಯಾಯ -೨
ಸರಸ್ವತಿಯವರ ಪರಿಸರ ಪ್ರಭಾವ

ಸ್ವಾತಂತ್ರ್ಯ ಪೂರ್ವದಲ್ಲಿಯೂ ಸಹ ಉತ್ತರ ಕರ್ನಾಟಕ ಅನೇಕ ಮಹಿಳಾ ಸಾಹಿತ್ಯ ಮಣಿಗಳನ್ನು ನೀಡಿದೆ. ಮೊದಲ ತಲೆಮಾರಿನ ಮಹಿಳಾ ಸಾಹಿತಿಗಳಲ್ಲಿ ಸರಸ್ವತಿದೇವಿಗೌಡರರ ಹೆಸರು ತುಂಬಾ ಪ್ರಮುಖವಾದುದು ಅವರು ಕೇವಲ ಸಾಹಿತಿಗಳಾಗದೇ ಸಾರ್ವಜನಿಕ ರಂಗಗಳಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು.

ಸರಸ್ವತಿಯವರು ೨೮-೦೨-೧೯೨೩ ರಲ್ಲಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಂಪಗಾಂವಿಯ ತಿಗಡಿಯಲ್ಲಿ ಶ್ರೀಮತಿ ಪಾರ್ವತಿದೇವಿ ನಿರಡಿ ಮತ್ತು ಬಸವಲಿಂಗಪ್ಪ ಅಡಿವೆಪ್ಪ ನಿರಡಿಯವರ ಏಕಮಾತ್ರ ಪುತ್ರಿಯಾಗಿ ಜನಿಸಿದರು. ಫೆಬ್ರುವರಿ ೨೮ ರಂದು 'ವಿಜ್ಞಾನ ದಿನ'ವೆಂದು ಆಚರಿಸುವ ನಾವು ಅಂದು ಜನಿಸಿದ ಈ ಮಗು ಮುಂದೆ ಸಾಹಿತ್ಯದ (ವಿ) ಜ್ಞಾನಿಯಾಗಿಯೇ ಬೆಳಗಿತ್ತು. ಸಂತಸದಿಂದ ಇಟ್ಟ 'ಸರಸ್ವತಿ' ಎಂಬ ಹೆಸರಿನಂತೆಯೇ ಇವರು ಸರಸ್ವತಿಯ ಆರಾಧಕಿಯೇ ಆದರು.

ಮುಂಬಯಿ ಪ್ರಾಂತ್ಯದ ಅತ್ಯುನ್ನತ ಅಧಿಕಾರಿಯಾಗಿದ್ದ ತಂದೆ ಬಸವಲಿಂಗಪ್ಪ ಅಡಿವೆಪ್ಪ ನಿರಡಿಯವರು ಮುದ್ದಿನ ಮಗುವನ್ನು ಬಲು ಅಕ್ಕರೆಯಿಂದ ಪೋಷಿಸಿದರು. ಮಗಳ ಪ್ರಾಥಮಿಕ ಶಿಕ್ಷಣದ ನಂತರದ ಶಿಕ್ಷಣವನ್ನು ಮನೆಯಲ್ಲಿಯೇ ಅನುಕೂಲ ಮಾಡಿಕೊಟ್ಟರು. ತಂದೆಯವರು ಉತ್ತಮ ಆಡಳಿತಗಾರರು ಮಾತ್ರವಲ್ಲದೇ ಸಾಹಿತ್ಯಾಸಕ್ತರೂ ಆಗಿದ್ದರು. 'ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿದ್ದರೆ ಅವರೊಬ್ಬ ಹಿರಿಯ ಸಾಹಿತಿಗಳಾಗಬಹುದಿತ್ತು. ನನ್ನಲ್ಲಿ ಹುದುಗಿರುವ ಈ ಸಾಹಿತ್ಯ ಸೇವೆಯ ಹಂಬಲ ಅವರಿಂದ ಆನುವಂಶಿಕವಾಗಿ ದತ್ತು ಬಂದ ದೇಣಿಗೆ ಎನ್ನಬಹುದು' ಎಂದು ಸರಸ್ವತಿದೇವಿಯವರು ತಮ್ಮ ತಂದೆಯವರ ಬಗ್ಗೆ ಹೇಳಕೊಂಡಿದ್ದಾರೆ.(ಮುನ್ನುಡಿ ಅಲ್ಪವಿರಾಮ) ಬಸವಲಿಂಗಪ್ಪ ನಿರಡಿಯವರು ರತ್ನಾಗಿರಿಯಲ್ಲಿದ್ದಾಗ ೧೯೪೪ ರಲ್ಲಿ ತಮ್ಮ ಮಗಳು ಬರೆದ 'ಹಿಂದೂಕಾಯಿದೆಯೂ ಸ್ತ್ರೀಧನವು' ಎಂಬ ಚಿಕ್ಕ ಪ್ರಬಂಧಕ್ಕೆ ಆಶೀರ್ವಚನ ಕಳುಹಿಸಿದರು. ಆಗ ಅವರು ಹರಸಿ ಕಳುಹಿಸಿದ ಆಶೀರ್ವಚನವು ಇದಾಗಿದೆ.

ನಿನ್ನ ಸೋದರಿಯರ ಗೌರವ ಧ್ವಜವ ಹಿಂಬಾಲಿಸಿ
ಅವರ ಆಗುಹೋಗುಗಳ ಸೈನಿಕಳಾಗಿ
ಅವರ ಕೆಲಸ-ಬಗಸೆಯ ಮಾಸಾಳುವಾಗಿ
ಅವರ ಕೀರ್ತಿಕಳಸದ ಸಂರಕ್ಷಕಳಾಗಿ

ಮತ್ತವರ ಆತ್ಮಶಕ್ತಿಯ ಪ್ರೇರಕ ಕಿಡಿಯಾಗಿ
ಬಾಳ ಬೆಳಗಲು ಮಂಗಲಮಯ ಅನುಗ್ರಹವಿರಲಿ

ಆ ದೇವನದು ನಿನಗೆ' ಎಂದು ಹರಿಸಿರುವರು. ಇದು ಸರಸ್ವತಿದೇವಿಯವರ ಜೀವನ ಪರ್ಯಂತ ಧ್ಯೇಯವಾಕ್ಯವಾಗಿರುವುದನ್ನು ನಾವು ಅವರ ಸಾಹಿತ್ಯ ಮತ್ತು ಸಾಹಿತ್ಯೇತ್ತರ ಕೃತಿಗಳಲ್ಲಿ ಗಮನಿಸಬಹುದು.

ಸಾಧ್ವಿ, ಶಿರೋಮಣಿ, ಪಾರ್ವತಿದೇವಿಯು ಶರಣರ ಅನುಭಾವದಿಂದ ಪ್ರೇರಿತರಾದವರು. ಜಂಗಮರ ಸೇವೆ ಸಮಾಜಸೇವೆಯಲ್ಲಿ ಸದಾ ನಿರತರು. ದೇವರ ಆರಾಧನೆ, ವಚನಗಳ ಪಠನ ಮಠ ಮಂದಿರಗಳಿಗೆ ಹೋಗುವುದು ಇತ್ಯಾದಿಗಳು ಬಾಲ್ಯದಲ್ಲಿಯೇ ಬಾಲಕಿಯ ಮೇಲೆ ಪ್ರಭಾವ ಬೀರಿದವು. ತಂದೆ ತಾಯಿಯರ ಅನುರಾಗ ಆರೈಕೆಯಲ್ಲಿ ಮಗು ದೈಹಿಕವಾಗಿ, ಬೌದ್ಧಿಕವಾಗಿ,ಸಮೃದ್ಧವಾಗಿ ಬೆಳೆಯತೊಡಗಿತು. ಗುರು–ಜಂಗಮರ ಆಶೀರ್ವಾದ ಮತ್ತು ಮನೆಯ ಹಿರಿ–ಕಿರಿಯರೆಲ್ಲರೂ 'ಅಂಗೈ ಮೇಲಿನ ಲಿಂಗ' ದಂತೆ ಕಾಳಜಿಯಿಂದ ಸರಸ್ವತಿಯನ್ನು ಬೆಳೆಸಿದರು.

'ಪುಣ್ಯಸ್ಮೃತಿಯ' ಮುನ್ನುಡಿಯಲ್ಲಿ ಶಾಂತಾದೇವಿ ಮಾಳವಾಡರು ಈ ರೀತಿ ಹೇಳುವರು, "ಸರಸ್ವತಿ" ಎಂಬ ಹೆಸರನ್ನು ಸಮರ್ಪಿಸುವಂತೆ ಬಾಲ್ಯದಲ್ಲಿ ವ್ಯಾಸಂಗ ನಿರತೆ. ಅದಕ್ಕೆ ತಕ್ಕ ಅನುಕೂಲತೆ ಕಲ್ಪಿಸಿದ ಅಕ್ಕರೆಯ ತಂದೆ ಅನುಕೂಲಸ್ಥ ಮನೆತನ' ಇದರಿಂದ ಮಕ್ಕಳ ಭವಿತವ್ಯದಲ್ಲಿ ಮನೆ– ಮನೆತನದ, ಪರಿಸರವೂ ಸಹ ತಂದೆ ತಾಯಿಯರಂತೆ ಮಹತ್ವದ ಪಾತ್ರ ವಹಿಸುತ್ತವೆ. ಇಂತಹ ಆಹ್ಲಾದಕರ ವಾತಾವರಣದಲ್ಲಿ ಶಾಲೆಗೆ ಹೋಗಲು ಮನಸ್ಸು ಪಕ್ವಗೊಂಡಿತ್ತು. ಉನ್ನತ ಅಧಿಕಾರಿಯಾಗಿದ್ದ ತಂದೆಯವರು ಮಗಳನ್ನು ಬೆಳಗಾವಿಯ ಒಂದನೆಯ ನಂಬರಿನ ಶಾಲೆಗೆ ಸೇರಿಸಿದರು. ಬ್ರಿಟಿಷರ ಕಾಲದಲ್ಲೂ ಬೆಳಗಾವಿಗೆ ವಿಶೇಷ ಮಹತ್ವ ಇತ್ತು. ಸಾಮಾಜಿಕ ಅನಿಷ್ಟಗಳಾದ ಸತಿ ನಿರ್ಮೂಲನೆ, ಬಾಲ್ಯ ವಿವಾಹ ಪದ್ಧತಿಗಳ ವಿರುದ್ಧ ಸಮಾಜ ಸುಧಾರಕರು ಧನಿ ಎತ್ತಿದರು. ಸ್ತ್ರೀ ಶಿಕ್ಷಣವನ್ನು ಕುರಿತು ಜಾಗೃತಗೊಳಸುತ್ತಿದ್ದರು. ಇಂತಹ ಸಮಯದಲ್ಲಿ ಸರಸ್ವತಿಯವರು ಹೆಣ್ಣುಮಕ್ಕಳ ಶಾಲೆಗೆ ಸೇರಿ ಆರನೆಯ ಇಯತ್ತೆಯ ಪಬ್ಲಿಕ್ ಪರೀಕ್ಷೆ ಬರೆದರು. ಮುಂದಿನ ಓದಿಗೆ ಸಮಾಜದಲ್ಲಿ ಆಗ ಅಷ್ಟೊಂದು ಅನುಕೂಲ ಮತ್ತು ಮಾನ್ಯತೆ ಇರಲಿಲ್ಲ. ಅಧಿಕಾರಿಯ ಒಬ್ಬಳೇ ಮಗಳಾದರೂ ಓದಿಗೆ ತಿಲಾಂಜಲಿಯನ್ನಿಡಬೇಕಾಯಿತು. ಮಗಳ ಉತ್ಸುಕತೆಗೆ ತಣ್ಣೀರೆರೆಚದ ತಂದೆಯವರು ಮನೆಯಲ್ಲಿಯೇ ಓದಲು ಅನುಕೂಲ ಮಾಡಿಕೊಟ್ಟರು. ಅವರು ಆಂಗ್ಲ ಸಾಹಿತ್ಯವನ್ನು ಮೆಚ್ಚುಗೆಯಿಂದ ಓದಿದರು. ನಾಲ್ಕು ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡರು

ಸಂಗೀತವನ್ನು ಪ್ರೀತಿಯಿಂದ ಕಲಿತರು. ವಿರಾಮ ಸಮಯದಲ್ಲಿ ಆಟ, ವಚನಗಳ ಶ್ರವಣ ಪಠಣಗಳನ್ನು ಮಾಡುವರು. ಇದಲ್ಲದೆ ಅವರು ಓದು ಹವ್ಯಾಸದ ಬಗ್ಗೆ ಅವರೇ ಕರ್ನಾಟಕದ ವಿದ್ಯಾವರ್ಧಕದ ಒಂದು ಪುಸ್ತಕದಲ್ಲಿ 'ನಾನು ಓದುವುದೇನು' ಎಂಬುದರಲ್ಲಿ 'ಮಿತ ಪರಿವಾರದಲ್ಲಿ ಬೆಳೆಯಬೇಕಾದ ಒಂಟಿತನದ ಬೇಸರದಿಂದ ಬದುಕು ನೀರಸವಾಗದೇ ರಮ್ಯವಾಗಿ ರೂಪುಗೊಳ್ಳಲು ಓದು ಕಣ್ಣೆದುರು ತಂದು ನಿಲ್ಲಿಸುತ್ತಿದ್ದ ವರ್ಣಮಯ ವೈವಿಧ್ಯಪೂರ್ಣ, ವಿಶಾಲ ಪ್ರಪಂಚದ ರಸಮಯ ಸೃಷ್ಟಿಯೇ ಕಾರಣವಾಗಿದೆ ಎಂದು ಹೇಳಬಹುದು.' ಎಂದಿದ್ದಾರೆ. (ಸಾರ ಸರಸ್ವತಿ ಸಂ.ವಿಜಯಾ ದಬ್ಬೆ ಪು.ಸಂಖ್ಯೆ ೩೩೩) ಶಾಂತಾದೇವಿ ಮಾಳವಾಡರ ಜೊತೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಜಾಣ' ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದಿಂದ 'ರಾಷ್ಟ್ರಭಾಷಾವಿಶಾರದೆ' ಪದವಿ ಪಡೆದರು. ಮುಂದೆ ಹಿಂದಿ ಪ್ರಚಾರ ಸಭಾದವರೇ ಇವರ ಕೃತಿಗಳನ್ನು ಹಿಂದಿಗೆ ಅನುವಾದಿಸಿರುವರು.('ಕರ್ನಾಟಕ ಶಿವಶರಣಿಯಾಂ'- ೧೯೭೧ ಮತ್ತು 'ಪುಣ್ಯಸ್ಮೃತಿ' ೧೯೭೨ ರಲ್ಲಿ)

ಸರಸ್ವತಿದೇವಿಗೌಡರಿಗೆ ತುಂಬಾ ಒಳ್ಳೆಯ ಸ್ನೇಹಿತರಿದ್ದರು. ಒಡನಾಡಿಗಳಾದ ಶ್ಯಾಮಲಾದೇವಿ ಬೆಳಗಾಂವಕರ, ಶಾಂತಾದೇವಿ ಮಾಳವಾಡ ಮತ್ತು ಜಯದೇವಿ ತಾಯಿ ಲಿಗಾಡೆ ಇವರೆಲ್ಲರ ಪ್ರಭಾವವೂ ಸಹ ಅವರ ಸಾಹಿತ್ಯ ಕೃಷಿಗೆ ಸಹಾಯವಾಗಿದೆ. ಉತ್ತರಕರ್ನಾಟಕ ಮೊದಲ ತಲೆಮಾರಿನ ಲೇಖಕಿಯರಲ್ಲಿ ಬಹುತೇಕರು ವಿಧವಾ ಸಮಸ್ಯೆಯನ್ನು ಎತ್ತಿಕೊಂಡು ಸಾಹಿತ್ಯ ರಚಿಸಿದ್ದಾರೆ. ಶ್ಯಾಮಲಾದೇವಿಯವರು ವರದಕ್ಷಿಣೆ, ವಿಷಮ ವಿವಾಹ ಆಧುನಿಕ ವೈವಾಹಿಕ ಜೀವನ ಸಮಸ್ಯೆಗಳನ್ನು ಕುರಿತು ಬರೆದಿದ್ದಾರೆ. ವೇಶ್ಯಾಕುಲವನ್ನು ಧಿಕ್ಕರಿಸಿ ಮದುವೆಯಾಗಿದ್ದ ಅವರು ಅಲ್ಲಿಯ ನರಳಾಟ ಮೂಕ ರೋದನವನ್ನು ಹತ್ತಿರದಿಂದ ಕಂಡವರು. ಅವರು ಎರಡು ಕಥಾ ಸಂಕಲನಗಳನ್ನು ಬರೆದರು. ಅವು ಹೂಬಿಸಿಲು (೧೯೩೭) ಮತ್ತು ಹೊಂಬಿಸಿಲು (೧೯೪೩). ಇವರ 'ಕುಂತೀಯ ದೇಶಾಂತರ' 'ತಾಯಿಮಾತಾಯಿ', 'ವಸಂತರಾಯನ ಮದುವೆ' 'ಕರುಳ ಕತ್ತರಿ' ಮತ್ತು ಸ್ನೇಹ ದರ್ಶನ ಮೊದಲಾದ ಕತೆಗಳಲ್ಲಿ ಗಂಡನನ್ನು ಬಿಟ್ಟು ಅತ್ಯಾಚಾರಕ್ಕೊಳಗಾದ ಪ್ರಸಂಗಗಳಲ್ಲಿ ಮರುಮದುವೆಯ ಪ್ರಸ್ತಾಪವಿದೆ. ಇನ್ನೂ ಕೆಲವು ಕತೆಗಳಲ್ಲಿ ನಾಯಕಿಯರು ವೇಶ್ಯಾಜೀವನದ ಪರಿಸರದಿಂದ ತಪ್ಪಿಸಿಕೊಳ್ಳಲು ಹೋರಾಡುವರು, ಕರುಳಕತ್ತರಿ'ಯಲ್ಲಿಯ ಚಂದ್ರಿಯ ಛಲಗಾರಿಕೆಗೆ ಈ ,ಮಾತುಗಳೇ ಸಾಕ್ಷಿ. 'ಸಂಜಿ ಆಗಾನಾ ಬಾಗಿಲಿಗೆ ರಾಡಿ ಒಗಿಯೋದು, ಕಲ್ಲು ಹೊಡಿಹೋದು--- ಮಾಡ್ತಾರ, ಮಾಡಿಕೊವಲ್ಯಾಕ. ಅದರ ಒಳಗೆ ಅವರ ಪ್ರವೇಶ ಬ್ಯಾಡ ಅಂತ ಅವರ್‍ನ ಆ

ಲಕ್ಷ್ಮೀನ್ನ ಕೊಡೇ ಹೊರಗೆ ಹಾಕಿ ಬಾಗಲ ಹಾಕಿ ಬಿಟ್ಟಿರತೇನಿ!' ಇಂತಹ ಗಟ್ಟಿ ಪಾತ್ರ ಸೃಷ್ಟಿಸಿದ ಶ್ಯಾಮಲಾದೇವಿಯವರು ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯನ್ನು ತಮ್ಮ ಕೃತಿಗಳಲ್ಲಿ ತಂದು ವಿಶಿಷ್ಟರೆನಿಸಿದ್ದಾರೆ. 'ಸರಸ್ವತಿ ದೇವಿಗೌಡರ ಇವರು ಶಿಷ್ಟ ಭಾಷೆಯನ್ನೇ ಬಹುವಾಗಿ ಬಳಸಿರುವರು. ಆದರೂ ಪಾತ್ರಗಳು ಗಟ್ಟಿಯಾಗಿ ರೂಪುಗೊಳ್ಳಲು ಈ ಸಾಹಿತ್ಯಕ ಪರಿಸರವು ಕಾರಣವಾಗಿದೆ ಎನ್ನಬಹುದು. 'ಮೋಳಗೆ ಮಾರಯ್ಯಾ' ನಾಟಕದ ಕೆಲವು ಕಡೆ ಗ್ರಾಮ್ಯ ಭಾಷೆ ಬಳಕೆಯಾಗಿದೆ. ಶ್ಯಾಮಲಾದೇವಿಯವರು ತಾವು ಬೆಳೆಯುವರೊಂದಿಗೆ ತಮ್ಮ ಗೆಳತಿಯನ್ನು ಜೊತೆಗೆ ಕರೆದೊಯ್ದರು. ತಮ್ಮ "ಜಯ ಕರ್ನಾಟಕ' ಪತ್ರಿಕೆಯಲ್ಲಿ ಸರಸ್ವತಿಯವರ ಕೃತಿಯನ್ನು ಮುದ್ರಿಸಲು ಪ್ರೇರೇಪಿಸಿದರು.

ಇವರಂತೆಯೇ ಗಾಢವಾಗಿ ಸರಸ್ವತಿಯವರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬರು ಶಾಂತಾದೇವಿ ಮಾಳವಾಡ. ಬೆಳಗಾವಿಯಲ್ಲಿ ಜನಿಸಿದ ಇವರು ಕನ್ನಡದ ಶ್ರೇಷ್ಠ ಲೇಖಕಿ. ಇವರು ಎರಡು ಕಥಾ ಸಂಕಲನಗಳನ್ನು ಬರೆದಿದ್ದಾರೆ. 'ಮೊಗ್ಗೆಯ ಮಾಲೆ (೧೯೪೧) 'ಮತ್ತು ಕುಂಕುಮ ಬಲ' (೧೯೫೪) ಅಲ್ಲದೆ ಅನೇಕ ಶಿವಶರಣ ಚರಿತ್ರೆ. ಕಾದಂಬರಿ, ಪ್ರವಾಸ ಕಥನ, ಸಂಪಾದನಾ, ಸಂಶೋಧನಾ ಗ್ರಂಥಗಳನ್ನು ರೂಪಿಸಿದ್ದಾರೆ. ಸ್ತ್ರೀ ಜೀವಿತದ ಹಲವು ಮುಖಗಳನ್ನು ಇವರ ಕತೆಗಳು ಬಿಚ್ಚಿಡುತ್ತವೆ. ಸರಳ, ಸಹಜ ಭಾಷೆವಿರುವ ಇವರ ಸಾಹಿತ್ಯವು ನೈಜತೆಯನ್ನು ಸ್ಪಷ್ಟಿಸುತ್ತದೆ. 'ಕುಂಕುಮ ಬಲ' ಕತೆಯಲ್ಲಿ ಶಿವಜ್ಜಿಗೆ ೩೫ ವರ್ಷಗಳ ನಂತರ ಗಂಡನಿಂದ ಪತ್ರ ಬರುವುದು, 'ಮುಪ್ಪಿನ ಕಾಲಕ್ಕಾದರೂ ಬಾ ಅಂತ ಕರದಾನಲ್ಲ, ಅಷ್ಟೇ ಸಾಕು ನನ್ನ ಕುಂಕುಮಕ್ಕೆ ಬಲ ಇದ್ದರ ಸಾಕು, ನಾ ಹೋಗಿ ಅವನ ಸೇವಾ ಮಾಡತೀನಿ'. ಎನ್ನುವ ಇಳಿ ವಯಸ್ಸಿನ ಶಿವಜ್ಜಿಯ ಅಂತಃಕರಣದ ಮಾತುಬದುಕನ್ನು ಕುರಿತಾದ ಆಳವಾದ ಪ್ರೀತಿಯ ಧ್ಯೋತಕವಾಗಿದೆ. ಇಂತಹ ಮಧುರವಾದ ಸಂಬಂಧದ ಪಾತ್ರಗಳು ಸರಸ್ವತಿಯವರ ಕಥೆಗಳಲ್ಲಿಯೂ ನಾವು ಕಾಣುತ್ತೇವೆ. ಆದರೆ ಸರಸ್ವತಿಯವರ ಬಹುತೇಕ ಕಥೆಗಳಲ್ಲಿ ಸಾಂಪ್ರದಾಯಿಕತೆಗಿಂತ ವೈಚಾರಿಕತೆ ಎದ್ದು ಕಾಣುತ್ತದೆ. ಒಡನಾಡಿ ಶಾಂತಾದೇವಿಯವರು ಇವರನ್ನು 'ತಂಗಿ' ಎಂದೇ ಕರೆಯುತ್ತಿದ್ದರು.

ಸರಸ್ವತಿಯವರ ಮೇಲೆ ಪ್ರಭಾವ ಬೀರಿದ ಇನ್ನೊಂದು ಧೀಮಂತ ವ್ಯಕ್ತಿತ್ವವೆಂದರೆ ಜಯದೇವಿತಾಯಿ ಲಿಗಾಡೆಯವರದು. ಸಾಹಿತ್ಯ ಮಾತ್ರವಲ್ಲದೆ ಸಮಾಜ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಲ್ಲೂ ತಮ್ಮ ಸೇವೆ ಸಲ್ಲಿಸಿರುವರು. ಶರಣರಿಂದ ಪ್ರಭಾವಿತರಾಗಿದ್ದ ಇವರು ತಮ್ಮ ಸಾಹಿತ್ಯದಲ್ಲಿ ಶರಣರ, ಸಿದ್ಧರಾಮನ,

ನಾಡು ನುಡಿಯ ಕುರಿತು ಬರೆದರು.'ಎಲೆಗಳ ಮೇಲೆ ನೀರೆರೆಚುವುದಕ್ಕಿಂತ ಗಿಡಕ್ಕೆ ಉಪಯೋಗವಿಲ್ಲವಷ್ಟೇ, ಬೇರಿಗೆ ನೀರು ಹಾಕುವದರಿಂದ ಗಿಡಕ್ಕೆಲ್ಲಾ ಪ್ರಯೋಜನವಾಗುವಂತೆ ಸ್ತ್ರೀ ಶಿಕ್ಷಣವು ಸಮಾಜದೇಳ್ಗೆಗೆ ಅತ್ಯವಶ್ಯ' ಎಂದು ಸ್ತ್ರೀ ಶಿಕ್ಷಣದ ಕುರಿತು ಹೇಳಿರುವರು. (ಜಯದೇವಿತಾಯಿ ಲಿಗಾಡೆ- ಡಾ|| ಸರೋಜಿನಿ ಚವಲಾರ ಪು.ಸಂ.(೧೧೮-೧೧೯)

'ಗಡಿಭಾಗವೆಂದರೂ ಕಡಿಮಿಲ್ಲ ಕನ್ನಡಕೆ
ಉಡಿಯ ತುಂಬುವೆ ಕನ್ನಡ ತಾಯಿಗೆ
ಒಡವೆಯ ಇಡಿಸುವೆ ಪದಗಳ ||

(ಜಯದೇವಿ ಲಿಗಾಡೆ -ಡಾ|| ಚನ್ನಕ್ಕಾ ಪಾವಟೆ ಪು.ಸಂ. ೧೪೭)

ನಾಡು ನುಡಿಯ ಕುರಿತ ಅಭಿಮಾನವು ಅವರ ಇಂತಹ ಪದ್ಯಗಳಿಂದ ತಿಳಿಯುವದು. ಸರಸ್ವತಿಯವರು ಇವರಿಂದ ತುಂಬಾ ಪ್ರಭಾವಿತರಾಗಿದ್ದರು. ಅಷ್ಟೇ ಅಲ್ಲದೆ ಅವರ ಕುರಿತು ಒಂದು ಕವಿತೆ ಬರೆದು ಅವರಿಗೆ ಅರ್ಪಿಸಿದ್ದಾರೆ. 'ತಾಯಿ ನಿನಗೆ ಶರಣು' ಎಂದು ' ಕನ್ನಡದ ಕೋಟೆ' ಕಟ್ಟಲು ಶ್ರಮಿಸಿರುವಿ ಎಂದು ಅಂತಕರಣದಿಂದ ನೆನೆಯುವರು. ಈ ಮೂವರು ಒಡನಾಡಿಗಳ ಪ್ರಭಾವದಿಂದ ಸರಸ್ವತಿಯವರ ಸಾಹಿತ್ಯ ಕೃಷಿಯು ಹುಲುಸಾಗಿ ಬೆಳೆಯತೊಡಗಿತು. ಮೊಗ್ಗಿನಿಂದ ಹೂವಾಗಿ ಅರಳಿತು.

ಬಾಲ್ಯದ ಒಡನಾಡಿಯಾಗಿದ್ದ ಸೋದರ ಮಾವ ಸದಾಶಿವಗೌಡರರ ಜೊತೆ ಸರಸ್ವತಿಯವರ ವಿವಾಹವಾಯಿತು. ಮದುವೆಯ ಮೊದಲೆ ತಮ್ಮ ಮೊದಲ ಕಥೆಯನ್ನು ೧೯೪೨ ರಲ್ಲಿ ಬರೆದರು. ನಂತರ ಗಂಡನ ಮನೆಗೆ ಬಂದಾಗ ಅವರಿಂದಲೂ ಸಾಕಷ್ಟು ಪ್ರೋತ್ಸಾಹ ದೊರಕಿತು. ಮೊದಲಿನಂತೆಯೇ ಅವರು ತಮ್ಮ ಎಲ್ಲ ಸಾರಸ್ವತ ಚಟುವಟಿಕೆಗಳನ್ನು ಮುಂದುವರಿಸಿದರು. 'ವಿಷನುಂಗಿ ಬದುಕಬೇಕು' ಎಂಬ ಕವಿತೆಯಲ್ಲಿ ಅವರ ಪತಿಯ ಸರಳತೆ, ಅನ್ಯೋನ್ಯತೆ, ನಿರ್ಭಯತೆ, ನೈತಿಕ ಸ್ಥೈರ್ಯ ನಮ್ಮ ಕಣ್ಣಿಗೆ ಕಟ್ಟುತ್ತದೆ.

'ಅಚ್ಚೆಯ ಮಗಳು ಮೆಚ್ಚಿನ ಮಡದಿ

ಅಚ್ಚು ಮೆಚ್ಚಿನ ತಾಯಿ ಸರಿಯಿಲ್ಲ ನನಗಾರು'। (ವಿಷ ನುಂಗಿ ಬದುಕಬೇಕು). ಎಂದು ಬಾಳಸಂಗಾತಿಯೊಡನೆ ಬಲು ಸಂತೋಷದಿಂದ ಸಂಸಾರ ರಥ ಎಳೆದರು. ೧೯೪೬ ರಲ್ಲಿ ಮೊದಲ ಮಗಳು ಶಾಂತಾದೇವಿಯು ಜನನ, ೧೯೫೨ ರಲ್ಲಿ ಎರಡನೆಯ ಮಗಳು ಸುಮಂಗಲಾದೇವಿ ಮತ್ತು ೧೯೬೧ ರಲ್ಲಿ ಮಗ ಶಿವಪ್ರಸಾದ ಜನಿಸಿದರು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿದರು. ೧೯೭೧ ರಲ್ಲಿ ಸದಾಶಿವರು ತೀರಿಕೊಂಡಾಗ

'ಮಕ್ಕಳ ತಾಯಿಗೆ ಸಾಯಲೂ ಎಡೆಯಿಲ್ಲ' 'ಉಣಲಾಗದ ಈ ಎಡೆಯ ಉಂಡು ಅರಗಿಸಬೇಕು.' ಎಂದು ಬದುಕನ್ನು ಸ್ವೀಕರಿಸಿದರು. ಉತ್ಕಟವಾದ ಪ್ರೀತ್ಯಾಭಿಮಾನದಿಂದ ಮಕ್ಕಳನ್ನು ಬೆಳೆಸಿದರು.

ಅವರ ದೊಡ್ಡ ಮಗಳಾದ ಶಾಂತಾದೇವಿ ಕಣವಿಯವರು ಹುಬ್ಬಳ್ಳಿಯಲ್ಲಿ ನೆಲೆಸಿದ್ದಾರೆ. ಅವರ ಮಗನಾದ ಡಾ॥ ಶಿವಪ್ರಸಾದ ಎಸ್.ಗೌಡರ ಅವರು ಮುಖ್ಯಸ್ಥರು ಫಿಜಿಯಾಲಾಜಿ ವಿಭಾಗ ಜವಾಹರಲಾಲ ನೆಹರು ವೈದ್ಯಕೀಯ ಕಾಲೇಜು ಬೆಳಗಾವಿಯಲ್ಲಿ ನೆಲೆಸಿದ್ದಾರೆ.

ಸರಸ್ವತಿ ದೇವಿ ಗೌಡರರ ಜೀವನದ ಮುಖ್ಯ ವರ್ಷಗಳು

೧. ೨೮-೦೨-೧೯೨೩ :ಜನನ, ಸ್ಥಳ: ತಿಗಡಿ, ಬೆಳಗಾವಿ ಜಿಲ್ಲೆ.

೨. ೧೯೪೧ : 'ಕನ್ನಡ ನಾಡದೇವಿ' ಏಕಾಂಕದ ಬರಹದ ಮುಕ್ತಾಯ.

೩. ೧೯೪೨ : ಸದಾಶಿವಪ್ಪ ಗೌಡರರೊಂದಿಗೆ ವಿವಾಹ.

೪. ೧೯೪೪: ಧಾರವಾಡ ಜಿಲ್ಲಾ ಮಹಿಳಾ ಪರಿಷತ್ತಿನ ಅಧ್ಯಕ್ಷತೆ.

೫. ೧೯೪೫ : 'ಹಿಂದೂ ಕಾಯಿದೆ ಮತ್ತು ಸ್ತ್ರೀಧನ' ಪುಸ್ತಕದ ರಚನೆ.
' ಭಾರತದ ವೀರ ಮಹಿಳೆಯರು' ಪುಸ್ತಕದ ರಚನೆ.

೬ ೧೯೪೬ : ಮೊದಲ ಮಗಳು ಶಾಂತಾದೇವಿಯ ಜನನ.

೭ ೧೯೫೨ : ಎರಡನೆ ಮಗಳು ಸುಮಂಗಲಾದೇವಿಯ ಜನನ

೮ ೧೯೫೫ : ಅಖಿಲ ಭಾರತ ಶಿವಾನುಭವ ಸಮ್ಮೇಳನದ ಮಹಿಳಾಗೋಷ್ಠಿಯ ಅಧ್ಯಕ್ಷತೆ.

೯. ೧೯೫೮ : 'ಅಲ್ಪವಿರಾಮ' ಕಥಾ ಸಂಕಲನದ ಬಿಡುಗಡೆ.

೧೦. ೧೯೬೦ : 'ಮಹಿಳಾ ಜೀವನದ ಸಮಸ್ಯೆಗಳು ಮತ್ತು ಪರಿಹಾರ' ಪುಸ್ತಕದ ಬಿಡುಗಡೆ.

೧೧. ೧೯೬೧ : ಮಗ ಶಿವಪ್ರಸಾದನ ಜನನ.

೧೨. ೧೯೭೫ : 'ಮೋಳಿಗೆಯ ಮಾರಯ್ಯಾ' ಮತ್ತು 'ಶಿವಶರಣೆಯರ ಚರಿತ್ರೆಗಳು' ಪುಸ್ತಕಗಳ ರಚನೆ.

೧೩. ೧೯೬೮ :'ಶಾಂತಾದೇವಿ ಮಾಳವಾಡರೊಂದಿಗೆ ನಂದಾದೀಪ'ದ ಸಂಪಾದನೆ.

೧೪. ೧೯೭೧ : ಬಾಳಸಂಗಾತಿ ಸದಾಶಿವಪ್ಪಗೌಡರ ನಿಧನ.

೧೫. ೧೯೭೨ : 'ಪುಣ್ಯಸ್ಮೃತಿ'ಯ ಪ್ರಕಟಣೆ.

೧೬. ೦೧-೦೭-೧೯೭೩ : ಸರಸ್ವತಿ ದೇವಿಗೌಡರರ ನಿಧನ

ಸರಸ್ವತಿದೇವಿಯವರ ಕೃತಿಗಳು

I. ಕಥೆಗಳು

೧. 'ಅಕ್ಕನ ತದಿಗೆ'– ' ಪುಣ್ಯ ಸ್ಮತಿ' ಸಂಕಲನ ಪ್ರಕಾಶಕರು ಶ್ರೀಮತಿ ಸರಸ್ವತಿದೇವಿ ಗೌಡರ, ಧಾರವಾಡ, ೧೯೭೨.

೨. ಅಕ್ಕ–ತಂಗಿ–'ಅಲ್ಪವಿರಾಮ' ಸಂಕಲನ ಸಹನಜೀವನ ಪ್ರಕಾಶನ, ಧಾರವಾಡ, ೧೯೫೮.

೩. 'ಅದೃಷ್ಟ ಪರೀಕ್ಷೆ'– ಪುಣ್ಯಸ್ಮತಿ ಸಂಕಲನ, ಪ್ರಕಾಶಕರು ಸರಸ್ವತಿದೇವಿಗೌಡರು

೪. 'ಅವಳು ವಿಧವೆ' ಅಲ್ಪವಿರಾಮ ಸಂಕಲನ ಸಹಜೀವನ ಪ್ರಕಾಶನ ಪೂರ್ವೋಕ್ತ

೫. 'ಆಹುತಿ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೬. 'ಒಂದು ಸಮಸ್ಯೆ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೭. 'ಸೌಭಾಗ್ಯವತಿ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೮. 'ಹಾಲು ಉಕ್ಕಿತು' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೯. 'ಹೂವಿನ ದಂಡೆ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೧೦. 'ಸತಿ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೧೧. 'ಯಜ್ಞಕುಂಡ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೧೨. 'ನೀಲವ್ವನ ಕೆರೆ' ಅಲ್ಪವಿರಾಮ ಸಂಕಲನ ಪೂರ್ವೋಕ್ತ

೧೩. 'ಜೀವದಾನ' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೧೪. 'ತನ್ನ ಹಸಿವು ತನ್ನ ಶಿಶುವು' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೧೫. 'ಬಿದಿಗೆಯಚಂದ್ರ' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೧೬. 'ಮಿತಿ ಮೀರಿದಾಗ' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೧೭. 'ಭೂಮಿ ಬಿರಿಯಲಿಲ್ಲ' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೧೮. 'ವಾಗ್ದತ್ತವಧು' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೧೯. 'ಸೀಮಂತದ ಉಡುಗೊರೆ' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೨೦. 'ಸೋತು ಗೆದ್ದವಳು' ಪುಣ್ಯಸ್ಮೃತಿ ಸಂಕಲನ ಪೂರ್ವೋಕ್ತ

೨೧. 'ಗೆಳತಿಗೆ ಓಲೆಗಳು' –ಸೌಭಾಗ್ಯ ಸಂಕಲನ, ಶರಾವತಿ ಪ್ರಕಟಣೆ ಶಿರಸಿ ಜುಲೈ ೧೯೫೦

೨೨. 'ಜೀವದ ಬೆಲೆ' – ಜಯ ಕರ್ನಾಟಕ ವಾರ ಪತ್ರಿಕೆ (ಸಂ.ಶಿ.ಶಿ.ಬಸವನಾಳ), ಸಂ.೧೨ ಸಂ.೨೦ ೪-೬–೧೯೫೮.ಧಾರವಾಡ

೨೩. 'ರಾಯರು ದಾರಿಗೆ ಬಂದರು'- ಜ್ಯೋತಿ ದೀಪಾವಳಿ ವಿಶೇಷಾಂಕ.(ಸಂ.ಪಿ.ಗಂಗಾಧರಯ್ಯಾ), ಧಾರವಾಡ ೧೯೬೮.

II. ಕವಿತೆಗಳು

೧. ಅಕ್ಕಮಹಾದೇವಿ – ೦೨-೦೪-೧೯೬೯

೨. ಅಭೀಷ್ಟ ಚಿಂತನ – ೦೮-೦೩-೧೯೬೫

೩. ಉದಯವಾಯಿತು ಇಂದು ಕರ್ನಾಟಕ ರಾಜ್ಯ –೨೫-೧೦-೧೯೭೨

೪. ಉಳಿವಿಗೆ ಬನ್ನಿ – ೨೩-೦೧-೧೯೬೮

೫. ಏಳು ಸುಪುತ್ರಾ ಎದ್ದೇಳು – ೧೯೬೩

೬. ಒಸಗೆ ನುಡಿ – ೨೫-೧೨-೧೯೬೨

೭. ಕರುನಾಡ ಸುಪುತ್ರ – ೧೭-೩-೧೯೭೩

೮. ಕಾಯ್ದು ಕರುಣಿಸಲಿ ಕರುನಾಳು ದೇವರು –೧೬-೦೩-೧೯೭೩

೯. ಚಂದ್ರ ಬಿಂಬ –೦೬-೦೮-೧೯೬೯

೧೦. ಜಗದಣ್ಣ ಬಸವಣ್ಣ – ಬಸವ ಜಯಂತಿ –೦೬-೦೮-೧೯೬೬

೧೧. ತಾಯಿ ನಿನಗೆ ಶರಣು – ೦೧-೧೧-೧೯೬೯

೧೨. ಬನ್ನಿರಿ ಹದುಳವಿರಲಿ –೦೭-೦೬-೧೯೭೨

೧೩. ಬನ್ನಿರಿ ಹದುಳವಿರಲಿ –೦೫-೦೧-೧೯೬೭

೧೪. ಬನ್ನಿರಮ್ಮ ಬನ್ನಿ ತಾಯಿ –೦೯-೦೨-೧೯೫೯

೧೫. ಮರೆತಿಲ್ಲ ತಾಯಿ –೦೬-೧೦-೧೯೬೯

೧೬. ವಿಷ ನುಂಗಿ ಬದುಕಬೇಕು –೦೬-೧೦-೧೯೭೧

೧೭. ಶರಣು ತಾಯಿ ಭಾರತಿ –೧೮-೦೯-೧೯೭೨

೧೮. ಶರಣು ಗಂಗಾಂಬೆ – ೦೧-೦೨-೧೯೬೧

೧೯. ಶ್ರುದ್ಧಾಂಜಲಿ – ೧೧-೦೩-೧೯೬೫

೨೦ ಸ್ವಾಗತ ಪದ – ವೀರಶೈವ ಮಹಿಳಾ ಪರಿಷತ್ತಿನ ಕಾಲಕ್ಕೆ ರಚಿಸಿದ್ದು

೨೧ ಸಿರಿಮುಡಿಗೆ – ೨೭-೧೦-೧೯೬೯

೨೨ ಹರಿಸು ನೀನು ಕರುನಾಳು – ೨೦-೧೧-೧೯೬೫

III. ನಾಟಕಗಳು

೧. ಆಯ್ದಕ್ಕಿ ಲಕ್ಕಮ್ಮ

೨. ಉಡುಗೊರೆ

೩. ಕನ್ನಡ ನಾಡಿನ ಮಹಿಳಾ ಪರಂಪರೆ ವೀರಶೈವ ಸಪ್ಟೆಂಬರ ೧೯೬೨. ಬೆಂಗಳೂರು ಆಕಾಶವಾಣಿಯಿಂದ ೯-೯-೧೯೬೨ ರಿಂದ ೧೨-೦೯-೧೯೬೨. ರವರೆಗೆ ಪ್ರಸಾರಗೊಂಡಿತು.

೪. ಕಳೆದ ಕೈ ಗಡಿಯಾರ ಜ್ಯೋತಿ – ೧೬-೦೨-೧೯೫೭ ಆಕಾಶವಾಣಿ ಪ್ರಸಾರ

೫. ಕಲ್ಯಾಣದ ಒಂದು ರೂಪಕ ಸಾವಧಾನ, ಪಾಕ್ಷಿಕ ಪತ್ರಿಕೆ – ೧೦-೦೧-೧೯೫೯ ಆಕಾಶವಾಣಿ ಪ್ರಸಾರ

೬. ಕಲ್ಯಾಣದ ಕೊನೆಗಾಲ –ಜಯ ಕರ್ನಾಟಕ ಎಪ್ರಿಲ್ ೧೯೬೦ ಆಕಾಶವಾಣಿ ಪ್ರಸಾರ

೭. ಕೂಡಲ ಸಂಗಮ, ಅಂಕುಶ, ಸಂ. ಧಾರವಾಡ ೧೨-೦೫-೧೯೫೯

೮. ಕೆಳದಿಯ ಚೆನ್ನಮ್ಮಾಜಿ

೯. ಧರ್ಮಸಂಕಟ –ಜಯಂತಿ ಆಗಷ್ಟ್ ೧೯೬೪

೧೦. ನಾಲಿಗೆಯ ಬೆಲೆ

೧೧. ನೀಲಾಂಬಿಕೆ

೧೨. ಮಲ್ಲಸರ್ಜ– ಜಯಕರ್ನಾಟಕ–೧೯೫೯

೧೩. ಮೋಳಿಗೆಯ ಮಾರಯ್ಯಾ–ಕ.ಸ.ಸಂ. ಧಾರವಾಡ ೧೯೬೬

೧೪. ಸಂಗೊಳ್ಳಿ ರಾಯಣ್ಣ–ಜಯ ಕರ್ನಾಟಕ ಸಪ್ಟೆಂಬರ ೧೯೫೮

IV. ಪ್ರಬಂಧಗಳು

೧. ಅಕ್ಕನಾಗಮ್ಮ

೨. ಅಧ್ಯಕ್ಷೆ – 43 ನೇ ಕ.ಸಾ.ಸ.ದ. ಮಹಿಳಾಗೋಷ್ಠಿ ೨೯-೧೨-೧೯೬೧ ಗದಗ ಬೆಟಗೇರಿ.

೩. ಅಧ್ಯಕ್ಷ ಭಾಷಣ – ೧೩ ನೇ ಅಖಿಲ ಭಾರತ ಶಿವಾನುಭವ ಸಮ್ಮೇಲನ ಹಂಸಭಾವಿ– ೧೯೫೭

4. ಕನ್ನಡನಾಡು ಕನ್ನಡ ಮಹಿಳೆಯರೂ– ಸರಸ್ವತಿಯ ರಜತೋತ್ಸವ ಸಂಚಿಕೆ 1948

೫) ಕರ್ನಾಟಕದ ಏಕೀಕರಣ ಕಾರ್ಯದಲ್ಲಿ ಕನ್ನಡತಿಯರೇ ಕೈಗೂಡಿರಿ– ತರುಣ ಕರ್ನಾಟಕ (ಸಂ.ಎಲ್.ಎಸ್.ಪಾಟೀಲ) ಸಂ.10 ಸಂಚಿಕೆ ೧೪೪,೫-೧೦-೧೯೪೭- ಹುಬ್ಬಳ್ಳಿ.

೬) ಕರ್ನಾಟಕ ಏಕೀಕರಣ –ಕೈಪಿಡಿ ಭಾಗ ಒಂದು ಸಾಹಿತ್ಯ ಮಂದಿರ ಧಾರವಾಡ ೧೯೭೪.

೭) ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ಪ್ರಗತಿ –ಜಯ ಕರ್ನಾಟಕ, ದೀಪಾವಳಿ ಸಂ,ನವೆಂಬರ ೧೩–೧೯೪೭

೮) ಕಲ್ಯಾಣ ಪಟ್ಟಣ- ಶರಣ ಸಾಹಿತ್ಯ

೯) ಗ್ರಾಮಾಂತರ ಪ್ರದೇಶದ ಮಹಿಳೆಯರ ಅಭಿವೃದ್ಧಿ-ಗ್ರಾಮಬಂಧು, ದೀಪಾವಳಿ ಸಂ ೨೦-೧೦-೧೯೬೦

೧೦) ನಾನು ಓದುವುದೇನು? ಸಾಹಿತ್ಯ ಮಂಟಪ -ಕ.ವಿ.ಸೆ.ಧಾರವಾಡ-ಜನವರಿ ೧೯೬೮

೧೧) ಬಸವೇಶ್ವರರ ತತ್ವದರ್ಶನ

೧೨) ಬಾಲ ಅಪರಾಧಿ-ರಜತೋತ್ಸವದ ಸಂಚಿಕೆ-೨೦-೦೯-೧೯೫೫ ದಿ. ಡಿಸ್ಟ್ರಿಕ್ಟ ಪ್ರೋಬೇಷನ್ ಆ್ಯಂಡ್ ಆಫ್ಟರ್ ಕೇರ್ ಅಸೋಸಿಯೇಶನ್, ಧಾರವಾಡ.

೧೩) ಬಾಲಜ್ಯೋತಿ(ಮಕ್ಕಳ ಹಾಡುಗಳು) ಮಹಿಳಾ ಜ್ಯೋತಿ ಮಾಸ ಪತ್ರಿಕೆ-ಜನವರಿ ೧೯೫೮, ೦೨-೦೭-೧೯೫೭ ರಂದು ಆಕಾಶವಾಣಿಯಿಂದ ಪ್ರಸಾರ

೧೪) ಭಾರತದ ಜೈನವೀರ ಮಹಿಳೆಯರು

೧೫) ಮನೆಯಲ್ಲಿದ್ದು ರಾಷ್ಟ್ರಸೇವೆ

೧೬) ಮಹಾನುಭವಿ ಬಸವಣ್ಣನವರು-ಜ್ಞಾನಪ್ರಸಾರ, ಅ.ಭ.ವಿ.ಸಂ.ದ ಮಾಸ ಪತ್ರಿಕೆ ಸಂ. ೧, ಸಂ, ೯ ಜನವರಿ ೧೯೬೮

೧೭) ಮಹಿಳಾ ಸಂಸ್ಥೆಗಳೂ ಅವುಗಳ ಕಾರ್ಯಗಳು-ಕೊಡಗು, ಹುತ್ರಿ ಸಂಚಿಕೆ-೧೦-೧೨ ೧೯೪೩

೧೮) ಮಹಿಳಾ ಶಿಕ್ಷಣ ಪ್ರಪಂಚ -ವಜ್ರಮಹೋತ್ಸವ ಸಂಸ್ಮರಣ ಸಂಚಿಕೆ-೧೬-೨-೧೯೭೦ ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜು, ಧಾರವಾಡ.

೧೯) ರಾಣಿ ಮಹಾದೇವಿ- ಪ್ರಸಾದ

೨೦) ಶ್ರೀ ಶಿವಯೋಗಿ ಶಿಷ್ಯೋತ್ತಮ ಶ್ರೀ ಮ.ಪ.ಮೃತ್ಯುಂಜಯ ಮಹಾಸ್ವಾಮಿಗಳು ಜ್ಞಾನಪ್ರಸಾದ ಸಂ ೧, ಸಂ, ೬, ಅಕ್ಟೋಬರ್ ೧೯೬೭

೨೧) ಸುಚಿತ್ರದ ಪುತ್ಥಳಿ-ಉಡುಪಿಯ ಮಹಾದೇವಿಯಕ್ಕಳ ಸ್ಮಾರಕ ಸಂಪುಟ

೨೨) ಸತುತ್ತ ಬಸವಣ್ಣ -ಜ್ಞಾನಪ್ರಸಾದ -೧೯೬೮ ಬೆಳಗಾವಿ

೨೩) ವಾತ್ಸಲ್ಯಮೂರ್ತಿ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು-ನೈವ್ಯದ್ಯೆ-೧೩-೦೪-೧೯೬೧ ಮುರುಘಾಮಠ ಧಾರವಾಡ.

೨೪) ವೈಹಾಳಿಯ ವೈಪರಿತ್ಯ-ನಂದಾದೀಪ, ಅಕ್ಕಮಹಾದೇವಿ ಅಷ್ಟಶತಮಾನೋತ್ಸವ ಸಂಸ್ಮರಣ ಗ್ರಂಥ ಮುರುಘಾಮಠ ಧಾರವಾಡ-೧೯೬೮

೨೫) ಹಿಂದಿಯು ಅವಶ್ಯಕತೆಯೋ? ಅನವಶ್ಯಕತೆಯೋ? ಸಂದೇಶ-೯-೧-೧೯೩೭

೨೬) ಹಿಂದಿಯು ಅವಶ್ಯಕವೋ-ಸ್ವತಂತ್ರ ಕರ್ನಾಟಕ-೧೬-೧-೧೯೪೨

೨೭) ಹೊಸ ಹಿಂದೂ ಕಾಯಿದೆ-೧೦-೦೯-೧೯೪೯

(ಆಧಾರ –'ಸಾರಸರಸ್ವತಿ'- ಸಂಪಾದಕರು. ವಿಜಯಾ ದಬ್ಬೆ, ಮಹಿಳಾ ಸಾಹಿತಿಕ ಪ್ರಕಾಶನ ಹುಬ್ಬಳ್ಳಿ ಡಿಸೆಂಬರ ೧೯೯೬)

ಸರಸ್ವತಿದೇವಿಯವರ ಮಗಳಾದ ಸೌ॥ ಶಾಂತಾದೇವಿ ಕಣವಿಯವರು ಅಮ್ಮನನ್ನು ಕುರಿತು ಈ ರೀತಿ ನೆನಪಿಸಿಕೊಳ್ಳುತ್ತಾರೆ.-"ಸಮಾಜದಲ್ಲಿ ನೆರೆಹೊರೆವರೊಂದಿಗೆ ತುಂಬಾ ಹೊಂದಾಣಿಕೆಯಿತ್ತು. ಎಲ್ಲರನ್ನೂ ತಮ್ಮ ಸ್ವಂತ ಮಕ್ಕಳೆನ್ನುವ ಉದಾರತೆ ಇತ್ತು. ಎಲ್ಲರೂ ಇವರನ್ನು ತುಂಬಾ ಗೌರವಿಸುತ್ತಿದ್ದರು. ಇವರು ಶಿವಾನುಭವ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಚಂದಾ ಸಂಗ್ರಹಿಸಲು ನಾನು ಅವರೊಂದಿಗೆ ಹೋಗುತ್ತಿದ್ದೇನು. ಅದಷ್ಟೇ ಅಲ್ಲದೇ ಮನೆಯ ಹಿರಿಯ ಮಗಳಾದ ನಾನು ಅವರ ಹೆಚ್ಚು ಕಡಿಮೆ ಎಲ್ಲ ಕಾರ್ಯಗಳಲ್ಲಿ ನೆರವಾಗುತ್ತಿದ್ದೇನು. ಅಪ್ಪ ಬೇರೆ ಊರಿನಲ್ಲಿ ಕೆಲಸ ಮಾಡುತ್ತಿದ್ದರು. ಹೀಗಾಗಿ ಮನೆಯ ಜವಾಬ್ದಾರಿಯಲ್ಲ ಅಮ್ಮನ ಮೇಲಿರುತ್ತಿತ್ತು. ಮನೆಗೆ ಬರುವ ಹೋಗುವ ಅತಿಥಿ ಅಭ್ಯಾಗತರನ್ನು ಆತ್ಮೀಯತೆಯಿಂದ ಕಾಣುತ್ತಿದ್ದರು. ಕೀಲು ನೋವಿನ ಸಮಸ್ಯೆಯಿಂದ ಬಳಲುತ್ತಿದ್ದರು ಎದೆಗುಂದದೆ ಹಿಡಿದ ಕಾರ್ಯ ಮುಗಿಸುತ್ತಿದ್ದರು. ಏನಾದರೂ ಕೆಲಸ ಕಾರ್ಯವಿದ್ದರೆ ಎಲ್ಲರ ಅನುಮತಿ ಪಡೆದು ಅಂತಿಮ ತೀರ್ಪು ಅವರೇ ತೆಗೆದುಕೊಳ್ಳುತ್ತಿದ್ದರು."

ಅಷ್ಟೇ ಅಲ್ಲದೇ ಲೀಲಾವತಿ ಪ್ರಸಾದ, ಗುರುದೇವಿ ಹಿರೇಮಠ, ಚೆನ್ನಕ್ಕ ಜವಳಿ, ಸಾವಿತ್ರಿದೇವಿ ಹಳ್ಳಿಕೇರಿಮಠ, ಸುಶೀಲಾ ನಾಯಕ, ಇವರೆಲ್ಲ ಅಮ್ಮನ ಗೆಳತಿಯರೆಂದು ನೆನೆಪಿಸಿಕೊಳ್ಳುತ್ತಾರೆ. ಅಮ್ಮನ ಪ್ರತಿಯೊಂದು ಮಾತು ನೆನಪು ನಿತ್ಯನೂತನವೆಂದು ತಮ್ಮ ಅನಿಸಿಕೆ ವ್ಯಕ್ತಪಡಿಸುವರು.

ಸರಸ್ವತಿದೇವಿಯವರು ತಮ್ಮ ಕೃತಿಗಳ ಮೂಲಕ ಸಮಾಜದಲ್ಲಿ ಮತ್ತು ಸಾಹಿತ್ಯದಲ್ಲಿ ಇಂದಿಗೂ ಜೀವಂತವಾಗಿದ್ದಾರೆ.


ಅಲ್ಪ ವಿರಾಮ
ಸೀತಾ ಸ್ವೀಕಾರ ? ಸೀತಾ ಪರಿತ್ಯಾಗ

ಅಧ್ಯಾಯ ೩

ಸರಸ್ವತಿ ದೇವಿಯವರ ಕಥೆಗಳು

ಸರಸ್ವತಿ ದೇವಿಯವರು ಒಬ್ಬ ಸೃಜನಾತ್ಮಕ ಕಥೆಗಾರರು. ಒಟ್ಟಾರೆಯಾಗಿ ಅವರ ೨೩ ಕಥೆಗಳು ಲಭ್ಯವಾಗಿವೆ. ೧೯೪೨ ರಲ್ಲಿ ಮೊದಲ ಕಥೆ ಪ್ರಕಟವಾಯಿತು. ೧೯೫೮ ರಲ್ಲಿ ' ಅಲ್ಪವಿರಾಮ ಮತ್ತು ೧೯೭೨ ರಲ್ಲಿ 'ಪುಣ್ಯಸ್ಮೃತಿ' ಸಂಕಲನಗಳು ಬಿಡುಗಡೆಗೊಂಡಿವೆ. ಪ್ರತಿಯೊಂದರಲ್ಲೂ ತಲಾ ಹತ್ತು ಕಥೆಗಳಿದ್ದು ೩ ಕಥೆಗಳು ಸಂಕಲನದಾಚೆಗೆ ಉಳಿದಿವೆ. ಉಷಾ, ಜಯಕರ್ನಾಟಕ, ಸೋದರಿ ಮೊದಲಾದ ಪತ್ರಿಕೆಗಳಲ್ಲಿ ಸರಸ್ವತಿ ದೇವಿಯವರ ಕಥೆಗಳು ಪ್ರಕಟವಾಗಿವೆ. ಅವರ ಸಾಹಿತ್ಯವನ್ನು ವಿಜಯಾ ದಬ್ಬೆ ಯವರು 'ಸಾರಸ್ವತಿ'ಯಲ್ಲಿ (೧೯೬೯) ಸಂಪಾದಿಸಿದ್ದಾರೆ. ಅದಕ್ಕಾಗಿ ನಾವೆಲ್ಲ ವಿಜಯಾ ದಬ್ಬೆಯವರಿಗೆ ಋಣಿಯಾಗಿದ್ದೇವೆ.

ಅವರ ಮೊದಲ ಕಥಾ ಸಂಕಲನ ' ಅಲ್ಪವಿರಾಮ'. ಅದರ ಮುನ್ನುಡಿಯಲ್ಲಿ ಶೀರ್ಷಿಕೆಯ ಕುರಿತು ಹೀಗೆ ಹೇಳುವರು. " ಕಥೆಗಳನ್ನು ಬರೆದ ಉದ್ದೇಶ ಕೇವಲ ಓದುಗರ ಮನರಂಜನೆಯೊಂದೇ ಆಗಿಲ್ಲ. ಓದಿದ ಮೇಲೆ 'ಅಲ್ಪವಿರಾಮ' ಕೊಟ್ಟು ತಮ್ಮ ಮನಸ್ಸಿನ ಪ್ರತಿಕ್ರಿಯೆಗಳಿಗೆ ಅವರು ಚಾಲನೆ ಕೊಡಲೆಂಬುದೂ ಆಗಿದೆ. ಒಂದು ಕಥೆಯನ್ನು ಮುಗಿಸಿ ಇನ್ನೊಂದು ಓದಲು ಆರಂಭಿಸುವ ಮೊದಲು 'ಅಲ್ಪವಿರಾಮ' ಬೇಕು. ಕಥೆ ಹೀಗೆ ದುರಂತವಾಗದೇ, ದುಃಖ ಪೂರ್ಣವಾಗದೇ, ಸುಖಾಂತವಾಗಿ ಸರಸದಲ್ಲಿ ಕೊನೆಗೊಳ್ಳಬೇಕಾದರೆ ಹೇಗಾಗಬೇಕಿತ್ತು. ಎನ್ನುವುದನ್ನು ಪರ್ಯಾಯಲೋಚಿಸಲು ' ಅಲ್ಪವಿರಾಮ' ಬೇಕು. ಇಂದಾದುದೇ ಮುಂದು ಆಗಬಾರದು; ಆದ್ದರಿಂದ ಮುಂದೆ ಬರುವವರಿಗಾಗಿ ಎಚ್ಚರಿಕೆಯ ಕೆಂಪು ದೀಪವನ್ನು ಎಲ್ಲಿ ಹಚ್ಚಿಡಬೇಕಾದೀತು. ಎಂದು ನಿರ್ಧರಿಸಲು 'ಅಲ್ಪವಿರಾಮ' ಬೇಕು. ಇದು ಲೇಖಕಿಯ ಎಲ್ಲಾ ಕಥೆಗಳ ಆಶಯವಾಗಿದೆ.

ಇನ್ನೊಂದು ಆಸಕ್ತಿಯ ವಿಷಯವೆಂದರೆ ಅವರ ಮೊದಲ ಸಂಕಲನ 'ಅಲ್ಪವಿರಾಮ' ದ ಮುಖಪುಟದ ಬಗ್ಗೆಯೂ ಕಾಳಜಿ ವಹಿಸಿರುವುದನ್ನು ನಾವು ಗಮನಿಸಬಹುದು. ಅವರದೇ ಮಾತುಗಳಲ್ಲಿ ಹೇಳುವುದಾದದರೆ "ಅಗ್ನಿ ಸಾಕ್ಷಿಯಾಗಿ ಕೈಹಿಡಿದ ಸೀತೆಯನ್ನು, ಅಗ್ನಿ ದಿವ್ಯ ಮಾಡಿ ಸ್ವೀಕರಿಸಿದ. ಸೀತೆಯನ್ನು ಶ್ರೀರಾಮ ಮತ್ತೇ ತ್ಯಜಿಸಿದನು........ ಶ್ರೀರಾಮನಿಗಾಗಿ ಸೀತೆ ರಾಜ್ಯಭೋಗವನ್ನು ತೊರೆದಳು ಆದರೆ ಅದೇ ರಾಜ್ಯಕ್ಕಾಗಿ ಶ್ರೀರಾಮ ಸೀತೆಯನ್ನೇ ತೊರೆದು ಬಿಟ್ಟ .... ಆದಿಕಾವ್ಯ ರಾಮಾಯಣದಿಂದಲೇ ಹೆಣ್ಣಿನ ಬಾಳಿನ ಗೋಳಿನ ಕಥೆ ಮೊದಲಾಗಿದೆ. ಅದು 'ಅಲ್ಪವಿರಾಮದ ಕಥೆಗಳಲ್ಲೂ ಇದೇ ಪರಂಪರೆ ಮುಂದುವರೆದು ಬಂದಿರುವುದನ್ನು ನಾವು ಕಾಣುತ್ತೇವೆ". ಎನ್ನುವ ಲೇಖಕಿಯೂ ರಕ್ಷಾ ಪಥದ ಮೇಲೆ ಸೀತಾಸ್ವೀಕಾರ ? ಸೀತಾ ಪರಿತ್ಯಾಗದ ಚಿತ್ರವನ್ನು ನೀಡಿ ಓದುಗರನ್ನು ವಿಚಾರ ಮಾಡಲು ಆಹ್ವಾನಿಸಿದ್ದಾರೆ.

ಇವರ ಕಥೆಗಳು ಸ್ತ್ರೀ ಕೇಂದ್ರತವಾಗಿದ್ದು, ಮಹಿಳೆಯರ ನೋವು, ಮರುಮದುವೆ, ಪರಿತ್ಯಕ್ತ ಜೀವನ, ವಿಧವೆಯರ ಬದುಕು ಇವುಗಳನ್ನು ಕುರಿತಾಗಿದೆ. ಮಹಿಳೆಯ ನೋವುಗಳೆಲ್ಲಾ ನೀಗಿ ಸಮಾಜದಲ್ಲಿ ಒಂದು ಉತ್ತಮ ಸ್ಥಾನ ದೊರೆಯಬೇಕು. ಅದಕ್ಕೆ ಕಾಯಿದೆ ಕಾನೂನುಗಳ ಸಹಾಯ ಬೇಕು. ಆದರೆ ಅದಕ್ಕಿಂತ ಹೆಚ್ಚಾಗಿ ಹೃದಯ ಪರಿವರ್ತನೆಯಾಗಬೇಕು. ಎಂಬ ಆಶಯ ಲೇಖಕಿಯದಾಗಿದೆ.

ಅವರು ಬರೆದ ಕಥೆಗಳು ಕೇವಲ ರಸಾನುಭವಕ್ಕಲ್ಲ, ' ಬರೆದು ಪುಟ ತುಂಬಿಸುವ ಹವ್ಯಾಸ ಎನಗಿಲ್ಲ' ಇಲ್ಲಿಯ ಪಾತ್ರಗಳು ಅಪ್ಪಟ ವಾಸ್ತವ ಬದುಕಿನವು ಎಂದು ಲೇಖಕಿಯೇ ಹೇಳಿಕೊಂಡಿದ್ದಾರೆ. ಈ ಅಧ್ಯಾಯದಲ್ಲಿ ಅವರ ಪ್ರಮುಖ ಕಥೆಗಳ ಕುರಿತು ಚರ್ಚಿಸಲಾಗಿದೆ.

೧] ಒಂದು ಸಮಸ್ಯೆ

ಕತೆಯಲ್ಲಿ ನಿರೂಪಕಿಯು ರಜೆಯನ್ನು ಕಳೆಯಲು ತನ್ನ ತಮ್ಮನೊಂದಿಗೆ ಚಿಕ್ಕಣ್ಣ ಊರಿಗೆ ಹೋಗುವರು. ಎಲ್ಲ ಮಕ್ಕಳಂತೆ ಇವರು ರಜೆಯ ಸಂತೋಷದಿಂದ ಕಳೆದರು. ನಡೆದ ಒಂದು ಘಟನೆಯಿಂದ ಅವರ ಮನಸ್ಸು ಅವರನ್ನು ಚಿಂತೆಗೀಡುಮಾಡಿತು. ಮಧ್ಯಮ ವರ್ಗದ ಚಿಕ್ಕಣ್ಣ ದಂಪತಿ ಮತ್ತು ಕೂಲಿಯಾಳು ದಂಪತಿಗಳನ್ನು ತುಲನೆ ಮಾಡಿ ನೋಡುವದು. ಕೊನೆಗೆ ಆರ್ಥಿಕ ಸಮಾನತೆಯನ್ನು ಇದಕ್ಕೆ ಕಾರಣವೆಂಬ ನಿರ್ಧಾರಕ್ಕೆ ಬಂದರು. ಇಂತಹ ಆಲೋಚನೆಗಳು ರಜೆಯ ಮಜವನ್ನು ಅನುಭವಿಸಿ ಬರುವ ಬೇರೆ ಮಕ್ಕಳಿಗೆ ಎಷ್ಟು ಸಾಧ್ಯ? ಇದು ಸರಸ್ವತಿಯವರಲ್ಲಿ ಸಾಧ್ಯವಾಗಿದೆ.

'ಇಂದು ಮೇಲಿನವರ್ಗದಲ್ಲಿ ಅದರಲ್ಲಿಯೂ ಮಧ್ಯಮ ವರ್ಗದಲ್ಲಿ ವಿಶೇಷವಾಗಿ ಕಂಡು ಬರುವ ಅಸಮದಾಂಪತ್ಯಕ್ಕೆ ಕೃತ್ರಿಮ ಪ್ರೇಮಕ್ಕೆ, ವಿಷಯ ಸಂಸಾರಕ್ಕೆ, ಸ್ತ್ರೀಯರ ಆರ್ಥಿಕ ಪಾರತಂತ್ರ್ಯವೇ ಕಾರಣವೇ? ಆರ್ಥಿಕ ರೀತಿಯಿಂದ ಅವಳು ಸ್ವತಂತ್ರಳಾದರೆ ಈ ವ್ಯಾಧಿ ವಾಸಿಯಾಗಬಹುದೇ? ಅದೇ ನನಗೊಂದು ಸಮಸ್ಯೆಯಾಗಿದೆ. ಈ ರೀತಿಯಾಗಿ ವಿಚಾರಿಸುವ ಅವರು ತಮ್ಮ 'ಅಲ್ಪವಿರಾಮ'ದ ಮೊದಲ ಕಥೆಯಲ್ಲಿ ಇಂತಹ ಸಾರ್ವತ್ರಿಕ ಪ್ರಶ್ನೆಯನ್ನು ಎತ್ತಿಹಿಡಿದಿರುವದು. ಇದು ಇಂದಿಗೂ ಪ್ರಸ್ತುತವಾಗಿದೆ. ಮೊದಲ ತಲೆಮಾರಿನ ಲೇಖಕಿಯರಿಗಿಂತ ಇವರೆಷ್ಟು ಮುಂದು ಮತ್ತು ಭಿನ್ನ ಎನ್ನುವುದು ಸಾಬೀತಾಗುತ್ತದೆ.

೨] **'ಸತಿ'**

ಈ ಕಥೆಯಲ್ಲಿ ಲೇಖಕಿಯ ಬಾಲ್ಯದ ಗೆಳತಿ ಸೀತೆ ಅನ್ಯಾಯವಾಗಿ ಮೈದುನನಿಂದ ಅತ್ಯಾಚಾರಕ್ಕೊಳಗಾಗದಳು. ಈ ಸುದ್ದಿ ತಿಳಿದರೂ ಗಂಡನಿಂದ ಯಾವ ಬೆಂಬಲವೂ ಅವಳಿಗೆ ದೊರೆಯಲಿಲ್ಲ. ವಕೀಲರಾಗಿದ್ದ ಮೈದುನ ಇಷ್ಟಾದ ಮೇಲೂ ಸಮಾಜದಲ್ಲಿ ಗೌರವದಿಂದ ಮೆರೆಯುತ್ತಿದ್ದ. ಕಂಗಾಲಾಗಿ ವ್ಯಥೆಪಟ್ಟವಳು ಸೀತೆ. ಪರಿಸ್ಥಿತಿಯನ್ನು ಎದುರಿಸಲಾರದೇ ದಾರಿ ಕಾಣದೆ ಸಾವಿಗೆ ಶರಣಾದಳು. ಅಕಾಲದಲ್ಲಿ ಕಾಲನ ಬಾಯಿಗೆ ತುತ್ತಾದ ಬಾಲ್ಯ ಸಖಿಯನ್ನು ಕಂಡು 'ಸುಖವಿಲ್ಲದ ಹೆಣ್ಣಿನ ದು:ಖಾರ್ತ ಜೀವನಕ್ಕೆ ಸುಖಮರಣವಾದರೂ ದೊರೆಯದೇ ಇರಬೇಕೆ? ಪ್ರತ್ರಿಕ್ಷಣದಲ್ಲಿಯೇ ನರನಾಡಿಗಳಲ್ಲಿ ವಿದ್ರೋಹದ ಕೆನ್ನೀರು ಹರಿಯುತ್ತಿದ್ದ ನನ್ನ ಹೃದಯ ಸಿಂಹಿಣಿಯು ಗರ್ಜಿಸಿದಳು – 'ಮಿಡುಕಾಡಿದರೆ ಸಿಗುವದಿಲ್ಲ ಸುಖಮರಣ, ಸಾವಿನ ಅಂಜಿಕೆಯನ್ನು ಕಳೆದುಕೊಂಡು ಸತೀತ್ವದ ಪೂಜೆ ಮಾಡಲು ಹೆಣಗುವವರಿಗೆ ಸುಖಮರಣವೇ? ಸುಖಮರಣ ಬೇಕಾಗಿದ್ದರೆ ಪ್ರಬಲರಾಗಿದ್ದು ಪ್ರತಿಭಟಿಸಿ ನಿಂತು ಪರಿಸ್ಥಿತಿಯನ್ನು ಪರಿವರ್ತಿಸಲು ಪ್ರಯತ್ನ ಮಾಡಿರಿ' ಎಂದು ಹೇಳುವರು. ('ಅಲ್ಪವಿರಾಮ ಪು.ಸಂ.೩೨)

ಸೀತೆಯ ಚಿತೆಯೆದುರು ನಿಂತಾಗ – 'ಸತಿ ಸೀತಾ! ಸತೀತ್ವದ ಸಂರಕ್ಷಣೆಗಾಗಿ ಚಿತೆಯನ್ನೇರಿದ ಸತಿಯೇ! ನಿನಗೆ ವಂದನೆಗಳು. ನಿನ್ನ ಅಕ್ಕ ತಂಗಿಯರು ಈ ಉದಾತ್ತ ಆದರ್ಶವನ್ನು ತಮ್ಮ ಕಣ್ಣ ಮುಂದೆ ಇಟ್ಟುಕೊಳ್ಳಲಿ. ಅಪಾತ್ರನ ಕೈಗೆ ಬಿದ್ದು ಅಕಾಲ ಮೃತ್ಯುವಿಗೀಡಾದ ಸುಮಂಗಲೆಯೇ! ನಿನ್ನ ಪಾತಿವ್ರತ್ಯ ಭಾರತೀಯ ಮಂಗಳಾಂಗಿಯರ ಮನದೆದರು ನಿಚ್ಚಳವಾಗಿರಲಿ. ಆದರೆ ಪಾಲಿಗೆ ಬಂದದ್ದು ಪಂಚಾಮೃತವೆನ್ನುವುದಕ್ಕಿಂತ ಪಾಲಿಗೆ ಬರಬೇಕಾದದ್ದು ಪಂಚಾಮೃತವೆಂದು ಪತಿ ವರಣದ ಹಕ್ಕನ್ನು ದಕ್ಕಿಸಿಕೊಳ್ಳುವಂತೆ ನಿನ್ನೀ ದುರಂತ ಚಿತ್ರದಿಂದ ಅವರ ಧೈರ್ಯ ಮೂರ್ತಿಯನ್ನು ಚಿತ್ರಿಸು'. (ಪೇಜ ನಂ.೩೩ ಸತಿ)– ಹೀಗೆನ್ನುವ ಲೇಖಕಿಯ ದೃಷ್ಟಿ ಸ್ಪಷ್ಟ.

೩] **ಅವಳು ವಿದವೆ–**

ಈ ಕಥೆಯಲ್ಲಿ ಅಂದಿನ ಕಾಲದಲ್ಲಿ ನರಳುತ್ತಿದ್ದ ವಿಧವೆಯರ ಕರಾಳ ಬದುಕಿನ ಚಿತ್ರಣ ರಚಿಸಲ್ಪಟ್ಟಿದೆ. ವಿಧವೆ ಗಂಗಮ್ಮ ತನ್ನದಲ್ಲದ ತಪ್ಪಿಗೆ ವಂಚಿತಳಾಗಿ ಅತ್ತೆಯ ಮನೆಯವರಿಂದ ಜೀವನಾಂಶವನ್ನು ವರುಷಕ್ಕೊಮ್ಮೆ ಪಡೆಯುತ್ತಿದ್ದಳು.

ತುಸು ಕಪ್ಪಗಿರುವ ಗಂಗಮ್ಮನಿಗೆ ಬೇಗ ಗಂಡು ಹೊಂದಿ ಮದುವೆಯಾಗಲಿಲ್ಲ. ಬೇಸತ್ತ ಆಕೆಯ ತಂದೆಯೂ ಬೇರೆ ಕನ್ಯೆಯನ್ನು ತೋರಿಸಿ ಮದುವೆಗೆ ಸಿದ್ಧತೆ ಮಾಡಿದನು. ಇದನ್ನು ತಿಳಿದ ವರನು ಹಸೆಮಣೆಯಿಂದ ಮೇಲೇಳಲು ಯತ್ನಿಸಿದಾಗ ಹಿರಿಯರು 'ನಮ್ಮ ಗೌರವಕ್ಕೆ ದಕ್ಕೆ ಸುಮ್ಮನಿರು' ಎಂದರು. ತುಸು ದಿನಗಳಲ್ಲಿಯೇ ಅವನು ಕಾಲವಾದನು. ನಂತರ ಗಂಗಮ್ಮ ಗಂಡನ ಮನೆಯಲ್ಲಿಯ ಸ್ಥಾನ ಕಳೆದುಕೊಂಡಳು ಅಂದಿನಿಂದ ಪ್ರತಿ ವರ್ಷಕ್ಕೊಂದು ಸಾರಿ ಬಾಗಿಲನಾಚೆ ನಿಂತು ಜೀವನಾಂಶ ಪಡೆಯುವ ಬೇರೆಯವರಿಂದ ತುಚ್ಛವಾಗಿ ಕಾಣಿಸಿಕೊಳ್ಳುವ ವಿಧವೆ ಗಂಗಮ್ಮನಿಗೆ ಗಂಡನಿದ್ದರೆ ಈ ರೀತಿ ತನ್ನ ಮನೆಯಲ್ಲಿಯೇ ತಾನು ತಿರಪೆಯವರಂತೆ ಬಂದು ಹೋಗಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ. ಒಂದು ವೇಳೆ ಗಂಗಮ್ಮ ಸತ್ತಿದ್ದರೆ ಮಗನಿಗೆ ಸಂಭ್ರಮದಿಂದ ಇನ್ನೊಂದು ಮದುವೆ ಮಾಡುತ್ತಿದ್ದರು. 'ಸೊಸೆ ಸತ್ತ ಮನೆಯಲ್ಲಿ ಸೋಬಾನ ಮಗ ಸತ್ತ ಮನೆ ಮಸಣ' – ಇಂತಹ ಹೀನಾಯ ಬದುಕು ವಿಧವೆಯರದಾಗಿತ್ತು ವಿಷಮ ವಿವಾಹ ಹಿಂದೂ ಮಹಿಳೆಯ ಜೀವನವನ್ನು ಹಿಂಡಿ ಹಿಪ್ಪೆ ಮಾಡಿದ್ದಲ್ಲದೇ ಮತಿಭ್ರಾಂತಗಳಾಗುವಂತೆ ಮಾಡಿದೆ.

೪] **ಸೌಭಾಗ್ಯವತಿ –**

ಶಾಂತಮ್ಮನ ತಂದೆ ಒಬ್ಬ ಬಡ ಶಿಕ್ಷಕರಾದರೂ ಮುಂದು ವರೆದ ಸಮಾಜದವರು ಹೊಸ ಯುಗದಲ್ಲಿ ಕಾಲ ಕಳೆಯುತ್ತಿದ್ದರು ಹಳೆಯ ವಿಚಾರದವರು ೮ ವರ್ಷಕ್ಕೆ ಲಗ್ನವಾಗುವ ಬದಲಾಗಿ ೧೪ ವರ್ಷಗಳವರೆಗೆ ಕಾಯಿದೆಯ ಭಯದಿಂದ ತುಂಬ ಪ್ರಯತ್ನಿಸಿ ತಮ್ಮ ಅಂತಸ್ಥಿಗೆ ಮೀರಿದ ವರನೊಂದಿಗೆ ಮದುವೆ ಮಾಡಿದರು. ವರೋಪಚಾರ ಬಾಕಿ ಉಳಿಯಿತು. ಮುಂದೆ ಮೂರು ತಿಂಗಳಲ್ಲಿ ಮನೆಯ ಯಜಮಾನನ ತಂದೆ ತೀರಿದುದರಿಂದ ವರೋಪಚಾರ ಉಳಿಯಿತು. ನಂತರ ಅವರು ಶಾಂತಮ್ಮನ ಗಂಡನಿಗೆ ಬೇರೆ ಮದುವೆ ಮಾಡಿದರು. ಅಸಹಾಯಕಳಾದ ಶಾಂತಮ್ಮ ಅಕ್ಕನ ಸಹಾಯದಿಂದ ಸ್ವಲ್ಪ ಮಟ್ಟಿಗೆ ಓದಿಕೊಂಡಳು.

ನಂತರ ಶಿಕ್ಷಣ ಪಡೆದು ಶಿಕ್ಷಕಿಯಾಗಿ ಬಾಳ ಬಂಡಿ ಸಾಗಿಸುತ್ತಿಸದ್ದಾಳೆ ಅವಳ ಸ್ಥಿತಿಯನ್ನು ಲೇಖಕಿಯು ಈ ರೀತಿ–"ಕೊರಳಲ್ಲಿಯ ಕರಿಮಣಿ, ಹಣೆಯ ಮೇಲೆ ಕುಂಕುಮ ಬೊಟ್ಟನ್ನು, ನೋಡಿ ಇವಳಗೆ ಸೌಭಾಗ್ಯವತಿಯನ್ನಬೇಕೇ ಹೊರತು ಬೇರೇನು? ನ್ಯಾಯ ವಿಧಾನವನ್ನು ಕಾಲ ಕೆಳಗೆ ಹಾಕಿ ಅಹಂಮನ್ಯತೆಯಿಂದ ತಲೆಯೆತ್ತಿ ಮೆರೆಯುವ ಹಿಂದೂ ಸಮಾಜ! ಈ ದುರ್ಭಾಗ್ಯ ಸೌಭಾಗ್ಯವತಿಯರ ಹಣೆಗೆ ಅದು

ಹಚ್ಚಿರುವುದು ಕುಂಕುಮ ತಿಲಕವಲ್ಲ; ಕೊಲೆಯ ರಕ್ತದ ಬೊಟ್ಟು, ಕೊರಳಿಗೆ ಕಟ್ಟಿದುದು ಮಾಂಗಲ್ಯ ಸೂತ್ರವಲ್ಲ: ಕಾಲನ ಕರಾಳಪಾಶ. ಆದರೆ ಪೂರ್ವ ಸಂಸ್ಕಾರಗಳ ಅಚ್ಚೊತ್ತಿ ಹೋಗಿರುವ ಹಿಂದೂ ರಮಣಿಯರ ನಿಚ್ಚಳ ಹೃದಯ ದುಃಖದ ಮಡುವಿನಲ್ಲಿ ಮುಳುಗೇಳುವಾಗಲೂ ಆ ವಸ್ತುಗಳನ್ನು ಅಶುಭವೆಂದು ತಿಳಿಯಲಾರರು" ಎಂದಿದ್ದಾರೆ. ಶಾಂತಮ್ಮನಂತಹ ಅದೆಷ್ಟೋ ಹೆಣ್ಣು ಮಕ್ಕಳು ನಮ್ಮ ಸಮಾಜದಲ್ಲಿ ಇದ್ದಾರೆ. ಅಂತಹವರ ಬದುಕಿನಿಂದ ನೊಂದು ಪರಿಹಾರವೇನು ಎಂದು ಯೋಚಿಸುತ್ತಾ ಕಥೆಯನ್ನಾಗಿ ನಿರೂಪಿಸಿದ್ದಾರೆ.

೫] ಆಹುತಿ

ಕಥಾ ನಾಯಕಿ ಸರೋಜಿನಿ ಇಷ್ಟವಿಲ್ಲದ ಮದುವೆಯ ಸಿದ್ಧತೆ ನಡೆಯಿತು. ಎದುರಿಸಲಾಗದೇ ಅವಳು, ಅವಳ ಇಷ್ಟವರಿಯದ ಪಾಲಕರು ಮದುವೆಯ ಶಾಸ್ತ್ರಗಳನ್ನೆಲ್ಲಾ ಮುಗಿಸುತ್ತಿದ್ದರು. ತನ್ನ ಕೋಣೆಯಲ್ಲಿ ಅವಳು ಸಾವಿಗೆ ಶರಣಾದಳು. ಮದುವೆಯ ದಿನವೇ ಅವಳ ಮರಣಯಾತ್ರೆ ಜರುಗಿತು. ಮಗಳ ಮನಸ್ಸನ್ನು ಅಂತರಂಗವನ್ನು ಅರಿಯದೆ ತಂದೆಯು ಅವಳಿಗೊಂದು ಮದುವೆ ಮಾಡಿಸಿ ತನ್ನ ಭಾರವನ್ನು ಕಡಿಮೆ ಮಾಡಿಸಿಕೊಳ್ಳಲು ಯತ್ನಿಸಿದನು. ಮರುದಿನ ಮದುವೆ ಮುಹೂರ್ತದ ಹೊತ್ತಿಗೆ ಅವಳ ಸ್ಮಶಾನ ಯಾತ್ರೆ ಹೊರಟಿತು.

ಲೇಖಕಿಯು 'ಸರೋಜಿನಿಯ ಬಾಳು ಯಾವ ರೀತಿ ರೂಪಗೊಳ್ಳುತ್ತಿತ್ತೋ ಆದರೆ ಸಂಪ್ರದಾಯ ಪ್ರಿಯವಾದ ಸಮಾಜ ತನ್ನ ಅಂಕೆ ಮೀರಿದ ತಪ್ಪಿಗಾಗಿ ಅವಳ ಪ್ರಾಣಾಹುತಿ ತೆಗೆದುಕೊಂಡಿತು. ಇದಕ್ಕಿಂತ ಹೆಚ್ಚಿನ ಅಧಃಪತನ ಇನ್ನೊಂದಿದೆಯೇ?'ಎಂದು ಪ್ರಶ್ನೆಗೈಯುವರು.

೬] ಅಕ್ಕತಂಗಿ

ರಾಜಶೇಖರ ಗೌಡರರು ಊರ ಜನರ, ಸುತ್ತು ಹಳ್ಳಿಯ ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿದವರು. ಊರಿಗೆ ಬಂದ ಮಹಾಮಾರಿ ಪ್ಲೇಗ್ ಅವರನ್ನು ಬಲಿತೆಗೆದುಕೊಂಡಿತು. ಪತಿಯ ಅಗಲಿಕೆಯಿಂದ ನೊಂದು ಬೆಂದ ಪತ್ನಿಯು ವರ್ಷ ತುಂಬುವುದರೊಳಗಾಗಿ ಪತಿಯ ಪಾದ ಸೇರಿದಳು. ಅವರ ಮಗ ಈರಣ್ಣನನ್ನು ಗೌಡರ ತಮ್ಮ ಸೋಮಶೇಖರ ಮತ್ತು ಅವರ ಪತ್ನಿ, ಅವರ ಅಮ್ಮನವರು ಬಲು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಮುಂದೆ ಸೋಮಗೌಡರಿಗೆ ಒಂದು ಮಗುವಾಗಲು ಚಿಕ್ಕಮ್ಮನ

ಲಕ್ಷ್ಯವೆಲ್ಲಾ ಮಗು ಚಂದ್ರಣ್ಣನ ಲಾಲನೆ-ಪಾಲನೆಯಲ್ಲಿ ತೊಡಗಿದಾಗ ಈಶಣ್ಣ ಒಂಟಿತನವನ್ನು ಅನುಭವಿಸಿದನು. ಅಜ್ಜಿಯೂ ತೀರಿಕೊಂಡಳು ಹೀಗೆ ತೀರ ಒಂಟಿ ತನವನ್ನು ಅನುಭವಿಸುತ್ತಾ ಅವನ ಸ್ವಭಾವದಲ್ಲಿ ಮೆಲ್ಲನೆ ಮಾರ್ಪಾಡುಗಳುಂಟಾಗಿ ಯಾರ ಮಾತಿಗೂ ಮಣಿಯದಂತಾದಾಗ ಅವನನ್ನು ಆಶ್ರಮದಲ್ಲಿ ಇಟ್ಟರು. ಕ್ರಮೇಣ ಮನ ಪರಿವರ್ತನೆಯಾಗಿ ಸದ್ಗುಣಿಯಾದನು. ವಿಧ್ಯಾಭ್ಯಾಸಕ್ಕೆಂದು ಗೌಡರು ತಮ್ಮ ಮಗ ಚಂದ್ರಣ್ಣನ್ನು ಪಟ್ಟಣದಲ್ಲಿಟ್ಟರು. ಮೊದಲೇ ಸ್ವೇಚ್ಛೆಯಿಂದ ಬೆಳೆದಿದ್ದ ಅವನಿಗೆ ಪಟ್ಟಣದ ಗಾಳಿಯಿಂದ ಇನ್ನಷ್ಟು ಮೊಂಡಾದನು. ವಿಧ್ಯಾಭ್ಯಾಸಕ್ಕಿಂತ ಪಟ್ಟಣದ ಬೆಡಗು ಬಿನ್ನಾಣಗಳಲ್ಲಿ ಅವನ ದಿನಗಳುರುಳ ತೊಡಗಿದವು. ಒಂದೆ ಮನೆಯಲ್ಲಿ ಹುಟ್ಟಿದ ಅಣ್ಣ-ತಮ್ಮಂದಿರಾದರೂ ಪರಿಸ್ಥಿತಿಯ ಸೆಳವಿಗೆ ಸಿಕ್ಕು ತೀರ ಬಿನ್ನವಾದ ವ್ಯಕ್ತಿತ್ವ ಅವರಲ್ಲಿ ರೂಪುಗೊಂಡಿತು.

ಗೌಡರ ತಂಗಿಯ ಮಗಳು ಗಿರಿಜೆಯೊಂದಿಗೆ ಈರಣ್ಣನ ಮದುವೆ ಆಯಿತು. ಅಚ್ಚುಕಟ್ಟಾದ ಸಂಸಾರ ಇವರದಾಗಿತ್ತು. ಮುಂದೆ ಇವಳ ತಂಗಿಯಾದ ಸುಶೀಲೆಯೊಂದಿಗೆ ಚಂದ್ರಣ್ಣನ ವಿವಾಹಿತವಯಿತಾದರೂ, ಚಿಕ್ಕಮ್ಮ ತನ್ನ ನಿಜವಾದ ಸೊಸೆಗೆ ಅತಿಯಾದ ಪ್ರೀತಿ ತೋರಿ, ಕಾರಣವಿಲ್ಲದೆ ಜಗಳ ತೆಗೆಯುತ್ತಾ ಮಗನನ್ನು ಸಹ ಇಂತಹ ಕಾರಣಕ್ಕೆ ಹುರಿದುಂಬಿಸಿ ಅವರನ್ನು ಬೇರೆ ಬೇರೆ ಮಾಡಿದರು 'ಮನೆ ಬೇರೆ ಬೇರೆಯಾದ ಕ್ಷಣ ಅಂಗಾಂಗಗಳಲ್ಲಿ ಹರಿಯುವ ರಕ್ತ ಬೇರೆಯಾಗಬಹುದೇ? ಒಳಗೆ ಮಿಡಿಯುವ ಕರುಳಿನ ಕರೆ ಬೇರೆಯಾಗಬಹುದೇ? ಎಂದು ಲೇಖಕಿಯು ಅಕ್ಕ ತಂಗಿಯರ ಅಂತರಂಗದ ಹೊಯ್ದಾಟವನ್ನು ಕಥೆಯಲ್ಲಿ ಕೇಳಿದ್ದಾರೆ.

೨] ನೀಲವ್ವನ ಕೆರೆ

ಇದೊಂದು ದೇಸಾಯರ ವಾಡೆಯಲ್ಲಿ ಹುಟ್ಟಿ ಬೆಳೆದ ಮೂರು ಮಂದಿ ಅಕ್ಕ ತಂಗಿಯರ ಕಥೆ

ನೀಲವ್ವ ಚೆನ್ನವ ಮತ್ತು ಸಂಕವ್ವ ಒಬ್ಬೊಬ್ಬರದು ಒಂದೊಂದು ರೀತಿಯ ಯಶೋಗಾಥೆ, ಸತ್ಯಕಥೆಯೂ ಹೌದು. ದೇಸಾಯರು ತಮ್ಮ ಮಗಳಾದ ನೀಲವ್ವಳನ್ನು ಐಶ್ವರ್ಯವಂತ ವರನೊಂದಿಗೆ ಮದುವೆ ಮಾಡಿದರು. ಎರಡು ಮಕ್ಕಳಾದವು ಗಂಡ ಮಕ್ಕಳೆಲ್ಲರೂ ತೀರಿಕೊಂಡರು. ಒಂದರ ನಂತರ ಮತ್ತೊಂದು ಘಟಿಸಿದ ನೋವಿನಿಂದ ನೊಂದು ಬೆಂದಳು. ಎರಡನೆಯ ಮಗಳು ಚೆನ್ನವ್ವ ಚಿಕ್ಕವಳಿರುವಾಗಲೇ

ಮದುವೆಯಾಯಿತು. ಮದುವೆಯಾದ ಮೂರು ತಿಂಗಳಲ್ಲಿ ಗಂಡನು ಸಿಡಿಲು ಬಡಿದು ಸತ್ತನು. ಅಕಾಲ ವೈಧವ್ಯ ಅವಳ ಪಾಲಿಗೆ ಅರಿಯದೆ ಬಂದಿತ್ತು.

ಮೂರನೆಯ ಮಗಳಾದ ಸಂಕವ್ವಳಿಗೆ ಮದುವೆಯಾಯಿತು, ಗಂಡ ಹೆಂಡತಿ ಅನೋನ್ಯದಿಂದ ಇದ್ದರು. ಆದರೆ ಮಕ್ಕಳಾಗಿರಲಿಲ್ಲ. ಮುಂದೆ ಇವಳೇ ಗಂಡನಿಗೆ ಬೇರೊಂದು ಮದುವೆ ಮಾಡಿದಳು. ಅವಳನ್ನು ತಂಗಿಯಂದೇ ಭಾವಿಸಿದಳು. ಆದರೆ ಸವತಿ ಸವತಿಯೇ ಆದಳು. ಅಣ್ಣನು ತಂಗಿಯರನ್ನು ತನ್ನ ಮನೆಗೆ ಕರೆತಂದು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಹಿರಿಯ ಅಕ್ಕ ನೀಲವ್ವಳಿಗೆ ತನ್ನ ಮತ್ತು ತಂಗಿಯರ ಸ್ಥಿತಿಯನ್ನು ನೆನೆಸಿಕೊಂಡು ಆಗಾಗ ವ್ಯಥೆ ಪಡುತ್ತಿದ್ದಳು. ದುಃಖ ದುಮ್ಮಾನಗಳನ್ನೆಲ್ಲಾ ಬದಿಗೊತ್ತಿ ಏನಾದರೂ ಸತ್ಕಾರ್ಯವನ್ನು ಮಾಡಬೇಕು. 'ತಲ್ಯಾಗ ಏನೇನೋ ವಿಚಾರ ಮೂರು ಸಂಸಾರ ಮೂರಾಬಟ್ಟಿ ಆದವು. ಜನ್ಮ ಇರೋದರಾಗ ಏನಾದರ ಒಂದು ಪುಣ್ಯದ ಕೆಲಸಾ ಮಾಡಿ ನಮ್ಮ ಹೆಸರ ಉಳಸಿ ಹೋಗಬೇಕು' ಎನ್ನುವುದು ನೀಲವ್ವಳ ಸಂಕಲ್ಪವಾಗಿತ್ತು. ತಮಗೇನು ಮಕ್ಕಳಿಲ್ಲ ಮರಿಗಳಿಲ್ಲ ಸತ್ತ ಮೇಲೆ ತಮ್ಮನ್ನು ನೆನೆಸುವವರು ಯಾರು? ಎಲ್ಲರೂ ಅಕ್ಕನ ಮಾತಿಗೆ ಒಪ್ಪಿದರು. ಒಬ್ಬೊಬ್ಬರ ಹತ್ತಿರ ೫-೬ ಸೇರು ಬಂಗಾರದ ಆಭರಣಗಳಿದ್ದವೂ ಎಲ್ಲವನ್ನು ಅಣ್ಣನಿಗೆ ಕೊಟ್ಟು ಬೆಂಬಲಕ್ಕೆ ತಾವು ನಿಂತರು. ಕೂಳಿಗೆ ಬರವಿಲ್ಲದಿದ್ದರು ನೀರಿಗೆ ಬರವಿದ್ದ ಪ್ರದೇಶ ನವಿಲುಗುಂದದಲ್ಲಿ ನೀರಿಗಾಗಿ ಕೆರೆಯೊಂದನ್ನು ಕಟ್ಟಿಸಿದರೆ ಜನರ ಹಸಿವು ಹಾಹಾಕಾರವನ್ನು ಶಮನಗೊಳಿಸಿದಂತಾಗುವುದೆಂದರು. ದೇಸಾಯರು ತಂಗಿಯರ ತ್ಯಾಗ, ಉದಾರತೆಗೆ ತಲೆ ದೂಗಿದರು. ಅದರಂತೆ ಜಲ ಶಿಲ್ಪ ವಿದ್ಯೆ ಬಲ್ಲ ತಜ್ಞರನ್ನು ಕರೆಯಿಸಿ ಕೆರೆಗಳನ್ನು ಕಟ್ಟುವ ಸ್ಥಳಗಳನ್ನು ನಿಶ್ಚಯಿಸಲಾಯಿತು. ೧] ಅಣ್ಣಿಗೇರಿಯ ದಾರಿಯಲ್ಲಿ ಚೆನ್ನವ್ವನ ಕೆರೆ ೨] ನವಿಲಗುಂದದ ಅಗಸೆಯಲ್ಲಿ ನೀಲವ್ವನ ಕೆರೆ ೩] ಊರ ಆಚೆಯ ತುದಿಗೆ ಸಂಕವ್ವನ ಬಾವಿಯನ್ನು ನಿರ್ಮಿಸಿದರು. ನೀರು ಬಂದಿತು ವಿಜೃಂಭಣೆಯಿಂದ ಗಂಗಾಪೂಜೆ, ಜಂಗಮರಾಧನೆ ನಡೆಯಿತು. ಊರ ಜನರೆಲ್ಲ ಉಂಡುಟ್ಟು ನಲಿದರು.

ಇಂದಿಗೂ ನಾವು ಚೆನ್ನವ್ವನ ಕೆರೆ, ನೀಲವ್ವನ ಕೆರೆ, ಸಂಕವ್ವನ ಭಾವಿಯನ್ನು ಕಾಣುತ್ತೇವೆ. ಅವರು ಬಯಸಿದಂತೆ ನಾಲ್ಕು ಜನರೂ ಜನರ ಬಾಯಿಯಲ್ಲಿ ಇಂದಿಗೂ ಜೀವಂತವಾಗಿದ್ದಾರೆ. ನೀಲವ್ವನ ಕೆರೆಯಂತೂ ಜೀರ್ಣೋದ್ದಾರಗೊಂಡು ಸುತ್ತು ದಂಡೆಯನ್ನೆಲ್ಲಾ ಕಲ್ಲಿನಿಂದ ಕಟ್ಟಿದ್ದಾರೆ. ಮಹಾದ್ವಾರದ ಮೇಲೆ ನೀಲವ್ವನ ಹೆಸರು ಕೆತ್ತಲಾಗಿದೆ.

೮] ಯಜ್ಞ ಕುಂಡ

ಈ ಕತೆಯಲ್ಲಿ ನಾಯಕಿ ಮಹಾದೇವಿಯ ಅಂತರಾಳದ ತೊಳಲಾಟ ಅಸಹಾಯಕತೆ ತುಂಬಿದೆ ಯುಗಾದಿ ಹಬ್ಬಕ್ಕೆಂದು ಬಂದ ಅವಳು "ತನ್ನವರು" ಹಬ್ಬಕ್ಕೆ ಬಾರದಕ್ಕಾಗಿ ಒಳಗೊಳಗೆ ಶೋಕಿಸುವಳು. ಬಾಲಚಂದ್ರನ ಕೈಹಿಡಿದವಳು ಅವನ ಮನೆಗೆ ಭಾಗ್ಯಲಕ್ಷ್ಮೀಯಾಗಿ ಬಂದಳು. ಅದೃಷ್ಟ ತೆರೆಯಿತು ಒಳ್ಳೆಯ ವ್ಯಾಪಾರಿ ಸಂಸ್ಥೆಯಲ್ಲಿ ಗಂಡನಿಗೆ ಪಾಲುಗಾರಿಕೆ ದೊರೆಯಿತು. ದಿನದಿಂದ ದಿನಕ್ಕೆ ಅಳಿಯ ಬೆಳೆದು ಶ್ರೀಮಂತನಾದನು. ದೇಶದೆಲ್ಲೆಡೆ ಮಹಾಚುನಾವಣೆಗಳು ಜರುಗಿದ ಸಮಯವದು. ತನ್ನ ಸಂಸ್ಥೆಯ ಮುಖ್ಯಸ್ಥನಿಗೆ ಬೆಂಗಾವಲಾಗಿ ಬಾಲಚಂದ್ರ ನಿಂತನು. ಪ್ರತಿಪಕ್ಷದ ಪರವಾಗಿ ಹೆಣ್ಣು ಕೊಟ್ಟ ಮಾವನು ಪ್ರಚಾರಕ್ಕೆ ಇಳಿದರು. ಉಪ್ಪುಂಡ ಋಣಕ್ಕೋಸ್ಕರ ಬಾಲಚಂದ್ರನು ಅಲ್ಲಿಂದ ಹಿಂದೆ ಸರಿಯಲಿಲ್ಲ. ಪುಟ್ಟಪ್ಪನವರು ಅಳಿಯನಿಗೆ ಹಿಂದೆ ಸರಿಯಲು ಒಂದಲ್ಲ ಹತ್ತು ಸಾರೇ ಹೇಳಿದರೂ ಕೊಟ್ಟ ಮಾತಿಗೆ ತಪ್ಪಲಾರೆನೆಂದು ಅಳಿಯ ಖಡಾಖಂಡಿತವಾಗಿ ತಿರಸ್ಕರಿಸಿದನು. ಅಳಿಯನ ಸಂಸ್ಥೆಯ ಪಾಲುಗಾರಿಕೆದಾರ ವಿಜಯಿಯಾದನು. ಚುನಾವಣೆಯ ಈ ಪರಿಣಾಮದಿಂದ ಮಾವ-ಅಳಿಯನ ವೈಮನಸ್ಸಿನ ಬೀಜ ಬೃಹದಾಕಾರವಾಯಿತು. ಆದರೆ ಆ 'ಅಗ್ನಿಕುಂಡ' ದಲ್ಲಿ ಮಗಳು ಮತ್ತು ಇತರರು ಬೆಂದರು. 'ಗಂಡಿನಂತೆ ಹೆಣ್ಣಿಗೆ ಕರುಳಿನ ಕರೆ ಒಂದೇ ಆಗಿಲ್ಲ ಹುಟ್ಟಿ ಹೊಂದಿದ, ಕೊಟ್ಟುಕೊಂಡ ಎರಡೂ ಮನೆಗಳ ಋಣಭಾರ ಅವಳ ಮೇಲಿರುತ್ತದೆ'. ಸರಸ್ವತಿದೇವಿಯವರ ಈ ಮಾತುಗಳಿಂದ ಮಹಿಳಾ ಜೀವನದ ಮತ್ತೊಂದು ಮುಖದ ಸಮಸ್ಯೆಯನ್ನು ಕಾಣುತ್ತೇವೆ.

ಅವರ ಕತೆಯಲ್ಲಿನ ಈ ವಿಷಯ ಇಂದಿನ ಪ್ರಸ್ತುತ ಸಮಾಜದಲ್ಲಿನ ಜ್ವಲಂತವಾದ ಸಮಸ್ಯೆಗಳಲ್ಲೊಂದಾಗಿದೆ ಚುನಾವಣೆಯ ಸಲುವಾಗಿ ಇಂದು ಅವೆಷ್ಟೋ ಕುಟುಂಬಗಳಲ್ಲಿ ಮನಸ್ಸು ಒಡೆದು ಹಾಳಾಗಿವೆ. ಅದೆಷ್ಟೋ ಜನ ತಮ್ಮವರನ್ನು ಕಳೆದುಕೊಂಡಿರುವರು. ಇಂತಹ ಸಮಸ್ಯೆಯ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸಿರುವ ಸರಸ್ವತಿ ದೇವಿಯವರು ತಮ್ಮ ಕಾಲದ ಇತರ ಲೇಖಕಿಯರಿಗಿಂತ ವಿಭಿನ್ನವ್ಯಕ್ತಿತ್ವವುಳ್ಳವರೆಂದು ಮತ್ತು ಇಂದಿಗೂ ಪ್ರಸ್ತುತವೆನಿಸುವ ಅವರ ವಿಚಾರ ಲಹರಿ ಓದುಗರಿಗೆ ಯೋಚಿಸಲು ಹಚ್ಚುವುದು

೯] ಹೂವಿನದಂಡೆ

ಈ ಕಥೆಯಲ್ಲಿ ಉತ್ತರ ಕರ್ನಾಟಕದ ಸಾಂಸ್ಕೃತಿಕ ಆಚರಣೆಯನ್ನು ಕಾಣುತ್ತೇವೆ. ಈ ಸಂಪ್ರದಾಯಗಳಲ್ಲಿ ಒಂದು ಚೊಚ್ಚಲ ಬಸುರಿ ಹೆಣ್ಣು ಮಗಳಿಗೆ ಹೂ

ಮುಡಿಸುವುದು ಎಂಬ ಆಚರಣೆ ಇದೆ. ಇದನ್ನು ಕುಬಸಾ ಮಾಡುವುದು ಎಂದೂ ಕರೆಯುತ್ತಾರೆ. ಊರದೇಸಾಯರ ನಡುವಿನ ಸೊಸೆಗೆ ಹೂಮುಡಿಸುವ ಸಮಾರಂಭದಿಂದ ಕಥೆ ತೆರೆದುಕೊಳ್ಳುತ್ತದೆ.

ಈ ಕಥೆಯಲ್ಲಿ ಪ್ರಮುಖವಾದದ್ದು 'ರತ್ನ' ಎನ್ನುವ ಪಾತ್ರ. ರತ್ನಳ ಮೈದುನನ ಹೆಂಡತಿಗೆ ಉಡಿ ತುಂಬುವ ಶಾಸ್ತ್ರದ ಕುರಿತು ಕಥೆಯಿದಾಗಿದೆ. 'ಏಳು ರತ್ನಕ್ಕಾ ತಂಗಿಗೆ ಸೀರೆ ಉಡಿಸು ಉಡಿ ತುಂಬು' ಎಂಬ ಮಾತಿನಿಂದ ಕಥೆಯು ಪ್ರಾರಂಭವಾಗುವುದು. ಈ ಸಮಾರಂಬದ ತಯಾರಿಯಲ್ಲಿ ಅತಿ ಸಂಭ್ರಮದಿಂದ ಓಡಾಡಿಕೊಂಡಿರುವ ರತ್ನಳಿಗೆ ತನ್ನ ಹಳೆಯ ನೆನಪಾಗುವುದು. ಅತಿ ಆಸೆಯಿಂದ ತಾನು ಹೂಮುಡಿಯಬೇಕೆಂದಿರುವ ಇವಳಿಗೆ ಮಕ್ಕಳ ಭಾಗ್ಯವಿರಲಿಲ್ಲ.

ಉತ್ತರ ಕರ್ನಾಟಕದಲ್ಲಿ ಚೊಚ್ಚಲ ಬಸುರಿಯರಿಗೆ ವಿವಿಧ ರೀತಿಯಿಂದ ಹೂಮುಡಿಸುವ ಆಚರಣೆ ಇದೆ. ಮೊದಲು ತವರು ಮನೆಯಿಂದ ಬಸುರಿ ಹೆಣ್ಣಿಗೆ ಹೂಮುಡಿಸಬೇಕು. ನಂತರ ಔತಣಗಳ ಸುರಿಮಳೆ ಸುರುವಾಗುತ್ತದೆ. ಬೆಳದಿಂಗಳೂಟ, ತೋಟದಲ್ಲಿ ವನವಿಹಾರ, ಮನೆಯಲ್ಲಿ ಆವರಣದಲ್ಲಿಯೇ ತೂಗುಮಂಚ ಹಾಕಿ ಸೊಬಗಿನ ಸಂಜೆಯೂಟ, ಹೊಳೆಯ ದಂಡೆಯ ಮೇಲೆ ಸೊಗಸಾದ ಔತಣ ಇತ್ಯಾದಿಯಾಗಿ ಊರ ಜನರೆಲ್ಲ ಈ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಾರೆ ದೇಸಾಯರ ಸೊಸೆಗೆ ಒಂದೊಂದು ರೀತಿಯಲ್ಲಿ ಗರ್ಭಿಣಿಯ ಬಯಕೆಗಳನ್ನು ತೀರಿಸಿತ್ತಾರೆ. ಎಲ್ಲರೂ ಹೂವಿನಂತೆ ಸೊಸೆಯನ್ನು ನೋಡಿಕೊಳ್ಳುತ್ತಿದ್ದರು, ಗರ್ಭಿಣಿಯ ಬಯಕೆ ತೀರಿಸುವ ಈ ಎಲ್ಲ ಪ್ರಕಾರ ಇಂದಿಗೂ ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿದೆ. ಇವು ಈ ಭಾಗದ ಸಾಂಸ್ಕೃತಿಕ ಸಂಗತಿಗಳಾಗಿದೆ.

ದಂಪತಿಗಳನ್ನು ಕೂಡ್ರಿಸಿ ಅರತಿ ಮಾಡುವುದು. ಸೊಸೆಗೆಂದು ಜರದ ಕಲಾಕುಸುರಿನ ಹಸಿರು ಸೀರೆ ತರುವದು. ಮಾವನ ಮನೆಯಿಂದ ಅಳಿಯನಿಗೆ ಹೊಸ ಬಟ್ಟೆ ಮತ್ತು ಬಂಗಾರದ ಚೈನು, ಉಂಗುರ ಉಡುಗೊರೆ ನೀಡುವುದು. ಪ್ರತಿಯೊಂದು ಜಾತಿ, ಜನಾಂಗದ ವಾಡಿಕೆಯಾಗಿದೆ.

ರತ್ನಕ್ಕ ೩೦ ವರ್ಷದ ಹಿಂದೆ ದೇಸಾಯಿಯರ ಮನೆಗೆ ಸೊಸೆಯಾಗಿ ಬಂದಳು ಮನೆತನದ ಮರ್ಯಾದೆಗಾಗಿ ತಮ್ಮಂಥವರ ಮಗ ಹಾಗೆಯೇ ಹೇಗೆ ಉಳಿಯುದೆಂದು ಮನೆಯ ಹಿರಿಯರು ಬೇಕಾಗಿ ಈ ಮದುವೆ ಮಾಡಿದ್ದರು. ಕೈಹಿಡಿದವನು 'ಸೌಭಾಗ್ಯಯ ರಾತ್ರಿ'ಯ ದಿನವೇ ನಿಜ ಸಂಗತಿ ತಿಳಿಸಿದನು. ತಂದೆ-

ತಾಯಿಯರ ಒತ್ತಾಸೆಗಾಗಿ ಮದುವೆಯಾದದ್ದು. 'ನನ್ನಿಂದ ಪ್ರಯೋಜನವಿಲ್ಲ ನಿನ್ನ ದೈವ' ಎಂದನು. ಎಲ್ಲರ ತಪ್ಪನ್ನು ಅವಳ ದೈವದ ಮೇಲೆ ಹಾಕಿ ನಿಟ್ಟಿಸಿರುಗರೆದ. ರತ್ನಕ್ಕಳ ಅಕ್ಕನೂ ಸಹ 'ನಿನ್ನ ದೈವ, ಯಾರ ಕೈಯಲ್ಲೇನಿದೆ. ಒಳ್ಳೆಯ ರೀತಿಯಿಂದ ಇದ್ದು ಅವ್ವ- ಅಪ್ಪನ ಹೆಸರು ತಾ' ಎಂದು ಹೇಳಿ ಊರಿಗೆ ಹೋದಳು. ಗಾಣದೆತ್ತಿನಂತೆ ದುಡಿಯುವ ಈಕೆಗೆ ಒಂದು ಸವಿಮಾತನ್ನಾಡುವವರಿಲ್ಲ. ಓರಗಿತ್ತಿಯನ್ನು ಪ್ರೀತಿಯಿಂದ ಕಾಣುವರು, ಆದರೆ ತನಗೇಕೆ ಈ ತಿರಸ್ಕಾರ ? ಹೂವಿನದಂಡೆ ಹಸಿರುಸೀರೆ, ಕುಪ್ಪಸ ಬಳೆ ಇವುಗಳಲ್ಲಿ ಹೂವಿನದಂಡೆಯೆಂದರೆ ಅವಳಿಗೆ ಪಂಚಪ್ರಾಣ. ಕನಸು ನನಸಾಗಲು ಸಾಧ್ಯವಿಲ್ಲದಿರುವಾಗ ಕನಸಿನಲ್ಲಿ ಅವಳ ಸ್ಮಶಾನಯಾತ್ರೆಗೆ ಅಣಿಮಾಡಿದಂತೆ ಮತ್ತೈದೆಯವರು ಒಬ್ಬರ ಮೇಲೆ ಒಬ್ಬರು ಬಿದ್ದು ತನಗೆ ದಂಡೆ ಕಟ್ಟುತ್ತಿರುವಂತೆ ಕನಸು ಕಂಡಳು. ಅತ್ತೆಯ ಕರ್ಕಶ ಸ್ವರಕ್ಕೆ ಸ್ವಪ್ನ ಭಂಗವಾಯ್ತು.

ಈ ಕಥೆಯಲ್ಲಿ ತನ್ನದಲ್ಲದ ತಪ್ಪಿಗೆ ಬಲಿಪಶುವಾಗಿರುವ ಹೆಣ್ಣೊಬ್ಬಳು ಪಡುವ ವೇದನೆಯು ಮೂಡಿ ಬಂದಿದೆ. ತನಗೆ ದಕ್ಕದ ಈ ಹೂವಿನದಂಡೆ ಅಂದರೆ ಗರ್ಭಿಣಿಯಾಗದ ತಾನೂ ಸ್ಮಶಾನಯಾತ್ರೆಯಲ್ಲಿ ಹೂವಿನದಂಡೆ ಕಟ್ಟಿಸಿಕೊಳ್ಳುತ್ತಿರುವಂತೆ ಅವಳಿಗೆ ಭಾಸವಾಯ್ತು.

ಕಥೆಯ ಕೊನೆಯಲ್ಲಿ ಲೇಖಕಿಯವರು "ಹೆಣ್ಣುಮಕ್ಕಳ ಸುಖಕ್ಕಾಗಿ, ಹಿತರಕ್ಷಣೆಗಾಗಿ ಭಾರತದಲ್ಲಿ ಇದೀಗ ಆಕಾಶ ಪಾತಾಳ ಒಂದಾಗುತ್ತದೆ. ಆದರೆ ವ್ಯಕ್ತಿಗೊಂದು ಪರಿಸ್ಥಿತಿ. ಸಮಾಜದ ವಿಚಾರ ಪ್ರಣಾಲಿ ಒಳ್ಳೇದಾರಿ ಹಿಡಿಯದ ಹೊರತು ಯಾರೂ ಏನು ಮಾಡಲಿಕ್ಕೆ ಸಾಧ್ಯ ?' ಎಂದು ಪ್ರಶ್ನೆಗೈಯುವರು.

ಇದು ಅವರ ವೈಚಾರಿಕ ಮನೋಭಾವವನ್ನು ಗುರುತಿಸುವದು. ಆದಾಗಲೇ ಮಹಿಳೆಯರ ಸ್ಥಿತಿ-ಗತಿ ಕುರಿತು ಹೊಸ ಹೊಸ ಕಾಯಿದೆಗಳು ಜಾರಿಯಲ್ಲಿ ಬರುತ್ತಿದ್ದವು. ವರದಕ್ಷಿಣೆ ನಿಷೇದ ಕಾಯಿದೆಯಾಗಲೀ ವಿಧವಾ ವಿವಾಹ, ಇತ್ಯಾದಿ ಕಾಯಿದೆಗಳು ಪಾಸಾಗಲು ಅಣಿಯಾಗಿದ್ದವು. ಆದರೆ ಅವುಗಳ ಆಚೆಯೂ ಸ್ತ್ರೀ ಜೀವಿತದ ಅನೇಕ ಸಮಸ್ಯೆಗಳ ಎಷ್ಟೋ ಮುಖಗಳು ಇರುವುದನ್ನು ಲೇಖಕಿ ತಮ್ಮ ಕಥೆಗಳಲ್ಲಿ ಬಿಚ್ಚಿ ತೋರಿಸಿದ್ದಾರೆ.

೧೦] ಹಾಲು ಉಕ್ಕಿತು

ಗೌರಮ್ಮನಿಗೆ ಹತ್ತಿರದ ಸಂಬಂಧಿಯಾದ ಚಂದ್ರಶೇಖರನೊಡನೆ ಮದುವೆಯಾಗುತ್ತದೆ. ಚಂದ್ರಶೇಖರನ ಓದು ಮುಗಿಯುವವರೆಗೂ ಗೌರಮ್ಮ ತವರು ಮನೆಯಲ್ಲಿ ಉಳಿದಳು. ನಂತರ ಉದ್ಯೋಗ ದೊರೆತ ಮೇಲೆ ಒಂದು ಮನೆ ಮಾಡಿ ಹೆಂಡತಿಯನ್ನು ಕರೆದುಕೊಂಡು ಹೋದನು. ಆದರೆ ಮನೆ ಬೆಳಗಿದ ಇವಳಿಗೆ ಮನದನ್ನನ ಮನ ಬೆಳಗಲು ಸಾಧ್ಯವಾಗಲಿಲ್ಲ. ಪತಿಯ ಸಂಬಳದಲ್ಲಿಯೇ ಅಚ್ಚುಕಟ್ಟಾಗಿ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಳು. ದಿನ ಕಳೆದಂತೆ ಅವನ ಗಳಿಕೆಯೂ ಹೆಚ್ಚಿತ್ತು ಅದರಂತೆ ಸುಪ್ತವಾಗಿದ್ದ ಅವನ ಬಯಕೆಗಳಲ್ಲ ಗರಿಗೆದರಿ ನಿಂತವು. ಸ್ವೇಚ್ಛೆಯಿಂದ ಅವನು ಬಯಕೆಗಳ ದಾಸನಾದನು. ಹೆಂಡತಿಯನ್ನು ಕಡೆಗಣಿಸಿದನು. ಮಕ್ಕಳಾಗದ ಇವಳು ದೇವರಿಗೆ ಹರಕೆ, ವ್ರತ ಪೂಜೆಗಳನ್ನು ಸಲ್ಲಿಸಿದಳು. ಚಂದ್ರಶೇಖರನ ಗೆಳೆಯನೊಬ್ಬ ಡಾಕ್ಟರನಿದ್ದನು. ಅವನ ಸಲಹೆ ಮತ್ತು ವೈದ್ಯಕೀಯ ಚಿಕಿತ್ಸೆಗಳಿಂದ ಗೌರಮ್ಮ ತಾಯಿಯಾದಳು. ಮೊದಲ ಮಗು ಪ್ರಭಾಕರನ ನಂತರ ಲಲಿತಾ, ಶ್ರೀಕಾಂತ, ದಿಲೀಪ ಎಂಬ ಮಕ್ಕಳಾದವು. ಮಕ್ಕಳ ಮೇಲೆ ಇದ್ದಷ್ಟು ಪ್ರೀತಿ ಮಡದಿಯ ಮೇಲೆ ಇರಲಿಲ್ಲ. ಒಂಟಿ ಜೀವನಕ್ಕೊಂದು ಆಸರೆಯೆಂಬತೆ ಮಕ್ಕಳೇ ಅವಳ ಪಾಲಿನ ದೈವವಾದರು.

ಚಂದ್ರಶೇಖರ ಹಿಡಿದ ನೌಕರಿ ಬಿಟ್ಟು ವ್ಯಾಪಾರವನ್ನು ಆರಂಭಿಸಿದನು. ಅದೃಷ್ಟ ಶಾಲಿಯಾದ ಅವನು ಮುಟ್ಟಿದ್ದೆಲ್ಲ ಚಿನ್ನವಾಗಿ ಶ್ರೀಮಂತನಾದನು. ಬಾಡಿಗೆ ಮನೆಯ ಬದಲು ಬಂಗಲೆ ಆಳು-ಕಾಳು, ಓಡಾಡಲು ಕಾರು, ಬಾಗಿಲು ಕಾಯುವ ಪಹರೆದಾರ, ಮಕ್ಕಳನ್ನಾಡಿಸಲು ದಾಯಿ, ಅಡಿಗೆಗೊಂದು ಆಳು ಬಂದರೂ ಗೌರಮ್ಮನ ಸ್ಥಿತಿ ಬದಲಾಗಲಿಲ್ಲ. ಬದಲಿಗೆ ಅವಳನ್ನಷ್ಟೂ ದೂರವಾದಳು. ಅವಳ ಎಲ್ಲ ಕೆಲಸಗಳನ್ನು ಅವನು ಆಳಿನಿಂದಲೇ ಮಾಡಿಸಿದನು. ದುಡ್ಡಿನ ಮದದಿಂದ ಅಂಕೆ ಮೀರಿದ ಚಂದ್ರಶೇಖರನು ತನ್ನ ದುರ್ವ್ಯವಹಾರಗಳನ್ನು ಮನೆಯಲ್ಲಿಯೇ ಶುರು ಮಾಡಿದನು. ಮನೆಯ ಪಾವಿತ್ರ್ಯವನ್ನು ಕಾಯಬೇಕಾದ ನೀನು ಹೀಗೆ ಮಾಡುವುದು ಸರಿಯಲ್ಲ ಎಂದು ಹೇಳಲು ಹೋರಟ ಅವಳಿಗೆ ಇಷ್ಟವಿಲ್ಲದಿದ್ದರೆ ಮನೆಯಲ್ಲಿರಬೇಡ ಎಂದನು. ಮಕ್ಕಳ ಮುಖ ನೋಡಿಕೊಂಡು ಗೌರಮ್ಮ ಸುಮ್ಮನಿದ್ದರೂ, ಒಂದು ದಿನ ಈ ಜಗಳ ವಿಕೋಪಕ್ಕೆ ಹೋದಾಗ ಚಂದ್ರಶೇಖರ ಅವಳನ್ನು ಬೀದಿಗಟ್ಟಿದನು ಮಕ್ಕಳೆಲ್ಲರೂ ಕಂಗಾಲಾದರು. ತವರಿನ ದಾರಿ ತುಳಿದರೂ ಅಲ್ಲಿ ಅವಳಿಗೆ ರಕ್ಷಣೆ ಸಿಗಲಿಲ್ಲ. ಕೊನೆಗೆ ಪಕ್ಕದ ಮನೆಯ ಗೆಳತಿಯ ನೆನಪಾಗಿ ಅಲ್ಲಿಗೆ ಹೋದಳು. ಪಕ್ಕದ ಮನೆಯಲ್ಲಿಯೇ

ಇರುವುದರಿಂದ ಮಕ್ಕಳನ್ನಾದರೂ ಕಾಣಬಹುದು. ತಾನು ಸಹ ' ರಟ್ಟೀ ಮುರಿದು ರೊಟ್ಟೀ ತಿನ್ನಬೇಕು ಈ ಹಂಗಿನ ಕೂಳಿಗೆ ಬೀಳಬಾರದೆಂದು ಕೆಲಸಕ್ಕೆ ಸೇರಿದಳು. ಗೆಳತಿ ಕಮಲಮ್ಮನ ಮನೆಯ ಕೆಲಸಕ್ಕಿರುವ ಹೆಂಡತಿಗೆ ಮಕ್ಕಳ ನೆವ ಮಾಡಿಕೊಂಡು ಈ ಮನೆಗೆ ಬರಬಾರದೆಂದು ಜ್ವರದಿಂದ ಬಳಲುತ್ತಿರುವ ಮಗ ದಿಲೀಪನ ಮೇಲೆ ಆಣೆ ಇಡುವನು. ಇಂತಹ ಹೃದಯವಿದ್ರಾವಕ ಸ್ಥಿತಿಯು ಪರಿತ್ಯಕ್ತ ಗೌರಮ್ಮಳದ್ದಾಯಿತು.

ಕತೆಯ ಕೊನೆಯಲ್ಲಿ ಲೇಖಕಿಯು 'ಪುರುಷನ ಪಾಶವೀವೃತ್ತಿಯಿಂದ ಪೀಡಿತರಾದವರಿಗೆ ಪರಿಹಾರ ದೊರೆಯಲೆಂದು ಇಂದು ಹೊರೆಗಟ್ಟಲೇ ಕಾಯಿದೆಗಳನ್ನು ಪಾಸುಮಾಡಿದ್ದಾರೆ. ವಿರಸ ದಾಂಪತ್ಯಕ್ಕೆ ವಿವಾಹ ವಿಚ್ಛೇದನದ ರಾಜಮಾರ್ಗ ಕಲ್ಪಸಿದ್ದಾರೆ. ಆದರೆ ಗೌರಮ್ಮನಂತೆ ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದ ಓರ್ವ ಮಹಿಳೆ ಘಟಸ್ಫೋಟ ತೆಗೆದುಕೊಂಡು ಮತ್ತೆ ಮರುಮುದುವೆಯಾಗಬಹುದೇ ? ಪರಿತ್ಯಕ್ತೆಗೆ ಜೀವನಾಂಶ ಹಕ್ಕಿದೆ. ಆದರೆ ದುಡ್ಡು ಸುರವಿ ಕೋರ್ಟು ಕಚೇರಿ ಅಲೆದಾಡಿ ಬೆನ್ನು ಕಟ್ಟಿ ಬಡಿದಾಡುವವರೊಬ್ಬರು ಬೇಕಲ್ಲವೇ ? ಮಹಿಳೆಯ ಉದ್ಧಾರದ ಕುರಿತು ವೇದಿಕೆಯ ಮೇಲೆ ನಿಂತು ಮಾರುದ್ದ ಭಾಷಣ ಮಾಡುವ ಸಮಾಜದ ಮುಖಂಡರಿಗೆ ಗೌರಮ್ಮನಂತವರು ಕಾಣಿಸುವದಿಲ್ಲ. ಆದರೆ ಭಾಷಣ ಮಾಡುವಷ್ಟು ಅವರ ಸಲುವಾಗಿ ಬಡಿದಾಡುವುದು ಹಗುರವಾಗಿಲ್ಲ.' ಎನ್ನುವ ಮಾತುಗಳಲ್ಲಿ ಭಾವತೀವ್ರತೆಯೊಂದಿಗೆ ವೈಚಾರಿಕತೆಯೂ ಬೆರೆತಿರುವುದನ್ನು ಗುರುತಿಸಬಹುದು. ಪರಿತ್ಯಕ್ತೆಗೆ ಜೀವನಾಂಶ, ಮರುಮದುವೆ ಮತ್ತು ವಿಚ್ಛೇದನದಂತಹ ತಾರ್ಕಿಕ ಆಲೋಚನೆಗಳು ಸಂವಿಧಾನಬದ್ಧ ಇಂದಿನ ಪ್ರಸ್ತುತತೆಗೆ ದಾರಿದೀಪವಾಗಿದೆ. ಕೋರ್ಟಿಗೆ ಅಲೆದಾಡುವ ಹಕ್ಕಿಗಾಗಿ ಪರಿದಾಡುವಂತಹ ಮಾತು ಇಂದಿನ ಪರಿಸ್ಥಿತಿಯಲ್ಲಿಯೂ ಸಾಮಾನ್ಯ ಚಿತ್ರವೇ ಆಗಿದೆ.

೧೧] **ಮಿತಿಮೀರಿದಾಗ**

ಈ ಕಥೆಯು ಹರಟೆಗೆ ಸಮೀಪವಾದ ಲಘುಲಹರಿಯಲ್ಲಿದೆ. ನಮ್ಮ ಕಾನೂನು ಆಡಳಿತಗಳ ಕುರುಡು ನಡುವಳಿಗಳು ಸೃಷ್ಟಿಸುವ ಅವಾಂತರಗಳಿಗೆ ಇದು ನಿದರ್ಶನವಾಗಿದೆ. ಕತೆಯಲ್ಲಿ ಮುಖ್ಯವಾಗಿ ಶ್ರೀಕಂಠಯ್ಯನವರು ಪ್ರಿನ್ಸಿಪಾಲರು, ಪತ್ನಿ ಸರೋಜಮ್ಮ ಕಾವಲುಗಾರ ಕಲ್ಲ ಶ್ರೀಕಂಠಯ್ಯನವರು ಶಿಷ್ಯ ವಸಂತ ಮತ್ತು ಪತ್ನಿ ಪ್ರೇಮಾ ಪ್ರಮುಖವಾದ ಪಾತ್ರಗಳಾಗಿ ಕಥೆಯಲ್ಲಿ ರೂಪಿತಗೊಂಡಿವೆ.

ಗೆಳೆಯನ ಮನೆಯ ಔತಣ ಮುಗಿಸಿ ಬರುವಾಗ ವಸಂತ ಮತ್ತು ಪ್ರೇಮಾ ಬೆಳದಿಂಗಳ ರಾತ್ರಿಯಲ್ಲಿ ಹಸಿರು ಹುಲ್ಲಿನಲ್ಲಿ ಸ್ವಲ್ಪಹೊತ್ತು ವಿಶ್ರಮಿಸಲು ಕುಳಿತುಕೊಂಡರು. ಅವರಿಗೆ ಮಾತಿನ ಹರಟೆಯಲ್ಲಿ ರಾತ್ರಿಯಾದ ಅರಿವೇ ಇರುವುದಿಲ್ಲ. ಪೋಲಿಸರು ಒಂದು ಕಾಯಿದೆ ಪ್ರಕಾರ ಸ್ಟೇಶನನಿಗೆ ಕರೆ ತಂದರು. ವಸಂತ ಪ್ರಿನ್ಸಿಪಾಲರಿಗೆ ಪೋನುಮಾಡಿಸಿ ತನ್ನನ್ನು ಬಿಡಿಸಿಕೊಂಡು ಹೋಗುವಂತೆ ಬೇಡುವನು. ಅವರು ಅವರನ್ನು ಬಿಡಿಸಿಕೊಂಡು ಆ ರಾತ್ರಿ ಮನೆಗೆ ಬಂದರು. ನಡೆದ ವೃತ್ತಾಂತವನ್ನೆಲ್ಲ ಸರೋಜಮ್ಮನಿಗೆ ಪ್ರಿನ್ಸಿಪಾಲರು ತಿಳಿಸಿದಾಗ, ಅವಳು 'ದೀಪ ಮುಡಿಸುವದರೊಳಗಾಗಿ ಹೆಣ್ಣುಮಕ್ಕಳು ಮನೆಯಲ್ಲಿರಬೇಕೆಂದು ತಮ್ಮ ಹಿರಿಯರು ಹೇಳುತ್ತಿದ್ದರು. ಕಾಲ ಬದಲಾದಂತೆ ಈಗ ಹೆಣ್ಣು- ಗಂಡು ಕೂಡಿಯೇ ಹೊತ್ತು-ಗೊತ್ತು ಇಲ್ಲದೇ ಅಲೆಯ ತೊಡಗಿದ್ದಾರೆ. ಯಾವ ಮಾತಿಗಾದರೂ ಮಿತಿ ಇರಬೇಕು ಮೀರಿದಾಗ...............'

ಈ ಮಾತಿನಲ್ಲಿ ಲೇಖಕಿಯು ತಮ್ಮ ವಿಚಾರವನ್ನು ಸರೋಜಮ್ಮಳ ಮೂಲಕ ಹೇಳಿದಂತಿದೆ. ಸಹಜವಾಗಿ ಹೊತ್ತು ಗೊತ್ತಿನ ಅರಿವಿನಲ್ಲಿ ಮನುಷ್ಯ ತನ್ನ ಬದುಕನ್ನು ಸಾಗಿಸಬೇಕು. ಪ್ರಸ್ತುತತೆಯ ಅರಿವಿನಲ್ಲಿ ಮುನ್ನಡಿಯನ್ನಿಡಬೇಕು. ತಿಳಿ ಹಾಸ್ಯಾದ ಈ ಕಥೆಯೂ ನಗುವಿನೊಂದಿಗೆ ಮಾರ್ಮಿಕವಾಗಿ ಸಮಯ ಪ್ರಜ್ಞೆಯನ್ನು ತಿಳಿಸುವುದು. ಸರಳ ಘಟನೆಯೊಂದನ್ನು ಕಥೆಯನ್ನಾಗಿಸುವ ನೈಪುಣ್ಯಕ್ಕೆ ಈ ಕಥೆ ಸಾಕ್ಷಿಯಾಗಿದೆ.

೧೨] **ವಾಗ್ದತ್ತವಧು**

ಬಾಲ್ಯದಲ್ಲಿಯೇ ಮಕ್ಕಳನ್ನು ಗಂಡ ಹೆಂಡಿರೆಂದು ನಿರ್ಧರಿಸಿ ಹಿರಿಯರು ನಿಶ್ಚಯಿಸಿದಾಗ ಶೈಲ ತನ್ನ ಮನಸನ್ನು ಮಾವ ಪ್ರಕಾಶನಿಗೆ ಮುಡುಪಾಗಿಡುತ್ತಾಳೆ. ಹೊರದೇಶದಲ್ಲಿ ಓದಿದ ಪ್ರಕಾಶನು ಮನಸ್ಸು ಬದಲಾಗುತ್ತದೆ. ಬೇರೊಬ್ಬಳೊಂದಿಗೆ ಮದುವೆಯಾಗುತ್ತಾನೆ. ಆದರೆ ತನ್ನ ಭಾವಾರ್ಪಣೆಯನ್ನು ಬದಲಿಸಲಾಗದ ನಾಯಕಿ ಅಜೀವ ಪರ್ಯಂತ ನರಳುತ್ತಾಳೆ.

ಕ್ಷಣಿಕ ಮೋಹಕ್ಕೊಳಗಾದ ಪ್ರಕಾಶನು ಅಕ್ಕನ ಮಗಳನ್ನು ಮದುವೆಯಾಗಿದ್ದರೂ ಬೇರೊಂದು ಮದುವೆಯಾಗುತ್ತಾನೆ. ಸ್ವಂತ ಅಕ್ಕ, ಅಪ್ಪ, ಅಮ್ಮ ಮತ್ತು ಶೈಲಳಿಗೆ ದ್ರೋಹ ಬಗೆದೆನೆಂದು ನಂತರ ಒದ್ದಾಡುವನು. ಶೈಲಳನ್ನು ಕಂಡು ಕ್ಷಮೆ ಕೇಳಲು ಅವನಿಂದ ಮಾತೇ ಬಾರದಂತಾಯಿತು. ವಿದೇಶ ವ್ಯಾಸಂಗ ಮುಗಿಸಿ ವಿದೇಶಿ ಸಂಸ್ಕೃತಿಯ ನೆರಳನ್ನೇ ಹಿಂಬಾಲಿಸಿ ಅಲ್ಲಿಯೇ ವಿವಾಹವಾಗಿದ್ದನು. ತಾಯಿ ಮತ್ತು

ಶೈಲಳಗೆ ವಿಷಯ ತಿಳಿಸಿದನು. ಪತ್ರದಿಂದ ಮೊದಲೇ ಸುದ್ದಿಯನ್ನು ತಿಳಿದುಕೊಂಡ ಶೈಲಾ ಮೂಕಹಕ್ಕಿಯಂತೆ ರೋದನದಿಂದ ವಿಲವಿಲ ಒದ್ದಾಡಿದಳು.

ಶೈಲಾಳ ಮೂಲಕ ಲೇಖಕಿ ತಮ್ಮ ನಿಲುವುವನ್ನು ಕಥೆಯ ಕೊನೆಬಾಗದಲ್ಲಿ ಸ್ಪಷ್ಟ ಪಡಿಸಿರುವರು. ಶೈಲಾಳ ತಿರ್ಮಾನದ ಮಾತುಗಳಲ್ಲಿ ಅದು ಕಾಣುತ್ತದೆ. 'ಹೆಣ್ಣುಮಕ್ಕಳ ಸಲುವಾಗಿ ನನ್ನ ಕೈಲಾದ ಸೇವಾ ಮಾಡತೇನಿ. ಹೊರಿಗಟ್ಟಲೆ ಕಾಯಿದೆ ಪಾಸು ಮಾಡಿ ಒಗೆದರು. ಸ್ವಾತಂತ್ರ್ಯ ಕೊಟ್ಟೇವಿ ಅಂದರು. ಆದರೆ ಹೆಣ್ಣುಮಕ್ಕಳಿಗೆ ಸುಖಾ ಮಾತ್ರ ಸಿಗಲಿಲ್ಲ. ಅಲ್ಲಲ್ಲೇ ಈ ಮುಳ್ಳು ಅಳುಕೂದು ತಪ್ಪಲಿಲ್ಲ.'

'ಮುಂದಿನ ಜನ್ಮದಲ್ಲಿ ಕೂಡುವ ಶುಭಕಾಂಕ್ಷೆಯೊಂದಿಗೆ ನೀನು ನನ್ನನ್ನು ಬೀಳ್ಕೊಂಡು ಅಲ್ಲಿಯವರೆಗೆ ನಾನು ನಿನ್ನ ವಾಗ್ದತ್ತ ವಧು. ಯಾವ ಹಿರಿಯರೂ ಇನ್ನು ಮುಂದೆ ಹುಟ್ಟಿದ ಕೂಡಲೇ ಹೆಸರಿಟ್ಟು ವಾಜನಿಶ್ಚಯ ಮಾಡುವ ಗುರುತರ ಅಪರಾಧವನ್ನು ಮಾಡದಿರಲಿ ಎಂದು ಹಾರೈಸುತ್ತೇನೆ.' ಎನ್ನುವ ಗಟ್ಟಿ ಪಾತ್ರ ಶೈಲಳದು. ಈ ಕಥೆಯ ಮಲಕ ಲೇಖಕಿ ಅಂದಿನ ಪರಿಸರ ಮತ್ತು ಸಮಾಜಕ್ಕೆ ಒಂದು ಸಂದೇಶ ನೀಡಿದ್ದಾರೆ.

ಈ ಕಥೆ ವೈಚಾರಿಕತೆಯನ್ನು ಪ್ರದಾನವಾಗಿರಿಸಿಕೊಂಡರು ಕತೆಯ ಆರ್ದ್ರತೆಯು ಸಮಾನವಾಗಿ ಉಳಿಯುತ್ತದೆ. ಬಾಲ್ಯ ವಿವಾಹವನ್ನು ಮತ್ತು ಅಂತಹ ಮಹಿಳೆಯ ಅಂತಂತ್ರ ಸ್ಥಿತಿಯನ್ನು ತಮ್ಮ ಕತೆಗಳಲ್ಲಿ ಕವಿತೆಗಳಲ್ಲಿ ಎಚ್.ವ್ಹಿ.ಸಾವಿತ್ರಮ್ಮ ಇಂದಿರಾಬಾಯಿ ಮತ್ತು ಬೇಂದ್ರೆ ಇತ್ಯಾದಿ ಲೇಖಕರು ಚರ್ಚಿಸಿದ್ದಾರೆ.

೧೩] ಸೋತುಗೆದ್ದವಳು

ಬಹುಪತ್ನಿತ್ವ ಈ ಕಥೆಯ ವಸ್ತು ಗಂಗಮ್ಮ ಮತ್ತು ಮಾಲತಿ ಇಬ್ಬರು ಗೆಳತಿಯರು. ತಮ್ಮ ತಮ್ಮ ಬಾಳಿನಲ್ಲಿ ಸವತಿಯನ್ನು ಕಂಡವರು. ಆದರೆ ಅದನ್ನು ಎದುರಿಸಿದ ರೀತಿ ಬೇರೆ ಬೇರೆಯಾಗಿತ್ತು. ಗಂಗಮ್ಮ ತ್ಯಾಗದಲ್ಲಿಯೇ ಸುಖ ಎಂದರೆ ಮಾಲತಿ ಅದಕ್ಕೊಂದು ಬೆಲೆಯಿದ್ದರೆ ಅದು ತ್ಯಾಗ, ಇಲ್ಲದಿದ್ದರೆ ಅದು ಕೈಲಾಗಿದ ಹೇಡಿತನ ಎನ್ನುವಳು.

ಶ್ರೀಮಂತರ ಮಗಳಾದ ಗಂಗಮ್ಮ ಗಣ್ಯ ವಕೀಲರ ಹೆಂಡತಿಯಾಗಿ ಬಂದಳು. ಹಲವು ವರ್ಷಗಳ ನಂತರ ಮಕ್ಕಳಾಗದಕ್ಕೆ ಮಾವನ ಇಚ್ಛೆಯಂತೆ ತನ್ನ ಗಂಡನಿಗೆ ತಾನೇ ಮುಂದೆ ನಿಂತು ಮದುವೆ ಮಾಡಿಸಿದಳು. ನಂತರ ಐದು ಮಕ್ಕಳನ್ನು ಪಾರ್ವತಿಯು ಹೆತ್ತಳು. ಯಶೋದೆಯಂಥೆ ಮಕ್ಕಳ ಲಾಲನೆ ಪಾಲನೆಯಲ್ಲಿ ಗಂಗಮ್ಮ

ಎಲ್ಲ ಮರೆತಳು. ಹೆಣ್ಣನ್ನು ಕಾಪಾಡುವ ಸಾಕುವ ಪರಂಪರಾಗತ ಪಾತ್ರವನ್ನು ಎತ್ತಿ ಹಿಡಿದಿದ್ದಾರೆ ಇದೊಂದು ಸಾಂಪ್ರದಾಯಿಕ ದೃಷ್ಟಿ. ಪೂರ್ಣವಾದ ಪಾತ್ರವಾಗಿದೆ

ಮಾಲತಿಯ ಮನೆಯವರು ಅನುಕೂಲಸ್ಥ ಮನೆತನ, ಯೋಗ್ಯ ವರನೆಂದು ಗಂಗಾಧರನಿಗೆ ತಮಗೆ ನಿಲುಕಿದಷ್ಟು ವರದಕ್ಷಿಣೆ ಕೊಟ್ಟು ಮದುವೆ ಮಾಡಿದರು. ಆದರೆ ವರೋಪಚಾರ ತಮ್ಮ ಮನೆತನಕ್ಕೆ ತಕ್ಕಷ್ಟು ಆಗಲಿಲ್ಲ ಎಂದು ಬೀಗರು ತಗಾದೆ ತೆಗೆದರು. ಹಿತ್ತಾಳೆ ಕಿವಿಯ ಗಂಗಾಧರ ಅವರಿವರ ಮಾತು ಕೇಳಿ ಮಾಲತಿಯೊಡನೆ ಕಲಹಕಿಳಿದನು. ಗಂಡ ಹೆಂಡಿರ ಮಧ್ಯೆ ಬಿರುಕು ದೊಡ್ಡದಾಗುತ್ತಾ ಹೋಯಿತು. ಈ ಜಗಳವನ್ನು ಕಂಡು ಸಹೃದಯ(?)ರೊಬ್ಬರು ಸಲಹೆ ನೀಡಿದರು. 'ಬೇಡವಾದರೆ ಬಿಟ್ಟು ಬೇರೆ ಮದುವೆಯಾಗೆಂದು ಗಂಗಾಧರನಿಗೆ ತಿಳಿಸಿದರು. ಗಂಗಾಧರ ಗೊಂದಲದಿಂದ ಬಿಡುಗಡೆ ಪಡೆಯಲು ಯಾವ ಯಾವ ದಾರಿಗಳಿವೆ ಎಂದು ಯೋಚಿಸಿದನು. ಮರುಮದುವೆಗೆ ಮಾಲತಿಯ ಒಪ್ಪಿಗೆ ದೊರೆಯುತ್ತಿರಲಿಲ್ಲ. ನಂತರ ಗೆಳತಿ ಗಂಗಮ್ಮನ ಬುದ್ಧಿವಾದದ ಮೇಲೆ ಮಾಲತಿ ಒಪ್ಪಿಗೆಯ ಪತ್ರ ನೀಡಿದಳು.

ಪ್ರೀತಿ, ಒಲಮೆ, ವಿಶ್ವಾಸವಿಲ್ಲದ ಮೇಲೆ ಕೂಡಿ ಬಾಳಲು ಸಾಧ್ಯವೇ ಇಲ್ಲ ಅಂತೆಯೇ ಮಾಲತಿಯ ನಿರ್ಧಾರ ಸೂಕ್ತವೆಂದು ನಮಗೆ ತೋರುವದು. ಹಾಗಾಗಿ 'ಸೋತು ಗೆದ್ದವಳು' ಶೀರ್ಷಿಕೆ ಅರ್ಥಪೂರ್ಣವಾಗಿದೆ. ಆ ರೀತಿ ಯೋಚಿಸುವ ಕ್ರಮ ಲೇಖಕಿಯ ದೂರ ದೃಷ್ಟಿಯನ್ನು ಸೂಚಿಸುತ್ತದೆ. ಬದುಕಿನಲ್ಲಿ ' ಒಲುಮೆಯೇ ದೊಡ್ಡದು' ಅದರ ಆಚೆ ಯಾವ ಸಂಬಂಧವು ಇಲ್ಲ ಅದೇ ಇಲ್ಲವಾದರೆ ಬದುಕಿಗೆ ಅರ್ಥವಿಲ್ಲ. ಇಬ್ಬರು ನಾಯಕಿರೂ ಎದುರಿಸಿದ ಸಮಸ್ಯೆ ಒಂದೆ ಆದರೂ ಅದನ್ನು ಸರಳವಾಗಿ ಬಿಡಿಸಿಕೊಳ್ಳುವಲ್ಲಿ ಭಿನ್ನರಾಗುತ್ತಾರೆ. ಮಾಲತಿಯ ಪಾತ್ರ ಚಿತ್ರಣದಲ್ಲಿ ಲೇಖಕಿಯ ವೈಚಾರಿಕತೆ, ಕಲ್ಪನೆ, ಪ್ರಸ್ತುತ ದೃಷ್ಟಿಕೋನ ಬದುಕನ್ನು ಕುರಿತಾದ ಸ್ವಂತಿಕೆಗಳು ವ್ಯಕ್ತವಾಗುತ್ತವೆ. ಈ ಕಥೆ ಕೇವಲ ಕಥೆಯಾಗಿ ಉಳಿಯದೇ ಯೋಚನೆಗೆ ಹಚ್ಚುವ ನಂತರದ ದಿನಗಳಲ್ಲೂ ಓದುಗರನ್ನು ಕಾಡುವ ಗುಣಗಳನ್ನು ಹೊಂದಿರುವುದು ಇಲ್ಲಿಯೇ ವಿಶೇಷವಾಗಿದೆ.

೧೪] **ತನ್ನ ಹಸಿವು ತನ್ನ ಶಿಶುವು**

ಈ ಕಥೆಯಲ್ಲಿ ಅಕ್ಕನ ಮಗನನ್ನು ಅಕ್ಕರೆಯಿಂದ ತಂದು ಸಾಕಿದರು ಅವನ ವರ್ತನೆಗಳಿಂದಾಗಿ ವ್ಯಥೆ ಪಡುವ ನಾಯಕಿ ಕಥೆಯಾಗಿದೆ. ಮಕ್ಕಳಿಗಾಗಿ ಪರದಾಡುವ ಹೇಮಾ ಎಂಬ ಮುಗ್ದೆಯು ಪೂಜೆ ವ್ರತಗಳಿಂದ ಮಕ್ಕಳಆಗದಿದ್ದಾಗ ಜ್ಯೋತಿಷಿಯ ಮೊರೆ ಹೋಗುತ್ತಾಳೆ. ಜ್ಯೋತಿಷಿಯು ನಾಗದೋಷ ನಿವಾರಣೆಗಾಗಿ ಬೆಳ್ಳಿ ನಾಗರ ಶಿಲಾಪ್ರತಿಮೆ ಮಾಡಿಸಿ ಪೂಜಿಸಿಬೇಕು ಎಂದು ಹೇಳಿದನು. ಅದರಂತೆ ಹೇಮಾ ಬೆಳ್ಳಿ ನಾಗರ ಪ್ರತಿಮೆ ಮಾಡಿಸಿ ಪೂಜಿಸಿ ದಕ್ಷಿಣೆಯನ್ನು ಸಹ ಜ್ಯೋತಿಷಿಗೆ ನೀಡಿದಳು. ನಂತರ ಅವನು ಶಿಲಾಪ್ರತಿಮೆಯ ಜೊತೆಗೆ ದುಡ್ಡನ್ನು ಸಹ ದೋಚಿಕೊಂಡು ಓಡಿ ಹೋದನು. ನಂತರ ಹೇಮಳಿಗೆ ವೈದ್ಯಕೀಯ ಚಿಕಿತ್ಸೆ, ಶಸ್ತ್ರಚಿಕಿತ್ಸೆಯ ನಂತರವೂ ಅವಳಿಗೆ ಮಕ್ಕಳಾಗಲಿಲ್ಲ. ಅಕ್ಕನ ಮಗ ರಮೇಶನನ್ನು ಅತೀ ಮುದ್ದಿನಿಂದ ಸಾಕಿ ಸಲುಹಲು ಹೆಣಗುವಳು. ತನ್ನ ಇಚ್ಛೆಯಂತೆ ಎಲ್ಲವೂ ನಡೆಯಬೇಕೆಂಬ ಹಟದೊಂದಿಗೆ ಅವನು ಬೆಳೆದನು. ಕೊನೆಗೊಂದು ದಿನ ದಂಡಿಸಿದಾಗ ಅವನು ಮನೆ ತೊರೆದು ಹೋಗಿದ್ದನು. ಕಂಡವರ ಮಕ್ಕಳನ್ನು ತಂದು ಸಾಕಿದರೆ ಸಿಗುವ ಫಲವಿಷ್ಟೆ. ಆಗ ಅವಳಿಗೆ ಅಜ್ಜಿಯ ಮಾತು ನೆನಪಾಗುವುದು. 'ತನ್ನ ಹಸಿವೇ ಹಸಿವು ತನ್ನ ಶಿಶುವೇ ಶಿಶುವು.' ಹಸಿದಾಗ ತಾನುಂಡರೆ ತೃಪ್ತಿ, ಅದರಂತೆ ತನ್ನ ಕರುಳಿನ ಕುಡಿಯು ತನ್ನ ತಾಯ್ತನದ ಅಮೃತಫಲವು.

ಹಳ್ಳಿಗಳಲ್ಲಿ ಇಂದಿಗೂ ಮಕ್ಕಳಾಗದವರ ಬವಣೆ ಹೇಳತೀರದು 'ಗೂಳಿ ಬಿದ್ದರೆ ಅಳಿಗೊಂದು ಕಲ್ಲು' ಎಂಬಂತೆ ಒಬ್ಬೊಬ್ಬರಿಂದ ಒಂದೊಂದು ಬಿರುನುಡಿ ತಪ್ಪಿದ್ದಲ್ಲ. ಇದಕ್ಕಾಗಿ ಸವತಿಯೂ ಸಹ ಬರುವಳು. ಆ ಹೊತ್ತಿನ ಕಾಲದಲ್ಲಿಯೇ ಲೇಖಕಿಯೂ ದೇವರು ದಿಂಡಿರಲ್ಲದೇ, ಪೂಜೆ ವ್ರತಗಳಲ್ಲದೇ, ಜ್ಯೋತಿಷಿಯ ಕೈಚಳಕ ಅಲ್ಲದೇ ವಿಜ್ಞಾನಯುಗದ ಡಾಕ್ಟರರರು ಕುರಿತು ಕಥೆಯಲ್ಲಿ ಹೇಳಿರುವರು. ಅನ್ಯರ ಮಕ್ಕಳನ್ನು ತನ್ನವರೆಂದೂ ಸಾಕಿದರೂ ಪ್ರಯೋಜನವಾಗಲಿಲ್ಲ. ಲೇಖಕಿಯು ಇಂತಹ ಹೆಣ್ಣು ಮಕ್ಕಳ ಸಂಕಟವನ್ನು ತಮ್ಮ ಕಥೆಯಲ್ಲಿ ಕಥೆಯಾಗಿಸಿದ್ದಾರೆ.

೧೫] **ಸೀಮಂತದ ಉಡುಗೊರೆ**

ಈ ಕಥೆಯೂ ಉತ್ತರ ಕರ್ನಾಟಕದ. ಸಾಂಸ್ಕೃತಿಕ ಆಚರಣೆಯನ್ನು ಬಿಂಬಿಸುತ್ತದೆ. ಸೋಮಣ್ಣನವರಿಗೆ ೫ ಜನ ಮಕ್ಕಳು ೩ ನೆಯ ಮಗಳು ಲೀಲಾ ಲೀಲಳನ್ನು ಚಂದ್ರಶೇಖರನೊಂದಿಗೆ ಮದುವೆ ಮಾಡಿಸಿದರು. ಮದುವೆಯಲ್ಲಿ ವರೋಪಚಾರ ಸಾಲಲಿಲ್ಲವೆಂದು ಬೀಗರು ಅಸಮಾಧಾನಗೊಂಡರು. ಗರ್ಭಿಣಿಯಾದ

ಲೀಲಳಿಗೆ ಉಡಿ ತುಂಬುವ ಶಾಸ್ತ್ರಕ್ಕಾಗಿ ಮನೆಯಲ್ಲಿ ಸಂಭ್ರಮ ನಡೆದಿತ್ತು. ಗರ್ಭಿಣಿಯರಿಗೆ ಹೂ ಮುಡಿಸುವುದು ಮತ್ತು ಆ ಹೊತ್ತಿನಲ್ಲಿ ಸಾಮಾನ್ಯವಾಗಿ ಅಳಿಯನು ತನ್ನ ಗತ್ತನ್ನು ತೋರಿಸುವುದು ಇಂದಿಗೂ ಸಹ ನಡೆದುಕೊಂಡು ಬಂದಿದೆ. ಅವನ ಬಯಕೆಯನು ಮೊದಲು ತೀರಸಬೇಕಾದದ್ದು. ಕೆಲವೊಂದು ಪ್ರಾಂತದ ಕೆಲವೊಂದು ಕುಟುಂಬದಲ್ಲಿ ಇಂದಿಗೂ ಚಾಲ್ತಿಯಲ್ಲಿದೆ.

ಉಡುಗೊರೆಗಾಗಿ ಮದುವೆಯಲ್ಲಿ ಮುನಿಸಿಕೊಂಡ ಅಳಿಯ ಚಂದ್ರಶೇಖರ ಸೀಮಂತದ ಸಮಯದಲ್ಲಿ ಅದೇ ಗತ್ತನ್ನು ತೋರಿಸಿದನು. ಸ್ಕೂಟರ ತರುವಂತೆ ಹೆಂಡತಿಯ ಕೈಯಲ್ಲಿ ಪತ್ರ ಬರೆಯಿಸಿದನು. ಆದರೂ ಏನೂ ಪ್ರಯೋಜನವಾಗಲಿಲ್ಲ. ಮಾವ 'ಐದು ತೋಲಿ ಬಂಗಾರ ತೆಗೆದುಕೊಂಡು ಆರತಿ ಮಾಡಿಸಿಕೊಳ್ಳುವುದಾದರೆ ಮಾಡಿಸಿಕೊಳ್ಳಲಿ ಇಲ್ಲವಾದರೆ ಬಿಡಲಿ' ಎಂದನು. ಗೆಳೆಯ ಮನೋಹರನ ತಿಳುವಳಿಕೆಯ ಮಾತಿನಿಂದ ಚಂದ್ರಶೇಖರ ತಣ್ಣಗಾದರೂ ಆರತಿಯ ಸಮಯದಲ್ಲಿ ಅವನು ಬರಲಿಲ್ಲ. ಆರತಿ ಸಮಾರಂಭ ಮುಗಿಸಿ ಲೀಲಳ ತವರು ಮನೆಯವರೆಲ್ಲ ಹೋರಟು ನಿಂತರು. ಲೀಲಾ ಮಾತ್ರ ಹೊರಗೆ ಬಂದು ಕಳುಹಿಸುವಷ್ಟು ಧೈರ್ಯ ತೋರಲಿಲ್ಲ.

ಉತ್ತರ ಕರ್ನಾಟಕದಲ್ಲಿ ಮದುವೆ, ಸೀಮಂತದ ಸಮಯದಲ್ಲಿ ಅಳಿಯನದೇ ಕಾರುಬಾರು.ಬೇಕಾದದನ್ನು ಬೇಡುವದು ಅದನ್ನು ಹೆಂಡತಿಯ ಮನೆಯವರು ಕೊಡಬೇಕು. ಇದೊಂದು ವಾಡಿಕೆಯಾಗಿ ಮುಂದುವರೆದಿದೆ. ಅಂದಿನ ಕಾಲದಲ್ಲಿಯೇ ತುಂಬಾ ಚೆನ್ನಾಗಿ ಲೇಖಕಿಯರು ತಿಳುವಳಿಕೆಯನ್ನು ಮೂಡಿಸಲು ಯತ್ನಿಸಿದ್ದಾರೆ. ಈ ಕಾಲದಲ್ಲೂ ಈ ಆಚರಣೆಗಳಿವೆ ಆದರೆ ಮೊದಲಿನಷ್ಟು ಬಿಗಿಯಾಗಿಲ್ಲ. ಆಧುನಿಕ ಬದುಕು, ವಿದ್ಯಾಭ್ಯಾಸದ ಪ್ರಭಾವ, ವೈಚರಿಕತೆಯಿಂದ ಹೆಣ್ಣು ಮಕ್ಕಳ ಸ್ಥಿತಿ ಸುಧಾರಿಸಿದೆ ಎನ್ನಬಹುದು.

೧೬] ಭೂಮಿ ಬಿರಿಯಲಿಲ್ಲ

ಈ ಕಥೆಯೂ ವಿಶ್ವನಾಥ ಮತ್ತು ಆತನ ಪತ್ನಿ ಲಲಿತಳ ಜೀವನದಲ್ಲಿ ನಡೆದ ಘಟನೆಗಳ ಕುರಿತಾಗಿದೆ. ನಂದನವನದಂತೆ ನಲಿಯುತ್ತಿದ್ದ ಸುಖ ಸಂಸಾರದಲ್ಲಿ ದುಡ್ಡು ಪ್ರವೇಶಿಸಿದಂತೆ ಸಿರಿತನ ಹೆಚ್ಚಲು ಗಂಡ ಹೆಜ್ಜೆ ತಪ್ಪಿ ನಡೆದನು. ಹೆಂಡತಿಗೆ ಇಲ್ಲ ಸಲ್ಲದ ನೆಪ ಹೇಳಿ ಬಾಯಿ ಮುಚ್ಚಿದನು. ಹಲವಾರು ಚಟಗಳ ದಾಸನಾಗಿ ತನ್ನ ತನವನ್ನೇ ಮಾರಿಕೊಂಡ, ಇದ್ದ ಬದ್ದ ಸಾಮಾನುಗಳನ್ನು, ಒಡವೆಗಳನ್ನು ಮಾರಿದನು. ವಿಶ್ವನಾಥನು

ಹೊಂದಿದ್ದ ಫ್ಯಾಕ್ಟರಿಯನ್ನು ಸರ್ಕಾರದವರು ಲಲಿತಾಳಿಗೆ ತೆಗೆದಿದ್ದಾರೆಂದು ಪ್ಯಾಕ್ಟರಿಯ ಕೂಲಿ ಆಳು ಮನೆಗೆ ಬಂದು ಹೇಳುವನು. ಆಗ ಲಲಿತಾಳಿಗೆ ದಾರಿ ಕಾಣದಂತಾಯಿತು. ಅವಳು ತನ್ನ ಚಿಕ್ಕಪ್ಪನನ್ನು ಕಾಡಿ ಬೇಡಿ ತಮ್ಮ ಫ್ಯಾಕ್ಟರಿಯನ್ನು ಉಳಿಸಿಕೊಂಡಳು. ಮಕ್ಕಳಿಗೆ ಸದ್ಗುಣಗಳನ್ನು ಧಾರೆಯೆರೆದು ಲಲಿತ ಬೆಳೆಸುತ್ತಿದ್ದಳು. ಹೆಂಡತಿಯ ಪ್ರೀತಿ, ವಿಶ್ವಾಸಗಳನ್ನು ಮರಳಿ ಗಳಿಸಲು ವಿಶ್ವನಾಥ ಸತತ ಪ್ರಯತ್ನ ಪಡುತ್ತಿದ್ದನು. ತಮ್ಮ ಫ್ಯಾಕ್ಟರಿಯ ಜೀತದಾಳನೊಂದಿಗಿನ ಆಕೆಯ ಗಂಡನ ಸಂಬಂಧ ಕೂಲಿಯಾಳಿನ ಮಗ ಹಿಡಿಕೊಂಡು ಬಂದ ಪತ್ರದ ಮೂಲಕ ಲಲಿತೆಗೆ ತಿಳಿದು ಆಘಾತವನ್ನುಂಟು ಮಾಡಿತು. ಬರಸಿಡಿಲೆನಂತರಗಿತ್ತು. ಕಾಲು ಕೆಳಗಿನ ಭೂಮಿ ಏಕೆ ಕುಸಿಯಬಾರದೆಂದಳು. ರಾಮಾಯಣದ ಸೀತೆಯ ಸಂಕಟ ನೆನಪಾಯಿತು. ರಾಮನ ಹೆಂಡತಿ ಎಂದೋ ಸತ್ತು ! ಲವಕುಶರ ತಾಯಿಯಾಗಿ ಮಾತ್ರ ಬದುಕಿದಂತೆ, ತಾನೂ ಸಹ ಹೆಂಡತಿ ಸತ್ತು ಹಳೆಯ ಮಾತಾದರೂ ಮಕ್ಕಳ ತಾಯಿಯಾಗಿ ಬದುಕಬೇಕಾಗಿದೆ. ಜೀವಂತ ಹೆಣದಂತೆ ಬದುಕುವದು ಸಾಕಿನ್ನು, ಇನ್ನಾದರೂ ಭೂಮಿ ಬಿರಿಯಬಾರದೇ ಎಂದು ಹಲುಬಿದಳು. ಆದರೆ ಭೂಮಿ ಬಿರಿಯಲಿಲ್ಲ.ರೋಗಿ ಗಂಡನ ಮುದ್ದು ಮಕ್ಕಳ ಹೊಣೆ ನನ್ನ ಮೇಲಿದೆ. ತನ್ನ ಸಾವಿಗಿಂತ ಅವರ (ಉಳಿದವರ) ಬದುಕಿಗೆ ಬೆಲೆಯಿದೆ ಎಂದು ಬಾಳಿನ ನೊಗ ಕಟ್ಟುವಳು.

ಲೇಖಕಿಯರು ಹೆಣ್ಣೊಬ್ಬಳ ಸಂಕಟ, ಒಳಗುದಿ ನೋವುಗಳ ಜೊತೆಗೆ ಅವಳು ತೆಗೆದುಕೊಳ್ಳುವ ನಿರ್ಧಾರ ಅಚಲವಾದುದೆಂದು ತೋರಿಸಿರುವರು. ಗಂಡನಂತೆ ತಾನು ಸೇಡು ತೀರಿಸಿಕೊಂಡರೆ ಅದರಿಂದ ಪ್ರಯೋಜನವಿಲ್ಲ. ಸತ್ತರೂ ಪ್ರಯೋಜನವಿಲ್ಲ ಇದ್ದು ಬಾಳಿನ ನೌಕೆಯನ್ನ ತೇಲಿಸಬೇಕು. ಹುಟ್ಟು ಹಾಕಬೇಕು. ಮುನ್ನಡೆಯಬೇಕು. 'ಯಿಸಬೇಕು ಇದ್ದು ಜಯಿಸಬೇಕು' ಎಂಬ ದಾಸರ ವಾಣಿಗೆ ಸಾಕ್ಷಿಯಾಗುವಳು. ಬದುಕನ್ನು ಒಪ್ಪಿಕೊಳ್ಳುವ ದೃಷ್ಟಿಕೋನವಿದೆ.

೧೭] **ಅದೃಷ್ಟ ಪರೀಕ್ಷೆ**

ಜೋತಿಷ್ಯವನ್ನು ಅತಿಯಾಗಿ ನಂಬುವವರು ಅದರ ಮೋಸಕ್ಕೆ ಬಲಿಯಾಗಿ ಪೇಚಾಡುವರೂ ಇಂದಿಗೂ ಪ್ರಸ್ತುತ. ಅದರ ಪ್ರಭಾವಕ್ಕೊಳ್ಳಗಾಗಿ ಇದ್ದದ್ದನ್ನು ಕಳೆದುಕೊಂಡವರಿದ್ದಾರೆ. ಇಂತಹ ವಿಷಯವನ್ನು ತೆಗೆದುಕೊಂಡು ಲೇಖಕಿಯು ಈ ಕಥೆಯಲ್ಲಿ ವಿವರಿಸಿದ್ದಾರೆ.

ಕಥೆಯ ಪ್ರಾರಂಭದಲ್ಲಿ ಪ್ರೋಪೆಸರ್ ಒಬ್ಬರು ಸಮಾಜದಲ್ಲಿ ಹೆಣ್ಣು ಮಕ್ಕಳು ತುಂಬಾ ಮುಗ್ದರು ಮತ್ತು ಅವರೇ ಜ್ಯೋತಿಷಿಯ ಕರಾಮತ್ತಿಗೆ ಮರುಳಾಗುವರು ಎಂದು ತಮ್ಮ ಹೆಂಡತಿಯೊಂದಿಗೆ ಚರ್ಚೆಗೆ ಇಳಿಯುವರು. ಅದಕ್ಕೆ ಪ್ರತಿಯಾಗಿ ಅವರ ಹೆಂಡತಿಯು ಅವರ ಮನೆಯ ಹತ್ತಿರ ಜರುಗಿದ ಘಟನೆಯೊಂದನ್ನು ತಮ್ಮ ಪತಿಗೆ ತಿಳಿಸುವರು. ನಿರಂಜನ ತನಗೆ ನೌಕರಿ ಹಿಡಿಯಲು ತುಂಬಾ ಪರದಾಡಿ ಸೋತಿರುವನು. ಜೀವನದಲ್ಲಿ ಯಶಸ್ವಿಯಾಗಲು ಅವನು ಜ್ಯೋತಿಷಿಯ ಹೇಳಿಕೆಯಂತೆ ಹೆಂಡತಿಯ ಬಂಗಾರವನ್ನೆಲ್ಲ ಘಟ್ಟಿಯಾಗಿ ಮಾಡಿಸಿ ಜ್ಯೋತಿಷಿಗೆ ಕೊಟ್ಟನು. ಅವನು ಲಕ್ಷ್ಮಿದೇವಿಯ ಪೂಜೆ ಮಾಡಿದಂತೆ ನಟಿಸಿ ನಿಜವಾದ ಬಂಗರದ ಘಟ್ಟಿಯನ್ನು ಎಗರಿಸಿ ಬಿಟ್ಟಿದ್ದನು. ನಿರಂಜನ ಹೆಂಡತಿಗೆ ಏನು ಹೇಳಬೇಕೆಂದು ಪೇಚಾಡಿದನು. ಇಂತಹ ಸ್ವಾರಸ್ಯಕರವಾದ ಸುದ್ದಿಯನ್ನು ಪ್ರೋಪೆಸರರ ಹೆಂಡತಿಯು ಅವರಿಗೆ ಹೇಳುತ್ತಾ, ಗಂಡಸರು ಸಹ ಜ್ಯೋತಿಷಿಯ ಚಾಣಾಕ್ಷತನಕ್ಕೆ ಹೇಗೆ ಮರಳಾಗುತ್ತಾರೆಂದು ಜಾಣ್ಮೆಯಿಂದ ಈ ಸಂಗತಿಯನ್ನು ತಿಳಿಸುವಳು. ಇಲ್ಲಿ ಲೇಖಕಿಯರು ಸಮಾಜದಲ್ಲಿ ನಡೆಯುವ ಮೋಸವನ್ನು ಒರೆಗೆ ಹಚ್ಚಲು ಹೊರಟಿದ್ದಾರೆ. ಭಕ್ತಿ, ದೇವರ ಹೆಸರಿನಲ್ಲಿ ನಡೆಯುವ ಮೋಸದ ಜಾಲವನ್ನು ತಿಳಿಯಾಗಿ ತಿಳಿದ್ದಾರೆ.

೧೮) **ಅಕ್ಕನ ತದಿಗೆ**

ಶ್ರೀನಿವಾಸರಾಯರ ಹೆಂಡತಿ ತೀರಿದ ನಂತರ ಮಕ್ಕಳಿಗೋಸ್ಕರ ಅವರು ಬೇರೆ ಮದುವೆಯಾಗಲಿಲ್ಲ. ಹಿರಿಯ ಮಗಳಾದ ಕುಸುಮಾ ತನ್ನೆಲ್ಲ ಪ್ರೀತಿಯ ದಾರೆ ಎರೆದು ಆಟವಾಡುವ ವಯಸ್ಸಿನಲ್ಲಿ ತನ್ನ ತಮ್ಮಂದಿರು, ತಂಗಿಯೊಂದಿರನ್ನು ಸಾಕಿ ಸಲುಹಿದಳು ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದಳು. ಬೆಳೆದು ದೊಡ್ಡವರಾಗಿ ಒಬ್ಬೊಬ್ಬರು ಒಂದೊಂದು ಕೆಲಸದಲ್ಲಿ ತೊಡಗಿ ಸಂಪಾದನೆ ಮಾಡುತ್ತಿರುವರು. ಅಂದು 'ಅಕ್ಕನ ತದಿಗೆಯಾದ್ದರಿಂದ ಅಕ್ಕನ ತ್ಯಾಗ ಬಲಿದಾನ, ಪ್ರೀತಿಯ ಧ್ಯೋತಕವಾಗಿ ತಂಗಿಯು ಅಕ್ಕನಿಗೆ ಉಡುಗೊರೆಯನ್ನು ನೀಡುವಳು. ಇಂತಹ ಸೊಗಸಾದ ಸಾಂಸ್ಕೃತಿಕ ಸಂಗತಿಯನ್ನು ಬಿಂಬಿಸುವ ಕಥೆಗಳು ಮೊದಲ ತಲೆಮಾರಿನ ಲೇಖಕಿಯರಲ್ಲಿ

ವಿಶೇಷವಾಗಿ ಕಂಡು ಬರುವುದಿಲ್ಲ. ಆದರೆ ಸರಸ್ವತಿ ದೇವಿ ಗೌಡರರ ದಿವ್ಯ ದೃಷ್ಟಿಗೆ ಇಂತಹ ವಿಷಯವು ಸಿಕ್ಕಿರುವುದು ಅವರ ಜಾಣ್ಮೆಗೆ ಕನ್ನಡಿ ಹಿಡಿದಂತಿದೆ.

ಉತ್ತರ ಕರ್ನಾಟಕದಲ್ಲಿ ಅಣ್ಣ-ತಮ್ಮ , ಅಕ್ಕ- ತಂಗಿಯರ ಕುರಿತಾಗಿಯೂ ವಿಶೇಷ ಹಬ್ಬಗಳು ಅಚರಣೆಯಲ್ಲಿವೆ. ದೀಪಾವಳಿಯ ನರಕ ಚತುರ್ದಶಿಯ ದಿನ ಮನೆ ಮಂದಿಗೆಲ್ಲ ಆರತಿ ಮಾಡುತ್ತಾರೆ. ಅಮವಾಸ್ಯೆಯ ನಂತರ ಪಾಡ್ಯ ದಿವಸವೂ ಸಹ ಆರತಿ ಮಾಡುತ್ತಾರೆ. ಪಾಡ್ಯದ ನಂತರ ಅಣ್ಣನ ಬಿದಿಗೆ ಬರುತ್ತದೆ. ಅಂದು ಸಹ ವಿಶೇಷತೆಯಿಂದ ಅಕ್ಕ ತಂಗಿಯರು ಅಣ್ಣ ತಮ್ಮಂದಿರಿಗೆ ಆರತಿ ಮಾಡುತ್ತಾರೆ ಮತ್ತು ಉಡುಗೊರೆಯನ್ನೂ ಸಹ ನೀಡುತ್ತಾರೆ. ಅಣ್ಣನ ಬಿದಿಗೆಯ ಮರುದಿನ ಅಕ್ಕನ ತದಿಗೆ ಬರುತ್ತದೆ. ಇದು ತುಂಬಾ ವಿಶೇಷವಾದ ದಿನ. ಈ ದಿನದಂದು ತಮ್ಮ ತಮ್ಮ ಹಿರಿಯ ಅಕ್ಕಂದಿರಿಗೆ ತಂಗಿಯರು ವಿಶೇಷವಾಗಿ ಆರತಿ ಮಾಡಿ ದೇವರಿಗೆ ಪೂಜೆ ಸಲ್ಲಿಸಿ ಮತ್ತು ಅಕ್ಕಂದಿರಿಗೆ ಉಡುಗೊರೆಯನ್ನು ನೀಡುವುದು ಉತ್ತರ ಕರ್ನಾಟಕದಲ್ಲಿ ಇಂದಿಗೂ ಆಚರಣೆಯಲ್ಲಿವೆ. ಈ ಕತೆಯಲ್ಲಿ ತಂಗಿಯರು ತನ್ನ ಅಕ್ಕನಿಗೆ ಅಕ್ಕನ ತದಿಗೆಯ ದಿನ ಉಡುಗೊರೆ ನೀಡುವುದು ವಿಶೇಷವಾಗಿದೆ. ಈ ಕತೆಯಲ್ಲಿ ಲೇಖಕಿಯ ಒಂದು ರಚನಾತ್ಮಕ ದೃಷ್ಟಿ ಕೋನವನ್ನು ನಾವು ಕಾಣುತ್ತೇವೆ. ಈ ದಿನದ ಕುರಿತಾದ ಕತೆಗಳು ವಿಶೇಷವಾಗಿ ಯಾರೂ ಬರೆದಿಲ್ಲ. ಬಹುಶಃ ಮಹಿಳಾ ಪರ ಕಾಳಜಿ ಇರುವ ಸರಸ್ವತಿ ದೇವಿಯವರಿಗೆ ಮಾತ್ರ ಇದು ಸಾಧ್ಯವಾಗಿದೆ. ಮಹಿಳೆಯರ ಇತರ ಮುಖಗಳಿಗಿಂತ ಭಿನ್ನವಾದ ಪಾತ್ರವನ್ನು ತಮ್ಮ ಕತೆಯಲ್ಲಿ ಲೇಖಕಿಯು ಬಿಂಬಿಸಿರುವಳು.

ಒಟ್ಟಾರೆಯಾಗಿ ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ಸರಸ್ವತಿ ದೇವಿಯವರು ಒಬ್ಬ ಉತ್ತಮ ಕಥೆಗಾರರು. ಅವರು ವೈಚಾರಿಕತೆ, ಸ್ವತಂತ್ರವಾದ ಮತ್ತು ಹರಿತವಾದ ದೃಷ್ಠಿಕೋನವನ್ನು ಹೊಂದಿದ್ದಾರೆ. ಅವರು ತಮ್ಮ ಕಥೆಗಳಲ್ಲಿ ಅಂದಿನ ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿದ್ದ ಅನೇಕ ಸಂಪ್ರದಾಯದ ಹೆಸರಿನ ಅನಾಚಾರಗಳನ್ನು ಎತ್ತಿ ಹಿಡಿದಿದ್ದಾರೆ. ಅವರ ಬಾಳಿದ ಪರಿಸರದಲ್ಲಿನ ದೈನಂದಿನ ಘಟನೆಗಳನ್ನು ತಮ್ಮ ಕಥೆಯಲ್ಲಿ ಆರಿಸಿಕೊಂಡಿದ್ದಾರೆ. ಅವರೆ ಹೇಳುವಂತೆ 'ಬರೆದು ಪುಟ ತುಂಬಿಸುವ ಹವ್ಯಾಸ ಎನಗಿಲ್ಲ.' ಎಂದಿದ್ದಾರೆ. 'ಕಥೆ ಸತ್ಯ ಕಥೆ ಆಗಿರಲೇಬೇಕೆಂಬ ನಿಯಮವಿಲ್ಲ. ಅದು ಕಟ್ಟು ಕಥೆಯಾಗಿರಲೂಬಹುದು ಆದರೆ ಈ ಸಂಗ್ರದಹಲ್ಲಿ ಬಂದವುಗಳು ಮಾತ್ರ ಸಂಪೂರ್ಣವಾಗಿ ಸತ್ಯ ಕಥೆಗಳು. ಸತ್ಯದ ಹಿನ್ನೆಲೆಯ ಮೇಲೆ ಕಲ್ಪನೆಯ ಗೆರೆ ಎಳೆದಿರಬಹುದು; ಊಹೆ ಬಣ್ಣ ತುಂಬಿರಬಹುದು ಬುದ್ಧಿ ಕಲಾ ಸೃಷ್ಠಿಯ ಕೈವಾಡ ತೋರಿರಬಹುದು. ಆದರೆ ಕಥೆಗಳಲ್ಲಿ ಬರುವ ಪಾತ್ರಗಳು

ಮಾತ್ರ ಕಾಲ್ಪನಿಕವಲ್ಲ. ನಮ್ಮ ಸಮಾಜದಲ್ಲಿ ದಿನನಿತ್ಯವೂ ಅವರನ್ನು, ಅಂಥವರನ್ನು ಹಿಂದೆಯೂ ಕಾಣುತ್ತಿದ್ದೇವು ಇಂದೂ ಕಾಣುತ್ತಿದ್ದೇವೆ' (ಅಲ್ಪವಿರಾಮ-ಪು.ಸಂಖ್ಯೆ-೦೪) ಅವರ ಈ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ ಅವರ ಕಥೆಗಳನ್ನು ಓದಿದಾಗ ಮಾತ್ರ ಮನದಟ್ಟಾಗುತ್ತದೆ.

ಅವರ ಮೊದಲ ಕಥಾಸಂಕಲನದಲ್ಲಿಯ ಕಥೆಗಳು ೧೯೪೨ ರಿಂದ ೧೯೫೭ ರ ಅವಧಿಯಲ್ಲಿ ರಚಿತವಾದವು ಅವರು ಅಂದು ಎತ್ತಿಕೊಂಡಿರುವ ವಿಚಾರಗಳು ಕೇಳಿದ ಪ್ರಶ್ನೆಗಳು ಇಂದಿನ ಸಮಾಜದಲ್ಲಿ ಬೇರೂರಿದ ಆಚರಣೆಗಳನ್ನು ಪ್ರಶ್ನಿಸಿದಂತಿದೆ. ಅವರ ಈ ವೈಚಾರಿಕತೆ, ಸೃಜಶೀಲತೆ, ಹರಿತವಾದ ದೃಷ್ಟಿಕೋನವನ್ನು ನಾವು ಅವರ ಮೊದಲ ಕಥೆಯಾದ ('ಅಲ್ಪವಿರಾಮ'ದ) 'ಒಂದು ಸಮಸ್ಯೆ'ಯಲ್ಲಿ ಗುರುತಿಸಬಹುದು. ಮಧ್ಯಮ ಮತ್ತು ಕೆಳ ವರ್ಗದ ಪತಿ ಪತ್ನಿಯನ್ನು ತುಲನೆ ಮಾಡುತ್ತಾ -' ಇಂದು ಮೇಲಿನ ವರ್ಗದರಲ್ಲಿ, ಅದರಲ್ಲಿಯೂ ಪ್ರಥಮ ವರ್ಗದಲ್ಲಿ ವಿಶೇಷವಾಗಿ ಕಂಡು ಬರುವ ಅಸಮ ದಾಂಪತ್ಯಕ್ಕೆ, ಕೃತ್ರಿಮ ಪ್ರೇಮಕ್ಕೆ, ವಿಷಮ ಸಂಸಾರಕ್ಕೆ ಸ್ತ್ರೀಯರ ಆರ್ಥಿಕ ಪಾರತಂತ್ರ್ಯವೇ ಕಾರಣವೇ? ಆರ್ಥಿಕ ರೀತಿಯಿಂದ ಅವಳು ಸ್ವತಂತ್ರಳಾದರೆ ಈ ವ್ಯಾಧಿ ವಾಸಿಯಾಬಹುದೇ? ಅವಳು ಈ ರೀತಿ ಸ್ವತಂತ್ರಳಾಗಬಲ್ಲಳೇ? ಅವಳಿಗೆ ಅವಳು ಸಾಧ್ಯವೇ ? ಅದೇ ನನಗೊಂದು ಸಮಸ್ಯೆಯಾಗಿದೆ.' ಎಂದು ಅವರ ಕಥೆ ಕೊನೆಗೊಳ್ಳುವುದು, ಲೇಖಕಿಯ ಅಂದಿನ ವಿಚಾರಲಹರಿಯು ಆರ್ಥಿಕ ಸ್ವತಂತ್ರ್ಯದ ಅಗತ್ಯತೆಯನ್ನು ಬಯಸುವಷ್ಟು ಮುಂದುವರೆದುದು ಅವರ ಸ್ಥಾನವನ್ನು ಅಂದಿನ ಲೇಖಕ ಲೇಖಕಿಯರಗಿಂತ ವಿಭಿನ್ನವೆಂದು ತೋರಿಸುವುದು.

ಲೇಖಕಿಯು ಅಂದಿನ ಸಮಾಜದಲ್ಲಿ ಜನಜನಿತವಾಗಿದ್ದ ವರದಕ್ಷಿಣೆ, ಬಹು ಪತ್ನಿತ್ವ, ಸ್ತ್ರೀ-ಪುರುಷರ ಅಸಮಾನತೆಯ ವಿರುದ್ಧ ಸಿಡಿದೇಳಲು ಅವರ ಬರವಣಿಗೆ ಅವರಿಗೆ ಅಸ್ತ್ರವಾಯಿತು. ಅಂದು ಜಾರಿಗೆ ಬಂದ ಹೊಸ ಹೊಸ ಕಾಯಿದೆ-ಕಾನೂನುಗಳ ಅರಿವು ಅವರಿದ್ದ ಪರಿಸರ, ಅವರ ಜ್ಞಾನಾರ್ಜನೆ ಮತ್ತು ಉನ್ನತ ಅಧಿಕಾರಿಯಾದ ಅವರ ತಂದೆಯವರಿಂದ ತಿಳಿದು ಬಂದಿರಬಹುದು. ವರದಕ್ಷಿಣೆಯನ್ನು ಕೊಡಲಿಲ್ಲವೆಂಬ ಕಾರಣಕ್ಕೆ ಮರುಮದುವೆಯಾದ ಪ್ರಸಂಗವನ್ನು, ಸಾಮಾಜಿಕ ಅನ್ಯಾಯವನ್ನು, ವೈಯಕ್ತಿಕ ದುರಂತಗಳನ್ನು ಅವರು ಖಂಡಿಸುವರು. 'ಪ್ರಚಲಿತ ವಿಕೃತಿಗಳು ಅಳಿಯುವವರೆಗೆ ಸೌಭಾಗ್ಯವತಿ, ಕುಮಾರಿಯರ, ಸುಮಂಗಲ ವಿಧವೆಯರ ಸಂಖ್ಯೆ ಕಡಿಮೆಯಾಗಲಾರದು.' ಎಂದು ಸಾಮಾಜಿಕ ಅನಿಷ್ಟವಾದ ವರದಕ್ಷಿಣೆ ಕುರಿತು ಹಳಿಯುವರು.

ಬಾಲ್ಯವಿವಾಹವನ್ನು ಅವರು ಖಂಡಿಸುವರು. ಬಾಲ್ಯ ನಿಶ್ಚಯಗೊಳಿಸಿ ಅವರು ದೊಡ್ಡವರಾದಾಗ ಬೇರೆ ಅಭಿಪ್ರಾಯ ಮೂಡಿ ಹುಡುಗ ಬೇರೆ ಮದುವೆಯಾದರೂ , ಕಥಾ ನಾಯಕಿಯಾದ ಶೈಲು ಮಾತ್ರ– 'ಸೇಡಿಗೆ ಪ್ರತಿ ಸೇಡು ಎನ್ನುತಿದೆ ಬುದ್ಧಿ. ನಿನಗಾಗಿ ಅವನ ಜೀವನದಲ್ಲಿ ಸ್ಥಾನವಿಲ್ಲದಿದ್ದರೆ ಅದಕ್ಕೇಕೆ ಪರಿತಾಪ? ತೆರೆದ ಸಹೃದಯಲ್ಲಿ ನಿನ್ನ ಸ್ಥಾನವನ್ನು ಶೋಧಿಸು ಎನ್ನುತಿದೆ ಬುದ್ಧಿ.' ಹೀಗೆ ವಿಚಾರಿಸುತ್ತ ಅವನ ದಾರಿಯಿಂದ ಬದಿಗೆ ಸರಿದು ತನ್ನ ಬಾಳನ್ನು ರೂಪಿಸಲು ಅಣಿಯಾಗುವಳು. ಇಂತಹ ಪಾತ್ರವನ್ನು ಸೃಷ್ಠಿಸಿರುವಲ್ಲಿ ಅವರ ವೈಚಾರಿಕತೆಯು ಸ್ಪಷ್ಟವಾಗಿ ಗೋಚರಿಸುತ್ತದೆ.

ಮಹಿಳೆಯರ ಬದುಕು ಅನ್ಯಾಯದಿಂದ ಹತಾಶೆಗೊಂಡು ಕಂಗಾಲಾಗಬಾರದು. ಹೊಸದೊಂದು ಹಸನಾದ ದಾರಿ ಹಿಡಿದು 'ತನ್ನತನ'ವನ್ನು ಮೆರೆಯಬೇಕು. ಇಂತಹ ವಿಚಾರಗಳನ್ನು ಅವರ ಕಥೆಯಲ್ಲಿ ನಾವು ಸ್ಪಷ್ಟವಾಗಿ ಗುರುತಿಸಬಹುದು. ಪರಿತ್ಯಕ್ತ ಮಹಿಳೆಯ ಸಂಕಟ, ಬವಣೆಗಳು ಅವರ 'ಹಾಲು ಉಕ್ಕಿತು.' ಎಂಬ ಕತೆಯಲ್ಲಿ ಬಿಂಬಿತವಾಗಿದೆ. ಅವರ ಹಿಡಿತ ಮೀರಿ ಪಾತ್ರ ರೂಪಗೊಂಡಿದೆ. ತನ್ನ ತವರು–ಗಂಡನ ಮನೆಯಿಂದ ವಂಚಿತಳಾದ, ದೂರಾದ ಮಹಿಳೆಯು 'ರಟ್ಟೀ ಮುರಿದು ರೊಟ್ಟೀ ತಿನ್ನಬೇಕು. ಈ ಹಂಗಿನ ಕೂಳಿಗೆ ಬೀಳ ಬಾರದೆಂದು' ತನ್ನ ಬದುಕನ್ನು ತಾನು ರೂಪಿಸಿಕೊಂಡಳು.

ಸರಸ್ವತಿಯವರು ಬರೆದ ಕತೆಗಳಲ್ಲಿ ಬಹುಪಾಲು ಕಥೆಗಳು ಸಮಾಜದಲ್ಲಿ ಸ್ತ್ರೀ ಸಮಾನತೆ ಅವರ ಸ್ಥಾನ ಮಾನಗಳ ಕುರಿತು ಹೇಳುತ್ತವೆ. ಅಲ್ಲದೆ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಅನೇಕ ಸಾಂಸ್ಕೃತಿಕ ಸಂಗತಿಗಳ ಕುರಿತು ಹೇಳಿದ್ದಾರೆ. ಚೊಚ್ಚಲ ಗರ್ಭಿಣಿಯ ಬಯಕೆ ತೀರಿಸುವುದು, ಹೂ ಮೂಡಿಸುವುದು, ಸೀಮಂತ ಮಾಡುವುದು ಇದನ್ನು 'ಹೂವಿನ ದಂಡೆ', 'ಸೀಮಂತದ ಉಡುಗೊರೆ'ಯ ಪ್ರಾರಂಭದಲ್ಲಿ ಕಂಡರೂ ಕತೆಯೂ ಬೇರೆ ಸಮಸ್ಯೆಗಳನ್ನು ಕುರಿತದ್ದಾಗಿದೆ. ಇಂದಿಗೂ ಉತ್ತರ ಕರ್ನಾಟಕದಲ್ಲಿ ಹೂಮೂಡಿಸುವುದು, ಉಡುಗೊರೆ ನೀಡುವುದು ಪ್ರಚಲಿತದಲ್ಲಿದೆ.

ಅವರ 'ಅಕ್ಕನ ತದಿಗೆ' ಒಂದು ಹೊಸ ರೀತಿಯ ಕಥೆ ಇದೆ. ಇದರಲ್ಲಿ ಅಣ್ಣನ ಬಿದಿಗೆಯಾದ ಮರುದಿನ ಅಕ್ಕನ ತದಿಗೆ ಬರುವುದು. ಆ ದಿನ ಅಕ್ಕನನ್ನು ಹರಿಸಿ ಉಡುಗೊರೆ ನೀಡುವುದು ಇಂದಿಗೂ ನಡೆದು ಬಂದಿದೆ. ಇದನ್ನು ಅವರ ಕಥೆಯಲ್ಲಿ ನಾವು ಕಾಣುತ್ತೇವೆ.

ಡಿ.ಸಿ.ಪಾವಟೆಯವರು ಅವರ ಕಥೆಗಳ ಕುರಿತು ಈ ರೀತಿ ಹೇಳುತ್ತಾರೆ. 'ಈ ಕಥೆಗಳು ನಿಜವಾಗಿಯೂ ಆಶಾದಾಯಕವಾಗಿವೆ. ಅವರ ಕಥನ ಕಲೆ, ತಂತ್ರ ನಾವೀನ್ಯವನ್ನು, ಶೈಲಿಯ ಸಂಯಮವನ್ನು ಪಡೆದು ಇನ್ನು ಹತ್ತು ಕಥಾ ಸಂಗ್ರಗಳನ್ನು ಕನ್ನಡ ವಾಚಕ ಲೋಕಕ್ಕೆ ಅವರು ಒದಗಿಸುವಂತಾಗಲೀ ಎಂದು ನಾನು ಹಾರೈಸುತ್ತೇನೆ. ಎಂದು ಅವರು 'ಅಲ್ಪವಿರಾಮ'ದ ಮುನ್ನುಡಿಯಲ್ಲಿ ಹೇಳಿರುವದು ಅರ್ಥಪೂರ್ಣ.

ಅಧ್ಯಾಯ-೪

ಸರಸ್ವತಿದೇವಿಯವರ ಕವಿತೆಗಳು

ಸರಸ್ವತಿದೇವಿಯವರು ಸುಮಾರು ೧೯೬೯ ರ ಹೊತ್ತಿಗೆ ತಮ್ಮ ಕವನಸಂಕಲವೊಂದನ್ನು ಪ್ರಕಟಿಸಲು ಬಯಸಿದ್ದರು ಅದು ಫಲಿಸಲಿಲ್ಲ. ನಂತರದ ಸುಮಾರು ಒಂದೂವರೆ ದಶಕದ ಅವಧಿಯಲ್ಲಿ ಅವರ ಹೆಚ್ಚಿನ ಕವನಗಳು ರಚನೆಯಾಗಿವೆ. ಅವರು ಗತಿಸುವುದಕ್ಕೆ ಕೆಲವು ತಿಂಗಳು ಮುಂಚೆಯೂ ಕವನಗಳನ್ನು ಬರೆದಿದ್ದಾರೆ. ತಮ್ಮ ಕಾವ್ಯದ ಬಗ್ಗೆ ಅವರೇ ಹೇಳುವಂತೆ – "

ಬರೆದು ಪುಟ ತುಂಬಿಸುವ ಹವ್ಯಾಸ ಎನಗಿಲ್ಲ।
ಇಳದನಿಯ ಒತ್ತಾಸೆ ಸಿಡಿದೆದ್ದು ನಿಂತಾಗ।
ಬರೆಯುವೆನು ಹೆಣ್ಣಿನ ನೋವು ನಲಿವುಗಳು
ಇಳಿಯುವುದು ಹೊರೆಯು ತಿಳಿಯಹುದು ಮನವು॥ ಸಿರಿಮುಡಿಗೆ॥

ಸರಸ್ವತಿಯವರ ಹಲವು ಸಾಂದರ್ಭಿಕ ರಚನೆಗಳಲ್ಲಿಯೂ ಆದರ್ಶಗಳು, ಭಾವಲಹರಿಗಳು ಬಿಂಬಿತವಾಗಿವೆ. ಶಿವಶರಣ ಚಾರಿತ್ರ್ಯ, ಹಿರಿಮೆಗಳಲ್ಲಿಯೂ ಅವರ ತನ್ಮಯತೆ ತುಂಬಿ ಸೂಸಿದೆ. ಸರಸ್ವತಿದೇವಿಯವರು ಸಂಕ್ಷಿಪ್ತವಾಗಿ ಸುಲಲಿತವಾಗಿ ಆತ್ಮಕಥನವೊಂದನ್ನು ನೀಡಿರುವರು. ಅದರಲ್ಲಿ ಅವರ ಬದುಕು, ಕಂಡುಂಡ ಅನುಭವಗಳು, ಸಂಗಾತಿಯ ಒಡನಾಡ, ಮರೆಯಾದ ನಂತರದ ಅವರ ಬದುಕು ಇತ್ಯಾದಿಗಳನ್ನು 'ವಿಷನುಂಗಿ ಬದುಕಬೇಕು' ಎಂಬ ಶೀರ್ಷಿಕೆಯೊಂದಿಗೆ ಚಿತ್ರಿಸಿರುವರು.

ಭಾರತ ಸ್ವಾತಂತ್ರ ಪೂರ್ವ ಮತ್ತು ನಂತರದ ಸ್ಥಿತಿ-ಗತಿಯನ್ನು ಚಂದ್ರಲೋಕಯಾನವನ್ನು ಕುರಿತು ಅವರು ಕವಿತೆಗಳನ್ನು ಬರೆದಿರುವರು. ಭಾರತಮಾತೆಗೆ, ಕನ್ನಡತಾಯಿಗೆ, ತಮ್ಮ ಕಾವ್ಯಮಾಲೆಯನ್ನು ಅರ್ಪಿಸಿರುವರು, 'ಸಿರಿಮುಡಿಗೆ' 'ಶರಣು ತಾಯಿ ಭಾರತಿ' ಉದಯವಾಯಿತು. ಇಂದು ಕರ್ನಾಟಕದ ರಾಜ್ಯ ಇದೇ ಮೂದಲಾದ ಕವಿತೆಗಳು ಅವರ ರಾಷ್ಟ ರಾಜ್ಯ ಪ್ರೇಮಕ್ಕೆ ಸಾಕ್ಷಿಯಾಗಿವೆ.

ಶರಣರ ಬದುಕನ್ನು ತಮ್ಮ ಬಾಳಿನ ದಾರಿಯಲ್ಲಿ ತುಳಿದವರು. ಅದರಂತೆ ನಡೆದವರು ಸರಸ್ವತಿದೇವಿಯವರು ಅಕ್ಕಮಹಾದೇವಿಯವರು (ಕೋಲಿನಪದ) ಶರಣು ಗಂಗಾಂಬೆ ಇತ್ಯಾದಿ ಶಿವ-ಶರಣರ ಕುರಿತು ಕವಿತೆ ರಚಿಸುವರು. ಅಲ್ಲದೆ ತಾವು ಹತ್ತಿರದಿಂದ ಕಂಡ ಹಲವು ಮಹನೀಯರ ಕುರಿತು ಅವರ ಮೇಲೆ ಕವಿತೆ ಬರೆದಿರುವರು. ಜಯದೇವಿತಾಯಿಲಿಗಾಡೆ, ಡಾ॥ ಆರ್.ಬಿ ಪಾಟೀಲ ವೈದ್ಯರು ಇತ್ಯಾದಿ.

ಸ.ದೇವಿ ಸಂಕ್ಷಿಪ್ತವಾಗಿ ಆತ್ಮಕಥವೊಂದನ್ನು ನೀಡಿರುವರು. ಬದಕು ಬವಣೆಯ ಸಿಂಹಾವಲೋಕನ ಅಲ್ಲಿ ಚಿತ್ರಿತವಾಗಿದೆ. ಬದುಕಿನ ಚರಿತ್ರೆಯ ಹಲವು ವ್ಯಕ್ತಿ ದೈನಂದಿನ ಬದುಕಿನ ತಾವು ಮೆಚ್ಚಿರುವ ಹಲವು ವ್ಯಕ್ತಿಗಳ ವ್ಯಕ್ತಿತ್ವವನ್ನು ಹೃದಯಂಗಮವಾಗಿ ತಮ್ಮ ಕವನಗಳಲ್ಲಿ ಸೆರೆ ಹಿಡಿದಿದ್ದಾರೆ. ಅಲ್ಲದೆಯೂ ತಾವು ಬಾಳ ಬದುಕಿದ ತಾಯ್ನಾಡಿನ ಆಯಾ ಕಾಲದ ಒತ್ತಡಗಳು ಚೀನಾ-ಭಾರತ ಘರ್ಷಣೆ, ಚಂದ್ರಲೋಕಯಾನ ಇಂತಹ ರಾಷ್ಟ್ರೀಯ ಜಾಗತಿಕ ಘಟನೆಗಳಿಗೂ ಅವರು ಸ್ಪಂದಿಸಿದ್ದಾರೆ.

೧] **ಸಿರಿಮುಡಿಗೆ**

ಬದುಕು ಸುಖ-ದುಃಖಗಳಿಂದ ಕೂಡಿದ್ದು ಆದರೆ ಸರಸ್ವತಿ.ದೇವಿಯಂತವರನ್ನು ಇಲ್ಲಿ ಸುಖಕ್ಕಿಂತ ದುಃಖ ತೀವ್ರವಾಗಿ ತಟ್ಟುತ್ತದೆ. ಎಲ್ಲೆಲ್ಲೂ ನೋವು ನರಳಾಟವಿರುವುದನ್ನು ಗ್ರಹಿಸುವ ಸೂಕ್ಷ್ಮತೆ ಅವರಿಗಿದೆ. 'ಬದಕು ಬೇವು-ಬೆಲ್ಲದ ಕೂಟವಾದರು ಬೇವಷ್ಟೆ ಉಳಿಯಿತು ಬೆಲ್ಲ ಬಲ್ಲದರ ಪಾಲು, ಕಂಡಾಗ ಮೂಡುವುದು ಕಟುನುಡಿಯ ಸಾಲು।' ಎನ್ನುವಲ್ಲಿ ಅಲ್ಲಿನ ದೌರ್ಜನ್ಯಕ್ಕೆ ಕುದಿಯುವ ತಮ್ಮ ಸ್ಥಿತಿಯನ್ನು ವ್ಯಕ್ತಪಡಿಸಿದ್ದಾರೆ. ಕಿತ್ತೂರ ಛಲದಂಕಮಲ್ಲರ ನಾಡಿದ್ದಂತೆ ಪರರ ಎದುರಿಸಿ ಸೋತರು ಗೆದ್ದಳು ರಾಣಿಯೆಂದು ಕಾರ್ಯ ಸಾಹಸವನ್ನು ಅತೀ ಶಿಸ್ತಿನಿಂದ ಗುರುತಿಸುವರು. ತನ್ನ ಕಾವ್ಯದಲ್ಲಿ ಅಂತಹ ಕಾವಿಲ್ಲವಾದರೂ ಹನಿಜೇನು ಅಲ್ಲೊಮ್ಮೆ ಇಲ್ಲೊಮ್ಮೆ ಬಾಳನಲಿ ಸಿಕ್ಕಾಗ ಕಲ್ಲರಳ ಹೂವಾಗಿ ಭಾವಗಳು ನಕ್ಕಾಗ। ಈ ಕಾವ್ಯಮಾಲೆಯನ್ನು ಹೆಣೆದು ಅರ್ಪಿಸುವೆನು ಕನ್ನಡ ತಾಯಿಗೆ ಎಂದಿರುವರು.

ಕವನ ರಚಿಸುವ ತಂತ್ರಗಾರಿಕೆ ನಾನರಿಯದಿದ್ದರು ಸ್ಫೂರ್ತಿ ಸೆಲೆಯು ಚಿಮ್ಮಲು ಕೆಲ ಸಾಲುಗಳನ್ನು ಬರೆದು ನಿನಗರ್ಪಿಸಿರುವೆನು ಇದು ಇತರರಿಗೆ ರುಚಿಸಿದರೆ ಮತ್ತು ಆತ್ಮತೃಪ್ತಿ ಶಾಂತಿ ದೊರೆಯಲಿ. ಇದುವೆ ನನ್ನ ಹಾರೈಕೆಯಾಗಿದೆ. ಎಂದು ನಿರೂಪಿಸಿರುವರು.

೨] **ಶರಣು ಗಂಗಾಂಬೆ**

ಶಿವಶರಣರ ಬದುಕನ್ನು ತಮ್ಮ ಬದುಕಿನಲ್ಲಿ ಪರಿಪಾಲಿಸಿದ ಅವರ ದಾರಿಯನ್ನೇ ತುಳಿಯಲೆತ್ನಿಸಿದ ಸ.ದೇವಿಯವರು ಈ ಕವನದಲ್ಲಿ ಬಸವಣ್ಣನವರ ಹೆಂಡತಿ ಶಿವಶರಣೆಯಾದ ಗಂಗಾಂಬಿಕೆಯನ್ನು ಮತ್ತು ಅವಳ ಜೀವನ ಶೈಲಿಗಳನ್ನು ಕುರಿತು ಬರೆದಿರುವರು. ಶರಣು ಶರಣೆಂದು ನಮಿಸುವರು. ಪತಿಯೇ ಪರದೈವ ಎಂಬಂತೆ ಅಣ್ಣ ಬಸವಣ್ಣನವರು ಕಲ್ಯಾಣದೊರೆದು ಕೂಡಲದತ್ತ ನಿರ್ಗಮಿಸಿದರು ಆಗ ಅವರ ನೆರಳನ್ನೇ

ಹಿಂಬಾಲಿಸಿ ಮರು ಪ್ರಶ್ನೆಗೈಯದೇ ತೆರಳಿದಾಗ ಮಹಾಮನೆಯು ಶೂನ್ಯದಿಂದ ತುಂಬಿತು.

ಗುರುವಿನ ಅಣತಿಯಂತೆ ಶಿವಶರಣರ ಸೇವೆಯನ್ನು ಶಿರಸಾವಹಿಸಿ ಪಾಲಿಸಿದೆ. ಬರಡಾದ ಬಾಳಿನಲ್ಲಿ ಹೊಸ ಬೆಳಕು ತುಂಬಿದೆ. ಪತಿಯೇ ಪರದೈವ, ಪತಿಯೇ ಪ್ರೇರಕ ಶಕ್ತಿಯಾಗಿರಲು, ನೀವು ಪೂರಕ ಶಕ್ತಿಯಾಗಿ ಅವರ ಆಸೆಯನ್ನು ಮತ್ತು ಸಾಧನೆಯನ್ನು ಸಾಧಿಸಲು ನಿಮ್ಮ ಬದುಕನ್ನು ಅವರೊಂದಿಗೆ ಸವೆಸಿದಿರಿಯೆಂದು ಗಂಗಾಂಬಿಕೆಯವರ ವ್ಯಕ್ತಿತ್ವವನ್ನು ನಿರೂಪಿಸಿರುವರು.

೩] **ಅಕ್ಕಮಹಾದೇವಿ (ಕೋಲಿನ ಪದ)**

ಕೋಲಾಟ ಮತ್ತು ಅದರೊಂದಿಗೆ ಪದ ಹೇಳುತ್ತಾ ವಿವಿಧ ಭಂಗಿಗಳಲ್ಲಿ ಸಾಗುವುದು ಉತ್ತರ ಕರ್ನಾಟಕದ ಸಾಂಸ್ಕೃತಿಕ ಆಚರಣೆಗಳಲ್ಲಿ ಒಂದಾಗಿದೆ. ಇಲ್ಲಿ ಲೇಖಕಿಯರು ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನು ಅದ್ಭುತ ಚರಿತ್ರೆಯಾಗಿ ಚಿತ್ರಿಸಿರುವರು. ನಿರ್ಮಲ-ಸುಮತಿಯರ ಮಗಳಾಗಿ ಅಕ್ಕಮಹಾದೇವಿಯು ಉಡುತಡಿಯಲ್ಲಿ ಜನಿಸಿದಳು. ಬಾಲ್ಯದಿಂದಲೇ ಗುರು-ಲಿಂಗ-ಜಂಗಮ ಮತ್ತು ಶಿವ ಸಾಕ್ಷಾತ್ಕಾರದ ಕನಸು ಹೊತ್ತಿರುವಳು. ಕೌಶಿಕ ಮೋಹಿಸಲು ಶರಣಸತಿಗೆ ಲಿಂಗಪತಿಯೆಂದು ವೈರಾಗ್ಯ ತಾಳಿದಳು. ಚನ್ನಮಲ್ಲಿಕಾರ್ಜುನನ್ನು ಅರಸುತ್ತಾ ಕಲ್ಯಾಣಕ್ಕೆ ಆಗಮಿಸಿದಳು. ಅಲ್ಲಿ ಅವಳ ನುಡಿಮುತ್ತಿಗೆ ಶಿವ-ಶರಣರು ತಲೆದೂಗಿದರು. ಬಸವಣ್ಣ-ನೀಲಮ್ಮ ಮತ್ತು ಅಲ್ಲಮ ಪ್ರಭುವಿಗೆ ' ಹೂವಲ್ಲದೆ ಹುಲ್ಲೆಂದಿಗೂ ತಾರೆನು' ಎಂದು ಶರಣ ಗೋಷ್ಟಿಯಿಂದ ಬೀಳ್ಕೊಂಡು ಕದಳಿಯ ವನಕ್ಕೆ ಹೋದಳು ಅಲ್ಲಿ ಅವಳು ಐಕ್ಯಳಾಗಲು ಶ್ರೀಗಿರಿಯೊಡೆಯನು ಸ್ವೀಕರಿಸಿದನು. ಎಂದು ಕೋಲಾಟದ ಪದದಲ್ಲಿ ಚಿತ್ರಿಸಿರುವರು.

೪] **ಚಂದ್ರ ಬಿಂಬ**

ಈ ಕವಿತೆಯು ಮೊದಲ ಬಾರಿಗೆ ಮಾನವ ಚಂದ್ರನ ಮೇಲೆ ಕಾಲಿರಿಸಿದ್ದ ಕೌತುಕದ ಕುರಿತು ಹೇಳಲ್ಪಟ್ಟಿದೆ. ಪೂರ್ಣ ಹುಣ್ಣಿಮೆಯ ದಿನ ಮನೆಗಳಲ್ಲಿ ನಾವು ಸಿಹಿ-ಪಾಯಸದೂಟ ಮಾಡಿ ಉಂಡು ಮನೆ -ಬಳಗದವರೆಲ್ಲ ಸಂಭ್ರಮಿಸುತ್ತೇವೆ ಅಷ್ಟೇ ಅಲ್ಲದೆ ಚಂದ್ರನಲ್ಲಿಗೆ ಕಾಲಿರಿಸಿದ ಮಾನವ ಚಂದ್ರಲೋಕದ ಕುರಿತು ಅದರ ಮೇಲ್ಮೈ ಲಕ್ಷಣ, ವಾಯುಗುಣ, ಪರೀಕ್ಷೆಯ ಮಾಡಿಸಿದ. ವಿವಿಧ ಫೋಟೋಗಳನ್ನು ಕಳಿಸಿದನು. ನೀರಿಲ್ಲದ ಅಲ್ಲಿ ಮಾನವ ವಾಸಕ್ಕೆ ಅಯೋಗ್ಯ ಎಂಬ ತೀರ್ಪು ನೀಡಿದನೆಂಬ

ಸುದ್ದಿಯನ್ನು ಅವರು ತಮ್ಮ ಕವಿತೆಯಲ್ಲಿ ವಿಜ್ಞಾನ ಸಾಧನೆಯ ಕುರಿತು ತಮ್ಮ ಕವನದಲ್ಲಿ ರಚಿಸಿದ್ದಾರೆ.

೫] ತಾಯಿ ನಿನಗೆ ಶರಣು

ಸರಸ್ವತಿ ದೇವಿಯವರು ತಮ್ಮ ಜೀವನದ ಒಡನಾಡಿಯಾಗಿದ್ದ ಬಹು ಪ್ರೀತಿಯ ಸೋದರಿ ಜಯದೇವಿತಾಯಿ ಲಿಗಾಡೆಯವರನ್ನು ಕುರಿತು (ಜೀವನ ಮತ್ತು ವ್ಯಕ್ತಿತ್ವ) ಬರೆದಿರುವರು. ಗಡಿನಾಡ ಭೂಮಿಯೊಳು ನುಡಿಗುಡಿಯ ಹಿಡಿದೆತ್ತಿ ದುಡಿದುಡಿದು ಹಣ್ಣಾದೆ ನೀ 'ಕನ್ನಡದ ಕೋಟೆ' ಕಟ್ಟಿ ಎಂದು ಅತ್ಯಂತ ಪ್ರೀತ್ಯಾದರಗಳಿಂದ ಅವರನ್ನು ನೆನೆದಿರುವರು. ಹೆಸರಿನಲ್ಲಿಯೇ 'ಜಯದೇವಿ' ಯೆಂದಿರಲು ಸಾವ ಸೋಲಿಸಿ ಗೆದ್ದವಳು ಎಂದು ಉದ್ಗಸಿರುವರು. ಹೆಸರಿನಂತೆಯೇ ಸರ್ವ ಕಾಯಕದಲ್ಲಿಯೂ ಜಯಲಭಿಸಲೆಂದು ಹರಿಸಿರುವರು ..ನಿಮ್ಮಂತೆಯೇ ನಿಮ್ಮ ಮಗಳು ಶಶಿಕಲಾ ನಿಮ್ಮ ಸತ್ವರಂಪರೆಯನ್ನು ಮುಂದುವರೆಸಿಕೊಂಡು ಹೋಗಲಿ ಅಕ್ಕನ ಬಳಗ ಬೆಳೆಯಲಿ, ಅಕ್ಕನ ವಾಣಿಯು ಅಜರಾಮರವಾಗಲಿ, ಕನ್ನಡ ರಾಜ್ಯೋದಯ, ಕರ್ನಾಟಕವು ಜಾರಿಗೆ ಬಂದಾಯ್ತು. ಕನ್ನಡದ ಪ್ರೀತಿಯ ಬೆಸುಗೆ ಚಿರಕಾಲ ಇರಲಿ ಎಂದು ಹಾರೈಸಿದೆಯೆಂದು ಅವರ ಗುಣಗಾಣ ಮಾಡಿರುವರು.

೬] ಮರೆತಿಲ್ಲ ತಾಯಿ

ಮಹಾತ್ಮಾ ಗಾಂಧಿಜಿಯವರ ನೆರಳಾಗಿ ಸರ್ವ ಕಾರ್ಯಕ್ಕೂ ಬೆಂಗಾವಲಾಗಿ ನಿಂತು ಬೆಳಕಿಗೆ ಬಾರದ, ಮರೆಯಲಾಗದ ಚೇತನವೆಂದು ಲೇಖಕಿಯರು ಮೋಹನನ ಮಡದಿ ಕಸ್ತೂರಿಬಾ ಅವರನ್ನು ಕುರಿತು ತಮ್ಮ ಉಪಕಾರವನ್ನು, ಅವರ ಗುಣಗಾಣ ಕರ್ತವ್ಯ ನಿರತೆಯನ್ನು ನೆನೆಯುತ್ತ 'ಮರೆತಿಲ್ಲ ತಾಯಿ' ಎಂದು ಹೃದಯತುಂಬಿ ನೆನೆಯುತ್ತಾರೆ. ಮನೆಯ ವಾತಾವರಣವೇ ಆಶ್ರಮದಂತಾದರೂ ಅದನ್ನು ಅನುಸರಿಸುತ್ತ ಆಶ್ರಮದಲ್ಲ ಅನುಪಮ ಸೇವಕಿಯಾಗಿ ಸೇವೆಗೈದೆ. ಸ್ವಾತಂತ್ರ್ಯ ಸಂಗ್ರಾಮ ಚಲೇಜಾವ ಚಳುವಳಿಗಳಲ್ಲಿ ಹೆಣ್ಣೆಂದು ಅಬಲೆಯಲ್ಲ. ದುಷ್ಟ ದೈತ್ಯರಿಗೆ ಮಹಿಷಾಸುರ ಮರ್ದಿನಿಯೆಂದು ಮಹಿಳೆಯರ ಮುಂದಾಳತ್ವ ವಹಿಸಿರುವೆ ತಾಯಿ ನೀನು. ನಿನ್ನ ತಪಸ್ಸಿಗೆ ಶಿವ ವರವಿತ್ತನಾದರೆ ಶಿವರಾತ್ರಿಯ ದಿವಸ ಶಿವನ ಸಾನಿಧ್ಯ ಸೇರಿ ಇಹಲೋಕ ತ್ಯಜಿಸಿದೆ. ಗಾಂಧೀಜಿಯವರನ್ನು ನಾವು ನೆನೆಯುವಂತೆ ನಿಮ್ಮ ನೆನಪು ಅನವರತವಿರಲಿ ಎಂದು ಹರಸಿದರು.

೭] ವಿಷ ನುಂಗಿ ಬದುಕ ಬೇಕು

ಇದು ಸರಸ್ವತಿ.ದೇವಿಯವರ ಆತ್ಮಕಥನವಾಗಿದೆ. ಬಾಲ್ಯದಿಂದಲೇ ತಮ್ಮ ಸದಾಶಿವ ಗೌಡರನ್ನು ಒರಿಸಿದರು. ತಮ್ಮ ದಾಂಪತ್ಯ ದೈನಂದಿನ ಬದುಕು – ಬವಣೆ, ಮೂರು ಮಕ್ಕಳು–ಲಾಲನೆ –ಪಲನೆ ಜೀವನದಲ್ಲಿ ಎದುರಾದ ಸರಳ–ಕಠಿಣ ಸಮಸ್ಯೆಗಳನ್ನು ಎದುರಿಸಿದ ಘಟನೆಗಳನ್ನು ಕುರಿತು ಚಿತ್ರಿಸಿರುವರು. ದಾಂಪತ್ಯದ ಬದುಕಿನಲ್ಲಿ ಸವೆದ ಸವಿನೆನಪುಗಳ, ಕಹಿ ಘಟಣೆಗಳ ಮೇಲುಕು ಹಾಕಿರುವರು. ದೈನಂದಿನ ಬದುಕಿನ ಜೊತೆಗೆ ತಮ್ಮ ಸಾಹಿತ್ಯ ಸೇವೆಗೆ ಸಹಾಯವನ್ನು, ಅಭಯ ಹಸ್ತವನ್ನು ನೀಡಿದ ಪತಿಯ ಕುರಿತು ಬಲು ಹೆಮ್ಮೆಯಿಂದ ಹೇಳುವರು.

ಪತಿಯು ತೀರಿಕೊಂಡ ನಂತರ

'ಉಣಲಾರದ ಈ ಎಡೆಯ ಉಂಡು ಅರಗಿಸಬೇಕು।
ಉಣಲಾರನೆಂದರೆ ಬಿಡದ ಕರ್ಮ
ವಿಷ ನುಂಗಿ ಈ ಜೀವ ಬದುಕಬೇಕು।
ಹಸು ಮಕ್ಕಳ ಭವಿತವ್ಯ ರೂಪಿಸಿಬೇಕು ॥
ಎಂದು ಶಿಸ್ತಿನ ಸಿಪಾಯಿಯಂತೆ ಕರ್ತವ್ಯ ನಿರತರಾದರು.

೮. ಶರಣು ತಾಯಿ ಭಾರತಿ

ಇದು ಭಾರತದ ಸ್ವತಂತ್ರದ ಸಂಭ್ರಮಾಚರಣೆಯ ಕುರಿತದ್ದಾಗಿದೆ. ಸ್ವತಂತ್ರಕ್ಕಾಗಿ ಮಡಿದ ಎಲ್ಲ ಸೈನಿಕರ ಸ್ಮರಣೆ, ಸ್ವಾತಂತ್ರ್ಯಾನಂತರ ಪ್ರಾಂತಗಳ ವಿಂಗಡಣೆ, ಹಕ್ಕು – ಭಾಧ್ಯತೆಗಳ ಹಂಚಿಕೆಯನ್ನು ನಿರೂಪಿಸಿರುವರು. ಕವನದ ಉತ್ತರಾರ್ತ ಸ್ವಾತಂತ್ರ್ಯೋತ್ತರ ಭಾರತದ ದುಸ್ಥಿತಿಯನ್ನು ಕಾಣಿಸುತ್ತದೆ. ಸ್ವಾತಂತ್ರ್ಯದ ಪೂರ್ವದ ಕನಸು ಅನೇಕ ಆದರ್ಶಗಳಲ್ಲಿ ಬದುಕಿದ್ದ ಅವರಿಗೆ ನಂತರದ ದಿನಗಳ ವ್ಯತ್ಯಾಸ ಹತಾಶೆ ತಂದಿದ್ದು ಇಲ್ಲಿ ಸ್ಪಷ್ಟವಾಗಿದೆ. ಕಾಗದದ ಕುದುರೆಯ ನೊಟವದುಬಲುರಮ್ಯ ರೂಡಿಸಲು ಅತಿ ಕಠಿಣ ವರುಷಗಳು ಉರುಳಿದವು/ ಸೊಗಯಿಪುದು ಕನ್ನಡಿಯ ಕೈಗಂಟಿನ ಆಮಿಷಾ ಕೊಂಡು ಬಳಸೆ ಸಿಗುವುದೇ ಸ್ಥಿರ ನಮ್ಮ ಬಡತನ ಎಂದು ಬಣ್ಣಿಸುವರು.

೯] ಉದಯವಾಯಿತು ಇಂದು ಕರ್ನಾಟಕದ ರಾಜ್ಯ

ಸ್ವಾತಂತ್ರ್ಯಾನಂತರ ರಾಜ್ಯಗಳ ವಿಂಗಡಣೆಯಾದಾಗ ಕರ್ನಾಟಕ ರಾಜ್ಯವು ಉದಯಿಸಿದ ಹೆಮ್ಮೆಯೊಂದಿಗೆ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಕನ್ನಡನಾಡಿಗೆ

ಹೆಸರಿಡುವ ಬಗ್ಗೆ ವಿರಸ ತಲೆದೋರಿದಾಗ ಸರಸ್ವತಿಯವರು–'ಹೆಸರಿಗಾಗಿ ಮಗುವೋ ಮಗುವಿಗಾಗಿ ಹೆಸರೋ ಛಲಬೇಡ ಶುಭಗಳಿಗೆ ಕಲಹಕಿದು ಅನಿಯಮ' ಎಂದು ಮಾರ್ಮಿಕವಾಗಿ ಬಿಂಬಿಸಿರುವರು. ಕನ್ನಡಕ್ಕಾಗಿ ಮಡಿದವರನ್ನು ನೆನೆದು ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾರೈಸೋಣ. ಮನತಣಿವೇ ನೆನೆಯೋಣ ಎಂದು ಹೇಳಿರುವರು.

೧೦] **ಕಾಯ್ದು ಕರುಣಿಸಲಿ ಕರುಣಾಳು ದೇವರು.**

ಶರಣರ ಬದುಕಿನಂತೆ ತಮ್ಮ ಬದುಕಿನಲ್ಲಿ ಅವರ ನಡೆ–ನುಡಿ ಅಳವಡಿಸಿ ಬದುಕಿನಲ್ಲಿ ಒಳಿತನ್ನು ಕಂಡವರು. ಸಮಾಜದ ಒಳತಿಗಾಗಿ ಸೇವೆಗೈದ ಮಹನೀಯರನ್ನು ಅವರ ಗುಣಗಳನ್ನು ವ್ಯಕ್ತಿತ್ವವನ್ನು ಕುರಿತು ತುಂಬು ಮನಸ್ಸಿನಿಂದ ಹೊಗಳುವರು. ಕಹಿ ವಕ್ರತೆ, ವಿಡಂಬನೆ ಅವರ ಕವಿತೆಗಳಲ್ಲಿ ಸುಳಿಯಲು ಆಸ್ಪದ ಇಲ್ಲ. ಪ್ರಸ್ತುತ ಕವನದಲ್ಲಿ ಅವರು ಡಾ॥ ಆರ್.ಬಿ.ಪಾಟೀಲರ ದಕ್ಷತೆ, ಪ್ರಾಮಾಣಿಕತೆಯನ್ನು ಕುರಿತು ತಮ್ಮ ಮೆಚ್ಚುಗೆ ವ್ಯಕ್ತ ಪಡಿಸುವರು.

'ತಾಯಿಯ ಮಮತೆ ತಂದೆಯ ಕುಶಾಗ್ರತೆ ಸೋದರಿಕೆಯ ಸೌಹಾರ್ದತೆ ಸದ್ವೈದ್ಯನ ತತ್ಪರತೆ' ಎಂದು ಕೆಲವೇ ಪುಟ್ಟ ಸಾಲುಗಳಲ್ಲಿ ವ್ಯಕ್ತಿತ್ವವನ್ನು ಸ್ಫುಟವಾಗಿ ಹಿಡಿಯುವುದರಲ್ಲಿ ಸರಸ್ವತಿಯವರಿಗೆ ನೈಪುಣ್ಯವಿದೆ.

ಒಟ್ಟಾರೆಯಾಗಿ ಇವರ ಕವನಗಳ ಅಧ್ಯಯನದಲ್ಲಿ ನಾವು ಗುರುತಿಸಬಹುದಾದ ಅಂಶಗಳು

೧. ಸಾಮಾಜಿಕ ದೃಷ್ಟಿಕೋನವಿದೆ. ಸಾಮಾಜಿಕ ಒಳಿತಿಗಾಗಿ ಬದುಕು ಎಂಬ ಆರೋಗ್ಯಕರ ದೃಷ್ಟಿ ಕೋನವಿದೆ.
೨. ಭಾವಗೀತೆಗಳಲ್ಲಿ ಬಾವ ತೀವ್ರತೆಯಿದೆ.
೩. ಕಂಡದ್ದನ್ನು ಕಂಡಂತೆ ಹಿಡಿದಿಡುವ ನೈಪುಣ್ಯವಿದೆ.
೪. ಭಾಷೆಯು ಸರಳ, ನೇರವಾಗಿ ಓದುಗರನ್ನು ಆರ್ದ್ರವಾಗಿಸುವ ಗುಣವಿದೆ.
೫. ಕವಿತೆಗಳು ವೈಯಕ್ತಿಕ ಬದುಕಿಗೆ ಸೀಮಿತಗೊಳ್ಳದೇ ಸಾರ್ವತ್ರಿಕವಾಗಿರುವ ಮೌಲ್ಯಗಳನ್ನು ಬಿಂಬಿಸುತ್ತವೆ.
೬. ವೈಚಾರಿಕ ದೃಷ್ಟಿಕೋನವಿದೆ.



ಪುಸ್ತಕ ಬಿಡುಗಡೆಯ ಸಂದರ್ಭ



ವೇದಿಕೆಯಲ್ಲಿ ಸರಸ್ವತಿ

ಅದ್ಯಾಯ –೫

ಸರಸ್ವತಿ ದೇವಿಯವರ ನಾಟಕಗಳು

೧] ಸಾಮಾಜಿಕ ನಾಟಕಗಳು
೨] ಚಾರಿತ್ರಿಕ ನಾಟಕಗಳು

ಸರಸ್ವತಿಯವರು ಕಥೆ, ಕವಿತೆ, ಪ್ರಬಂಧಗಳಂತೆ ಉತ್ತಮವಾದ ನಾಟಕಗಳ ರಚನೆಯನ್ನು ತಮ್ಮ ಅಭಿವ್ಯಕ್ತಿಯ ಮಾದ್ಯಮವನ್ನಾಗಿಸಿಕೊಂಡಿದ್ದಾರೆ. ಇವರು ಒಟ್ಟು ೧೪ ನಾಟಕಗಳನ್ನು ರಚಿಸಿದ್ದಾರೆ. ಅದರಲ್ಲಿ ೪ ಸಾಮಾಜಿಕ ನಾಟಕಗಳವೆ ಉಳದ ೧೦ ನಾಟಕಗಳು ಚಾರಿತ್ರಿಕ ಅಂಶಗಳಿಂದ ಕೂಡಿವೆ ೧೯೬೬ ರಲ್ಲಿ ಬರೆದ ಇವರ 'ಮೋಳಗೆಯ ಮಾರಯ್ಯ' ನ ನಾಟಕದ ಮುನ್ನುಡಿಯಲ್ಲಿ ಬರೆದ ರಂಗ ಚಿಂತನೆಗಳು ಇಂದಿಗೂ ಅಭ್ಯಾಸಪೂರ್ಣವಾಗಿವೆ. (ಮುನ್ನುಡಿ ಪು.ಸಂ.೧೦ ಮೋಳಗೆಯ ಮಾರಯ್ಯ) ನಾಟಕಗಾರ, ನಟರು ಮತು ಪೇಕ್ಷಕರು ಈ ಮೂವರ ಸಹಕಾರ ಮುಪ್ಪುರಿಗೊಂಡಾಗ ಒಂದು ಒಳ್ಳೆಯ ರಚನೆ ರಂಗಭೂಮಿಯಲ್ಲಿ ಯಶಸ್ವಿಯಾಗುವುಸು. ನಾಟಕಕಾರರು ಮತ್ತು ಪ್ರೇಕ್ಷಕರು ಇವರಿಬ್ಬರ ನಡುವೆ ಮಧ್ಯಬಿಂದುವಾಗಿ ನಿಲ್ಲುವವರು ನಟರು. ಇವರ ಹೊಣೆಗಾರಿಕೆ ಹಿರಿದಾದುದು. ನಾಟಕಕಾರರಿಂದ ಒಳ್ಳೆಯ ಕೃತಿಗಳು ಮೂಡಿಬರಬೇಕು ಅವುಗಳನ್ನು ಪ್ರೇಕ್ಷಕರು ಮೆಚ್ಚುವಂತೆ ಪರಿಣಾಮಕಾರಿಯಾಗಿ ಪ್ರಯೋಗ ಮಾಡಿ ತೋರಿಸಬೇಕು. ಅನ್ನುವುದು ಇವರ ಹವ್ಯಾಸವಾಗಬೇಕು ಅದಕ್ಕೆ ಬದಲಾಗಿ ಪ್ರೇಕ್ಷಕರ ಅಭಿರುಚಿಯ ಮಟ್ಟವೇ ಕಡಿಮೆಯಾಗುವಂತೆ ಹಗುರಾದ ಹುರುಳಲ್ಲದ ಕೃತಿಗಳನ್ನು ರಂಗಭೂಮಿಗೆ ತಂದು ಇಂದು ಅವರು ಕನ್ನಡ ರಂಗಭೂಮಿಯ ಭವಿತವ್ಯವನ್ನೇ ಹಾಳು ಮಾಡುತ್ತಿರುವರು. ಪ್ರೇಕ್ಷಕರ ಅಭಿರುಚಿಯ ಮಟ್ಟ ಕಡಿಮೆಯಾಗಿದೆಯೋ ಅಥವಾ ನಾಟಕ ಕಂಪನಿಗಳ ಯೋಗ್ಯತೆಯ ಮಾನದಂಡವೇ ಕಡಿಮೆಯಗಿದೆಯೋ ? ಇದೊಂದು ವಿಷಚಕ್ರ.ಿಷ್ಟು ಬೇಗನೇ ಇದರ ಸುಳಯಿಂದ ಹೊರಬರಲು ಸಾಧ್ಯವೋ ಅಷ್ಟು ಸಾಧುವಾದುದು. ಪರಸ್ಪರ ಆರೋಪ ಪ್ರತ್ಯಾರೋಪಗಳಲ್ಲಿ ತೊಡಗುವ ಬದಲು ಸೂಕ್ತ ಪರಿಹಾರ ಕಂಡು ಹಿಡಿಯಲು ಕನ್ನಡ ರಂಗಭೂಮಿಯ ಹಿತಚಿಂತಕರು ಪರಿಸ್ಥಿತಿ ಕೈಮಿರುವ ಮೊದಲೇ ಪ್ರಯತ್ನಕ್ಕೆ ತೊಡಗುವುದು ಶ್ರೇಯಸ್ಕರ'. ಶರಣರ ನಡೆ-ನುಡಿ ಬದುಕನ್ನೇ ತಮ್ಮ ನಾಟಕಗಳಲ್ಲಿ ತೆರೆಗೆ ತಂದರು, ಚಾರಿತ್ರಿಕ ಮತ್ತು ಸಾಮಾಜಿಕವಾದ ಹಲವು ಸಮಸ್ಯೆಗಳನ್ನು ದೈನಂದಿನ ಜೀವನದಲ್ಲಿಯ ಲಘುಹಾಸ್ಯದ ಪ್ರಸಂಗಗಳನ್ನು ಸಹ

ನಾಟಕಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಇಂತಹ ವಸ್ತು ವಿಷಯಗಳನ್ನು ತಮ್ಮ ಸೃಜನಶೀಲತೆ ಮತ್ತು ವೈಚಾರಿಕತೆಗಳಿಂದ, ಓರೆಗೆ ಹಚ್ಚಿ ತಮ್ಮ ಸಹೋದರಿಯರ (ಮಹಿಳೆಯರ) ಬದಕು ಹಸನಾಗುವಲ್ಲಿ ಅವರ ಹಕ್ಕು-ಭಾಧ್ಯತೆಗಳು, ಕರ್ತವ್ಯಗಳೇನೆಂದು ಮನದಟ್ಟು ಮಾಡುವಲ್ಲಿ ಅನವರತ ಶ್ರಮಿಸಿದ್ದಾರೆ. ಹೀಗೆ ಇವರು ರಚಿಸಿದ ಬಹುಪಾಲು ಸ್ತ್ರೀಪಾತ್ರಗಳು ಸಾಂಪ್ರದಾಯಿಕ ಚೌಕಟ್ಟಿನ ಒಳಗಿದ್ದು ಕ್ರಾಂತಿಕಾರಿ ಆಲೋಚನೆಗಳನ್ನು ಮಾಡುತ್ತವೆ. ಅವುಗಳ ಸುದೀರ್ಘ ಚರ್ಚೆ ಮಾಡಲಾಗಿದೆ.

೧) ಕಲ್ಯಾಣದ ಕೊನೆಗಾಲ

ಬಿಜ್ಜಳ ಮತ್ತು ಬಸವಣ್ಣನ ನಡುವಿನ ನೇರ ಸಂಘರ್ಷ ಮತ್ತು ಕಲ್ಯಾಣದ ಸ್ಥಿತಿಯು 'ಕಲ್ಯಾಣದ ಒಂದು ರೂಪಕ' ದಲ್ಲಿ ಮೂಡಿವೆ. ಕಲ್ಯಾಣದ ಕೊನೆಯ ದಿನಗಳನ್ನು ಈ ಕೃತಿಯಲ್ಲಿ ಕೇಂದ್ರವಾಗಿಟ್ಟುಕೊಂಡಿದ್ದಾರೆ. 'ಕಲ್ಯಾಣದ ಕೊನೆಗಾಲ' ಎಂಬ ರೂಪಕದ ಭಿತ್ತಿಯೂ ಇದೇ ಆಗಿದೆ. ಆದರೆ ಇದರ ದೃಷ್ಟಿಕೋನ ಬೇರೆಯಾಗಿದ್ದು ಇಲ್ಲಿ ಅಕ್ಕ ನಾಗಮ್ಮ , ಆಂಗಮ್ಮ , ಮಹಾದೇವಿಯವರ ಮೂಲಕ ಕಲ್ಯಾಣದ ಕೊನೆಯ ದಿನಗಳನ್ನು ಕಾಣಲಾಗಿದೆ. ಕಲ್ಯಾಣ ಪಟ್ಟಣ ಸಿಡಿದೆದ್ದ ಜ್ವಾಲಾಮುಖಿಯಂತೆ ದ್ವೇಷ-ಅಸೂಯೆ, ಕ್ರೋಧ-ಮತ್ಸರಗಳಿಂದ ದಹಿಸುತ್ತಿರಲು, ಇದ್ದ ಶರಣರೆಲ್ಲಾ ನಿಜ ಪದವನ್ನರಸುತ್ತಾ ತೆರಳಿದರೂ ಎಲ್ಲೆಡೆ 'ರೌದ್ರ ಗಂಭೀರ ಮೌನ' ಆವರಿಸಲು ಕಲ್ಯಾಣದ ಮಹಾಮನೆಯಲ್ಲಿ ಉಳಿದು ವೀರಶೈವಧರ್ಮದ ಪಾಲನೆ, ಬಸವತತ್ವದ ಆಚರಣೆಯನ್ನು ಕುರಿತು ಸರಸ್ವತಿದೇವಿಯವರ ಗಮನವು ಕೇಂದ್ರೀಕೃತಗೊಂಡಿದೆ.

ಉದಾಹರಣೆಗಾಗಿ ಅವರ 'ಕಲ್ಯಾಣದ ಕೊನೆಗಾಲ' ನಾಟಕದ ಈ ಕೆಳಗಿನ ಸಂಬಾಷಣೆ ಸಾಕ್ಷಿಯಾಗಿದೆ ಬಸವಣ್ಣನವರ ನಿರ್ಗಮನದ ಸುದ್ದಿ ಕೇಳಿ ಬಂದ ಮಹಾದೇವಿ ಹೀಗೆನ್ನುತ್ತಾಳೆ. 'ನನಗೂ ಸುದ್ದಿ ತಿಳಿಯಿತು ಅದಕ್ಕಾಗಿಯೇ ಬಂದೆ. ಅದೆಲ್ಲ ಆಗಬೇಕಾದದ್ದೇ, ಭಕ್ತಿ ಭಂಡಾರಿಯ ಹೃದಯ ಹೂವಿನಂತೆ ಕೋಮಲ. ಈ ಬಿರುಗಾಳಿಗೆ ಅದು ಈಡಲ್ಲ, ತನಗೆ ಹಿತವಾದ ಸಂಗಮನಾಥನ ಸಾನಿಧ್ಯವನ್ನು ಆರಿಸಿಕೊಂಡು ಹೋದರೆ ತಪ್ಪಲ್ಲ. ಆದರೆ ಹಾಗೆಂದು ನಾವು ಧೃತಿಗೆಡಬೇಕೆ? ನೆಟ್ಟ ಈ ಸಸಿ ಹುಲುಸಾಗಿ ಬೆಳೆದು ವಲಂದಿನವರ ಬದುಕನ್ನೆ ತಣಿಸುವದು ಬೇಡವೆ? ' -ಎನ್ನುವ ಮಾತು ಮತ್ತು ಸಂಕಲ್ಪ ವೀರಶೈವ ಧರ್ಮ, ಬಸವತತ್ವದ ಪರಿಪಾಲನೆಯನ್ನು ಮುಂದುವರೆಸಿಕೊಂಡು ಹೋಗಲು ಹಾದಿಯಾಯಿತು. ಮಹಿಳೆಯರೆಂದೂ ಧೃತಿಗೆಡಲಿಲ್ಲ ಎನ್ನುವದು ಲೇಖಕಿಯ ಈ ನಾಟಕದ ಸಂಭಾಷಣೆಯಿಂದ ಧೃಡೀಕರಣವಾಗುವದು.

ಶಿವ-ಶರಣರಂತೆಯೇ ಅವರು ಶಿವ-ಶರಣೆಯರ ಕುರಿತು ಪ್ರತ್ಯೇಕವಾದ ಎರಡು ನಾಟಕಗಳನ್ನು ಬರೆದರು. ಅವು 'ನೀಲಾಂಬಿಕೆ' ಮತ್ತು 'ಆಯ್ಕಕಿ ಲಕ್ಕಮ್ಮ'. ನೀಲಾಂಬಿಕೆ ನಾಟಕಗಳಲ್ಲಿ ಮೂರು ಮುಖ್ಯ ಹಂತಗಳವೆ(ತಿರುವುಗಳವೆ), ಮಡಿಲು ತುಂಬಿಕೊಂಡು ತವರಿನಿಂದ ಬೀಳ್ಕೊಡುತ್ತಿರುವ ನೀಲಾಂಬಿಕೆ, ಬಸವಣ್ಣನ ಅರ್ಧಾಂಗಿಯಾಗಿ ಮಹಾಮನೆಯಲ್ಲಿ ಬದುಕುವ ನೀಲಾಂಬಿಕೆ ಮತ್ತು ಬಸವಣ್ಣ ನಿರ್ಗಮಿಸಿದ ಕಲ್ಯಾಣದಲ್ಲಿ ಬಾಳನ ಕೊನೆಯನ್ನು ಕಾಣುವ ನೀಲಾಂಬಿಕೆ, ನೀಲಾಂಬಿಕೆಯ ನೈಜ ಚಿಂತನೆಯ ಮಾತುಗಳಿಂದ ಅವಳ ಅಚಲ ನಿರ್ಧಾರ ಸರಸ್ವತಿಯವರ ಚಿಂತನೆಗೆ ಅಚ್ಚೊತ್ತಿದಂತಿದೆ. ಬಸವಣ್ಣ ನೀಲಾಂಬಿಕೆಯ ಆರಾಧ್ಯ ದೈವ. ಅನಾದಿಕಾಲದಿಂದಲೂ ಸ್ತ್ರೀಯರ ಕುರಿತೆದ್ದ ಧೋರಣೆಗಳನ್ನು ಸರಸ್ವತಿಯವರು ಪ್ರಸ್ತುತದೊಂದಿಗೆ ಚರ್ಚಿಸಿ ಬೇಕಾದಲ್ಲಿ 'ತನ್ನತನ'ವನ್ನು ಉಳಸಿಕೊಳ್ಳುವಂತೆ ಮಾಡುವಲ್ಲಿ ಶ್ರಮಿಸಿರುವರು. 'ಸ್ತ್ರೀಯೆಂದಿಗೂ ಸ್ವತಂತ್ರಳಲ್ಲ, ಪಿತಾರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ, ಪುತ್ರೋ ರಕ್ಷತಿ ವಾರ್ಧಕ್ಯೆ' ಎಂಬ ನೀಲಾಂಬಿಕೆಯ ಮಾತಿಗೆ ಬಸವಣ್ಣನವರು-'ರಕ್ಷಿಸಲು ಬೇಡವೆಂದವರಾರು? ಆದರೆ ರಕ್ಷಣೆಯ ಅರ್ಥ ಬಂಧನವಲ್ಲ. ಸ್ತ್ರೀ ಎಂದಿಗೂ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎನ್ನುವ ಬದಲು ಸ್ತ್ರೀಯನ್ನೆಂದಿಗೂ ಉಪೇಕ್ಷಿಸಬಾರದು' ಅನ್ನಬೇಕಾಗಿತ್ತು. ಆಗ ನಮ್ಮ ಸಂಸ್ಕೃತಿಯ ಹಿರಿತನ ಉಳಯುತ್ತಿತ್ತು.' ಬಸವಣ್ಣನವರ ಈ ಸಮಾನತೆಯ ಸೂತ್ರವು ವೀರಶೈವ ಧರ್ಮದ ಆಶಯವಾಗಿದೆ. ಈ ಚಿಂತನೆಯು ಈ ಶತಮಾನಕ್ಕೂ ಹರಿದು ಬಂದಿರುವುದನ್ನು ಗುರುತಿಸಬಹುದು ಅಂದರೆ ಇತರ ಧರ್ಮದ ಹೆಣ್ಣು ಮಕ್ಕಳಗಿರುವುದಕ್ಕಿಂದ ಹೆಚ್ಚಿನ ಸಮಾನತೆಯನ್ನು ಅಂದರೆ ಧಾರ್ಮಿಕ ಆರ್ಥಿಕ ರಾಜಕೀಯವಾಗಿ ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದು. ಈ ಸುಕ್ಷ್ಮವಾದ ಎಳೆಯ ಹಿಂದೆ ನಾಟಕವು ರಚಿತವಾಗಿದೆ.

'ಆತ್ಮಾಭಿಮಾನ' 'ತನ್ನತನ'ವನ್ನು ಉಳಸಿಕೊಳ್ಳುವುದು ಸರಸ್ವತಿದೇವಿಯವರ ಹಾರೈಕೆಯಾಗಿ ಅವರ ಕತೆ, ನಾಟಕಗಳುದ್ದಕ್ಕೂ ಬೆಳೆದು ಬಂದಿದೆ ಅಂತಹ ಒಂದು ತುಣುಕು ಇಲ್ಲಿದೆ, ಬಸವಣ್ಣನವರ ಶಯಾಗ್ರಹದಲ್ಲಿ ಕಳ್ಳನೊಬ್ಬನು ನೀಲಾಂಬಿಕೆಯ ಒಡವೆ ಕದಿಯಲು ಬಂದಾಗ ಭಯದಿಂದ ಚೀರಿದಳು. ಆಗ ಬಸವಣ್ಣ 'ಅಯ್ಯೋ ನಮ್ಮಯ್ಯನ ಕೈನೊಂದಿತ್ತು ತೆಗೆದು ಕೊಡಾ ಎಲ್ಲಾ ಚಂಡಾಲಗಿತ್ತಿ, ಕಳ್ಳನೊಬ್ಬನ ಮನೆಗೆ ಬಲುಗಳ್ಳ ಬಂದರೆ ಕೊಡಲಸಂಗಮ ದೇವನಲ್ಲದೆ ಮತ್ತಾರು ಅಲ್ಲ' ಎಂದು ಭಕ್ತಿಯ

ಗುಂಗಿನಲ್ಲಿ ಜರಿದರೆ, ನೊಂದ ನೀಲಾಂಬಿಕೆ ಸೂಕ್ಷ್ಮ ಮಾತಿನ ದಾಟಿ ಬೀಸಿದಳು 'ನಿದ್ದೆಗಣ್ಣಿನಲ್ಲಿ ಬೆಚ್ಚಿ ನಾನು ನಿಮ್ಮಯ್ಯನ ಕೈ ನೋಯಿಸಿದೆ. ಆದರೆ ಎಚ್ಚರಿರುವಾಗ ನೀವು ನನ್ನ ಮನ ನೋಯಿಸಬಹುದೇ? ಸರಿರಾತ್ರಿಯಲ್ಲಿ ಬಂದ ಕಳ್ಳನ ಗುರುತು ನನಗೆ ಸಿಗಲಿಲ್ಲ. ಆದರೆ ಇಷ್ಟುದಿನ ನಿಮ್ಮೊಡನಿದ್ದು ಸಂಸಾರಮಾಡುತ್ತಿರುವ ನನ್ನನ್ನು ನೀವು ಗುರುತಿಸುವಿರಾ? ಈ ಆಭರಣಗಳು ಕೊಡುವದು ದೊಡ್ಡ ಮಾತಲ್ಲ, ಆಭರಣಗಳು ಬೇಕಾದ್ದರೆ ನಿಮ್ಮ ಸಂಗಮನಾಥ ಹಗಲು ಬರಬೇಕಾಗಿತ್ತು.' ಈ ಪ್ರಸಂಘದಲ್ಲಿ ಇಂತ ಪ್ರಶ್ನೆ ಮತ್ತು ಒಳನೋಟವನ್ನು ಕೊಟ್ಟ ಮೊದಲ ಮತ್ತು ಏಕೈಕ ಲೇಖಕಿ ಸರಸ್ವತಿಯವರು ಎಂಬ ವಿಜಯಾ ದಬ್ಬೆಯವರ ಮಾತುಗಳು ಔಚಿತ್ಯಪೂರ್ಣವಾಗಿವೆ (ಸಾರಸರಸ್ವತಿ-ಪು.ಸಂ.೧೪ ಸಂ ವಿಜಯಾದಬ್ಬೆ).

೨) ಮೋಳಿಗೆಯ ಮಾರಯ್ಯ

ಮೋಳಿಗೆ ಮಾರಯ್ಯ ಮತ್ತು ಆತನ ಪತ್ನಿ ಮಹಾದೇವಿಯ ಬದುಕಿನ ಹಲವು ಘಟ್ಟಗಳನ್ನೊಳಗೊಂಡ 'ರಾಣಿ ಮಹಾದೇವಿ' ಎಂಬ ಉಪನ್ಯಾಸವು ಮುರುಘಾಮಠ ಧಾರವಾಡದಲ್ಲಿ ಜರುಗಿತು. ಮುಂದೆ ೧೯೬೩ ರಲ್ಲಿ 'ಮೋಳಿಗೆಯ ಮಾರಯ್ಯ' ಎಂಬ ವೈಶಿಷ್ಟ್ಯ ಪೂರ್ಣವಾದ ನಾಟಕವಾಗಿ ರೂಪುಗೊಂಡಿತು. ಅಕ್ಕ ನಾಗಮ್ಮ , ಅಲ್ಲಮ , ಬಸವಣ್ಣ , ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ ಇವರೇ ಮೊದಲಾದವರ ಬದಕು, ಭಕ್ತಿ, ಚಿಂತನ-ಮಂಥನದೊಂದಿಗೆ ಈ ದಂಪತಿಗಳ ಬದಕು ಸಾಗುತ್ತದೆ. ಸ್ವತಂತ್ರ ವ್ಯಕ್ತಿತ್ವವುಳ್ಳ ರಾಣಿ ಮಹಾದೇವಿಯ ಪಾತ್ರ ನೀಲಾಂಬಿಕೆಯಂತೆ ಸ್ಪಷ್ಟ ಧ್ಯೇಯೋದ್ದೇಶಗಳಿಂದ ಸ್ಪಷ್ಟಗೊಳ್ಳುತ ಹೋಗುತ್ತದೆ. ಇಂತಹ ಸ್ವತಂತ್ರತೆಯನ್ನು ಸರಸ್ವತಿಯವರ ನಾಟಕವು ಗುರುತಿಸಿದೆ. ಮಹಾರಾಣಿ ಮಹಾದೇವಿಗೆ ಕಲ್ಯಾಣದಲ್ಲಿ ಸಾಮಾನ್ಯ ಬದುಕು ಹೊಂದಿಕೊಳ್ಳಲಾಗುತ್ತದೆಯೋ ಇಲ್ಲವೋ ಎಂದು ಅನುಮಾನಿಸಿ ಮಧ್ಯರಾತ್ರಿಯಲ್ಲಿ ಅವಳನ್ನು ತೊರೆದು ಬರುವಾಗ ಅವಳು 'ತಪ್ಪು ನಿಮ್ಮದಲ್ಲ, ಅದು ಈ ನಾಡಿನ ಗಾಳಿಯದು. ನಿಂದ ನೆಲದ ಗುಣ. ಉಣ್ಣುವ ಅನ್ನದ ಗುಣ. ಹೆಣ್ಣೆಂದರೆ ಅಂಜಿಕೆ ನಿಮಗೆ, ಮುಕ್ತಿ ಬೇಕೆಂದರೆ ಅವಳಿಂದ ಮೂರು ಮಾರು ಆಚೆಗಿರಬೇಕೆಂಬುದೇ ನಿಮ್ಮ ಮತ. ಭಗವಾನ ಬುದ್ಧನಿಗೂ ಅದೇ ಭಯ. ರಾಜಕುಮಾರ ಸಿದ್ಧಾರ್ಥ ಯಶೋಧರೆಗೆ ಹೇಳದೆ ಹೋರಟು ಹೋದ ಸರಿ ರಾತ್ರಿಯಲ್ಲಿ ?' ಬುದ್ಧನು ಹಾಗೆ ಹೊರಟಾಗ ಅವನ ಹೃದಯ ಎಂಥ ಅಘಾತವನ್ನು ಸರಿಸಬೇಕಾಯಿತು ಎಂದುದಕ್ಕೆ ಆಕೆ ಕೇಳುತ್ತಾಳೆ. 'ಇದೊಳ್ಳೆಯ ನ್ಯಾಯ. ತ್ಯಾಗ ಮಾಡಿದವನು ಅವನೊಬ್ಬನೇ ? ಅವನು ಹೋದ ಮೇಲೆ ಆ ಎಳೆ ಮಗುವನ್ನು ಎದೆಗೆ ಅವಚಿಕೊಂಡು ವಿರಹ ವೇದನೆಯಲ್ಲಿ

ದಿನಗಳೆಯಬೇಕಾದ ಯಶೋಧರೆಯ ಮನಸ್ಥಿತಿಯನ್ನು ಊಹಿಸಬಲ್ಲಿರಾ? (ಮೋಳಿಗೆಯ ಮಾರಯ್ಯಾ ಪು.ಸಂ.೩೯)ಬುದ್ಧನನ್ನು , ವರ್ಧಮಾನನ್ನು ಗೌರವದಿಂದ ಕಾಣುವ ನಾವು ಅವರ ಹೆಂಡತಿಯರು ಪಟ್ಟ ಪಾಡನ್ನು ಸಂಕಟವನ್ನು ನೆನೆಸುವುದಿಲ್ಲ ಸ್ತ್ರೀ ವಾದದ ಅರಿವಿಲ್ಲದೆ ಅವರು ಬರೆದ ನಾಟಕಗಳಲ್ಲಿ ಗಟ್ಟಿಯಾದಂತಹ, ವೈಚಾರಿಕ ಚಿಂತನೆಗಳಿಂದ ರೂಪಿತಗೊಂಡ ಸ್ತ್ರೀ ಪಾತ್ರಗಳಿವೆ ಎಂಬುದು ಗಮನಾರ್ಹ.

'ಮೋಳಿಗೆಯ ಮಾರಯ್ಯ' ನಾಟಕದ ಕುರಿತು ಶ್ರೀಗಳಾದ ಬಸವಲಿಂಗ ಸ್ವಾಮಿಗಳು ಗವಿಮಠ ನವಿಲುಗುಂದ ಅವರ ಆಶೀರ್ವಚನ, ತಾಯಿ ಸರಸ್ವತಿಗೌಡರ ಅವರು, ಶಿವಶರಣ "ಮೋಳಿಗೆಯ ಮಾರಯ್ಯ" ನಾಟಕವನ್ನು ಸರಳ ಸುಂದರವಾಗಿ ಹೆಣೆದು, ಓದುಗರಿಗೆ, ತನ್ಮೂಲಕ ಕನ್ನಡ ಉತ್ತಮವಾದ ಲೇಖನ ಕಲೆಯಿಂದ, ವಿಚಾರ ಪ್ರಚಾರದಿಂದ, ತಾಯಿ ಸರಸ್ವತಿದೇವಿಗೌಡರ ಇವರು ಈಗಾಗಲೇ ಕನ್ನಡ ಸಾರಸ್ವತ ಕುಲಕ್ಕೆ ಚಿರಪರಿಚಿತರಾಗಿರುವದು ತುಂಬ ಸಂತೋಷ' ಎಂಬ ಶ್ರೀಗಳ ಆಶೀರ್ವಚನ ಗಮನಾರ್ಹವಾಗಿದೆ.

೩) ಕೆಳದಿಯ ಚೆನ್ನಮ್ಮಾಜಿ

ಎಂಟು ದೃಶಗಳಿಂದ ಕೂಡಿದ ಒಂದು ಚಾರಿತ್ರಿಕ ಮಹತ್ವವನ್ನು ಹೊಂದಿರುವ ವೀರಮಹಿಳೆಯನ್ನು ಕುರಿತ ನಾಟಕವಾಗಿದೆ. ಇದು ಬಿದನೂರಿನ ರಾಜ ಸೋಮಶೇಖರ ಮತ್ತು ರಾಣಿ ಚೆನ್ನಮ್ಮಾಜಿಯವರ ಸರಸ ಸಲ್ಲಾಪದೊಂದಿಗೆ ಪ್ರಾರಂಭವಾಗುತ್ತದೆ. ಕೆಳದಿಯ ಅಭ್ಯುದಯಕ್ಕೆ ಹೆಣಗಾಡಿದ ಪರಿಶ್ರಮಿಸಿದ ಹಿರಿಯರನ್ನು ಸೋಮಶೇಖರನ ಮಾತಿನ ಮೂಲಕ ಪರಿಚಯಿಸುವರು. ಚೌಡಪ್ಪನಾಯಕ ಮತ್ತು ಅವನ ತಮ್ಮ ಭದ್ರಪ್ಪನಾಯಕ, ತಾಯಿ ಬಸವಂತಿದೇವಿಯರ ಸಂಭಾಷಣೆಯಿಂದ ಕೆಳದಿಯ ಸರ್ವಾಂಗೀಣ ಅಭಿವೃದ್ಧಿಗೆ, ಭದ್ರತೆಗೆ ಕಾರಣವಾದ 'ನಾಗರಮುರಿ' ಯ ಕುತೂಹಲಕರವಾದ ಪ್ರಸಂಗವೊಂದು ಬಯಲಾಗುವದು. ವಿಜಯನಗರದ ಶ್ರೀ.ಕೃಷ್ಣದೇವರಾಯನ ಆಗಮನ ಮತ್ತು ಕೆಳದಿಯ ನಾಯಕರನ್ನು ಕುರಿತು ಹೆಚ್ಚಿನ ಅಧಿಕಾರ ಮತ್ತು ಬೆಂಬಲ ನೀಡಿ. ಹರಸುವನು.

ಶಿವಾಜಿಯ ಮಗನಾದ ರಾಜಾರಾಮನ ಆಗಮನ ಮತ್ತು ಅವನಿಗೆ ಅಭಯಹಸ್ತ ನೀಡಿ ಚೆನ್ನಮ್ಮಾಜಿಯವರು ಆಶ್ರಯವಿತ್ತರು. ಅವನನ್ನು ಅಪಾಯದಿಂದ ಪಾರುಗಾಣಿಸಿ ಸುರಕ್ಷಿತ ಸ್ಥಳಕ್ಕೆ ಕಳುಹಿಸಿದರು. ಔರಂಗಜೀವನಿಂದ ಶತ್ರುದಾಳಿ ಪ್ರತಿದಾಳ ನಡೆಸಿ ಚೆನ್ನಮ್ಮಾಜಿಯ ಅಮೃತವಾಣಿಯಿಂದ ಹುರುದುಂಬಿಸಿದಳು ಆಗ

ಸೈನಿಕರು ಶತ್ರು ಸೈನ್ಯವನ್ನು ಹಿಮ್ಮೆಟ್ಟುವಂತೆ ಮಾಡಿತು. ದತ್ತಕಪುತ್ರನ ಸ್ವೀಕಾರ, ಬಸಪ್ಪನಾಯಕನಿಗೆ ಪಟ್ಟಾಭಿಷೇಕ ಮತ್ತು ರಾಣಿ ಚೆನ್ನಮ್ಮಾಜಿಯು ಮನಸ್ಸಿಗೆ ವಿಶ್ರಾಂತಿ ಬಯಸಿ ಬುವನಗಿರಿಗೆ ತೆರಳಿ ಶಿವನಾಮಸ್ಮರಣೆ, ಶಿವದ್ಯಾನ. ಶಿವಪೂಜೆಯಲ್ಲಿ ತೊಡಗಿ ೧೬೯೮ ರಲ್ಲಿ ಶಿವನ ಪಾದ ಸೇರಿದಳು.

ಈ ನಾಟಕ ರಚಿತಗೊಂಡ ಸಂದರ್ಭದ ಹಿನ್ನೆಲೆಯಲ್ಲಿ ರಾಷ್ಟ್ರವನ್ನು ಕಟ್ಟುವ ದೇಶ ಪ್ರೇಮವನ್ನು ಬೆಳೆಸುವಂತಹ ಸಾಮಾಜಿಕ ಪರಿಸರವಾಗಿತ್ತು. ಈ ಹಿನ್ನೆಲೆಯಲ್ಲಿ ಕೆಳದಿಯ ಚನ್ನಮ್ಮನ ಪಾತ್ರವು ರೂಪುಗೊಂಡಿದೆ.

೮) 'ಧರ್ಮಸಂಕಟ'

ನಾಟಕದಲ್ಲಿ ವರದಕ್ಷಿಣೆಯೆಂಬ ಪೆಡಂಬೂತ ವಿಷಯ ವಸ್ತುವಾಗಿದ್ದರೂ, ವರನ ತಿಳುವಳಿಕೆಯಿಂದ ಇದನ್ನು ಬಗೆಹರಿಸಲಾಗಿದೆ. ಶಂಕರಪ್ಪನವರು ಕೇಳಿದ ವರದಕ್ಷಿಣೆಗೆ ಹುಡುಗಿಯ ತಂದೆ ಪಂಪಣ್ಣನು ಪ್ಯಾಟ್ಯಾಗಿನ ಅಂಗಡಿ ಮಾರಲು ಮುಂದಾದಾಗ ವರ ಪ್ರಭಾಕರನಿಗೆ ಕನಿಕರ ಹುಟ್ಟಿತು. ತನ್ನ ಸ್ನೇಹಿತ ಮತ್ತು ತನ್ನ ತಂದೆಯ ಸ್ನೇಹಿತರೊಂದಿಗೆ ಉಪಾಯಮಾಡಿ ಮದುವೆಯ ದಿನ ತಂದೆಯ ಮನ ಬದಲಿಸುವಲ್ಲಿ ಯಶಸ್ವಿಯಾದರು. ಇದರಿಂದ ಸರಸ್ವತಿದೇವಿಯವರು ಮನಸ್ಸು ಮಾಡಿದರೇ ವರದಕ್ಷಿಣೆ ತಪ್ಪಿಸುವುದು. ನಮ್ಮ ಕೈಯಲ್ಲಿದೆ ಎಂದು ಸರಳವಾಗಿ ತಿಳಿಸಿರುವರು.

೯) ಉಡುಗೊರೆ

ಸಾಮಾಜಿಕ ಆಚರಣೆಯಾದ ದೀಪಾವಳಿ ಹಬ್ಬಕ್ಕೆ ಅಳಿಯ ಅತ್ತೆ ಮನೆಗೆ ಬರುವುದು ಉಡುಗೊರೆ ನೀಡುವುದು ವಾಡಿಕೆಯಾಗಿದೆ. ಇಂತಹ ಸಾಮಾಜಿಕ ಆಚರಣೆ ಮತ್ತು ದೌರ್ಜನ್ಯವನ್ನು ಮಾರ್ಮಿಕವಾಗಿ ಚುಚ್ಚುವಂತೆ ಸರಳವಾಗಿ ಸರಸ ಸಲ್ಲಾಪದೊಂದಿಗೆ ಚಿತ್ರಿಸುವರು. ಈ ನಾಟಕದಲ್ಲಿ ದೀಪಾವಳಿಗೆ ಉಡುಗೊರೆಯಾಗಿ ಹಾಕುವ ಮಾತನಾಡುವ ಮತ್ತು ನಡೆದಾಡುವ ಯಂತ್ರವೊಂದನ್ನು ನಿಮಗೆ ಕೊಡುವವರಿದ್ದಾರೆಂದು ಹೆಂಡತಿಯು ತನ್ನ ಗಂಡನಿಗೆ ಆಸೆ ತೋರಿಸುವಳು. ಉಡುಗೊರೆಯ ಆಸೆಯಿಂದ ಅತ್ತೆಯ ಮನೆಗೆ ಬಂದ ಅಳಿಯನಿಗೆ ಆ ಯಂತ್ರವೇ ತನ್ನ ಹೆಂಡತಿಯೆಂದು ತಿಳಿದಾಗ ತುಂಬಾ ನಿರಾಸೆ ಹೊಂದುತ್ತಾನೆ. ಅವಳ ಗೆಳತಿಯರೂ ಸಹ ಈ ಉಪಾಯವನ್ನು ತಾವೂ ಮಾಡಿದ್ದರೆ ತಮ್ಮ ತವರ ಹಣ ಉಳಿಯುತ್ತೆಂದು ತಮಾಷೆ ಮಾಡುವರು. ಆ ಕಾಲದ ವರದಕ್ಷಿಣೆಯಂತಹ ಸಾಮಾಜಿಕ ಸಮಸ್ಯೆಯನ್ನು ಬಿಂಬಿಸುವ ನಾಟಕವಾಗಿದೆ.

೬) **ಕಳೆದ ಕೈಗಡಿಯಾರ**

ಕೌಟುಂಬಿಕ ಸರಸದ ಒಂದು ಪ್ರಸಂಗವೇ ನಾಟಕವಾಗಿದೆ. ಕಳೆದ ಗಡಿಯಾರದಂತಹ ಸಾಮಾನ್ಯ ವಿಷಯವೇ ತುಂಬ ಲವಲವಿಕೆಯಿಂದ ಚಿತ್ರಿಸಲಾಗಿದೆ. ಕೈಯಲ್ಲಿದ್ದ ಗಡಿಯಾರವನ್ನು ಮನೆ ಮುಂದಿಯೆಲ್ಲ ಹುಡುಕುವುದೇ ತಮಾಷೆಯ ಸಂಗತಿಯಾಗಿದೆ. ಬದುಕಿನ ಇಂಥ ಸ್ವಾರಸ್ಯಗಳನ್ನು ಸರಸ್ವತಿಯವರು ಜೀವಂತವಾಗಿ ಸುಲಲಿತವಾಗಿ ಸೆರೆ ಹಿಡಿಯ ಬಲ್ಲರೆಂಬುದಕ್ಕೆ ಇದೇ ಸಾಕ್ಷಿಯಾಗಿದೆ. ಇದೊಂದು ಲಘು ಹಾಸ್ಯದ ನಾಟಕವಾಗಿದೆ.

೭) **'ನಾಲಿಗೆಯ ಬೆಲೆ'**

ಎಂಬ ನಾಟಕದಲ್ಲಿ ಮಾತು ಆಡಿದರೆ ಹೋಯ್ತು ಮುತ್ತು ಒಡೆದರೇ ಹೋಯ್ತು ಎಂಬ ಉಕ್ತಿಯಂತೆ ಮಾತು ಕೊಟ್ಟು ಮುರಿದು ಹೋದ ನಿಶ್ಚಿತಾರ್ಥವನ್ನು ಮುರಿದು ಅಧಿಕ ವರದಕ್ಷಿಣೆ ಅಸೆಗೆ ಇನ್ನೊಂದು ಮದುವೆಗೆ ಸನ್ನದ್ಧವಾಗುವ ವರನನ್ನು ಅವನ ಗೆಳೆಯ ಪ್ರಶ್ನಿಸುವನು. ಧರ್ಮದ ದಾರಿ ತೋರುವನು. 'ಮೊದಲನವರ ಮಾತು ಮುಗದದ್ದು ೯ ಸಾವಿರ ಇವರದು ೧೫ ಸಾವಿರ ಹೆಚ್ಚಾತು. ಈ ಹೆಚ್ಚಿನ ಆರು ಸಾವಿರ ರೂಪಾಯಿ ನನಗೆ ಕೊಡಲಿಕ್ಕೆ ಬೇಕು ಅಂತ ನಮ್ಮ ಕಾಕಾಗ ಹೇಳೆನಿ. ಅಂತ ವರ ಪ್ರಭಾಕರ ಎಂದಾಗ, ಅವನ ಗೆಳೆಯ ಚಂದ್ರಕಾಂತ ಅಂದರೆ ನಿನ್ನ ನಾಲಗೆಯ ಬೆಲೆ ಆರು ಸಾವಿರ ಅಂತ ಆತು. ಆರು ಸಾವಿರ ನಾಳೆ ನೀನು ಗಳಿಸಬಹುದು. ಅದರೆ ಇಂದ ಕಳಕೊಂಡ ನಾಲಗಿ ಮಾತ್ರ ಹೋಗಿ ಬಿಟ್ಟಿತು ನೋಡು. ಎಂದು ಚುಚ್ಚುವಂತೆ, ಮನ ಕಲಕುವಂತೆ ನುಡಿಯುವನು.

ಸರಸ್ವತಿ ದೇವಿಯವರ ಕಥೆ, ಕವಿತೆಗಳಂತೆ ನಾಟಕಗಳಲ್ಲಿಯೂ ರಚನಾತ್ಮಕ ಶೈಲಿಯನ್ನು ಗುರುತಿಸುತ್ತೇವೆ. ನಾಟಕಗಳನ್ನು ಬರೆಯುವುದೇ ವಿಶೇಷವಾದಂತಹ ಆ ಕಾಲದ ಸಂದರ್ಭದಲ್ಲಿ ಅವರು 'ರಂಗಚಿಂತನೆಗಳು' ಕುರಿತು ಸ್ಪಷ್ಟವಾದ ತಿಳುವಳಿಕೆ ನೀಡಿದವರಾಗಿದ್ದಾರೆ. ನಾಟಕ, ನಾಟಕಕಾರ, ನಟರು, ಪ್ರೇಕ್ಷಕರು ಹೇಗಿರಬೇಕು ? ಅವರ ಹೊಣೆಗಾರಿಕೆಗಳೇನು ? ರಂಗಭೂಮಿಯ ಅಭಿರುಚಿ ಯಾವುದಾಗಿರಬೇಕು? ಇವೆ ಮುಂತಾದ ವಿಷಯಗಲಷ್ಟೇಯೇ ಅಲ್ಲದೇ 'ಹೇಳಿದ ತತ್ವವನ್ನು ಸತ್ವಯುತವಾಗಿ ಜೀವಿಸಿ ತೋರಿಸಿದ ಶರಣರ ಬದುಕನ್ನು' ನಾಟಕಗಳಲ್ಲಿ ಅಳವಡಿಸಬೇಕು. ಕಾಲ್ಪನಿಕೆ ಕಥೆಗಿಂತ ಬಾಳಿ ಬದುಕಿದ ಇಂತಹ ಶರಣರ ಸತ್ಯ ಕಥೆಗಳೇ ನಾಟಕದ ಜೀವಾಳವಾಗಬೇಕೆಂದಿರುವರು. ಅವರು ಬರೆದ 'ಮೋಳಿಗೆಯ ಮಾರಯ್ಯಾ' ನಾಟಕದ

ಮುನ್ನುಡಿಯಲ್ಲಿಯೇ ಇಂತಹ ಸತ್ವಿಚಾರಗಳ ಕುರಿತು 60 ರ ದಶಕದಲ್ಲಿಯೇ ಮಾತಾಡಿರುವರು. ಈ ನಾಟಕವನ್ನು ಸಿನೆಮಾ ಮಾಡಬೇಕೆನ್ನುವುದು ಅವರ ಆಶಯವಾಗಿತ್ತು. ಅದಕ್ಕಾಗಿ ತುಂಬಾ ಪ್ರಯತ್ನ ಪಟ್ಟಿದ್ದರು.

ಇವರ ನಾಟಕಗಳ ಸಂಭಾಷಣೆಯೂ ಸಹ ಚಿಕ್ಕದಾಗಿಯೂ, ಚೊಕ್ಕದಾಗಿಯೂ ಇವೆ. ಪೌರಾಣಿಕ, ಚಾರಿತ್ರಿಕ ನಾಟಕಗಳಾದರೂ ಸಹ ಅಲ್ಲಿರುವ ಸಂಭಾಷಣೆಗಳು ಇಂದಿಗೂ ಜೀವಂತವೆನಿಸುವಷ್ಟೂ ಶಕ್ತಿಶಾಲಿಯಾಗಿವೆ. ಇವುಗಳೂ ಸಹ ಸ್ತ್ರೀಕೇಂದ್ರಿತವಾಗಿವೆ. ಬಸವಣ್ಣನವರ ಹೆಂಡತಿಯೊಂದಿಗಿನ ಅವರ ಈ ಮಾತು ಅದಕ್ಕೆ ಸಾಕ್ಷಿಯಾಗಿದೆ. ಓಲೆಯ ಕಳುವಿನ ಪ್ರಸಂಗದಲ್ಲಿ– 'ಕಳ್ಳನಿಗೆ ಓಲೆಯನ್ನು ಬಿಚ್ಚಿಕೊಡಬಾರದಿತ್ತೆ ಚಾಂಡಾಲಗಿತ್ತಿ ಸುಮ್ಮನೆ ಅವನ ಕೈ ನೋವಿಸಿದೆ ಎಂದಾಗ ಅವಳು ಇಷ್ಟು ದಿನ ಸಂಸಾರ ಮಾಡಿದ ನೀವು ನನ್ನನ್ನರಿಯದೇ ಹೋದಿರಿ ರಾತ್ರಿ ಬಂದ ಕಳ್ಳನ ಗುರುತು ನನಗೆ ಸಿಗಲಿಲ್ಲ. ಅದಕ್ಕಾಗಿ ನೀವು ನನ್ನನ್ನು ಹೀಯಾಳಿಸುವುದೇಕೆ? ಅವನು ಹಗಲು ಬಂದಿದ್ದರೂ ಸಹ ನಾನು ಓಲೆಯನ್ನು ಕೊಡುತ್ತಿದ್ದೇನು ಎಂದು ನೊಂದು ಅವಳು ಬಸವಣ್ಣನವರಿಗೆ ತಿರುಗೇಟು ನೀಡಿರುವ ಇಂತಹ ಸ್ವಾಭಿಮಾನ್ಯತೆ ಇರುವ ಮಾತುಗಳು ಅವರ ಸಹಜತೆಗೆ ಕನ್ನಡಿ ಹಿಡಿದಂತಿವೆ.

ಕಾಶ್ಮೀರದ ರಾಜ ಭೂಪಾಲನ ಮಹಾರಾಣಿಯಾದ ಮಹಾದೇವಿಯ ಮಾತುಗಳಲ್ಲಿ ಸ್ವಂತಿಕೆ ಎದ್ದು ಕಾಣುತ್ತದೆ. 'ಹೆಣ್ಣೆಂದರೆ ಅಂಜಿಕೆ ಇರುವ ನೀವು ಅವಳನ್ನು ಬಿಟ್ಟು ಮುಕ್ತಿ ಪಡೆಯಲು ಬಯಸುತ್ತೀರಿ ಭಗವಾನ ಬುದ್ಧನು ಸಹ ಇದನ್ನೇ ಮಾಡಿದನು'. ಆಗ ಅವನ ಹೃದಯವು ನೊಂದಿರುವುದು ಎಂದಾಗ, 'ಇದೊಳ್ಳೆಯ ನ್ಯಾಯ? ತ್ಯಾಗಿ ಅವನೊಬ್ಬನೇ ಏನು? ಅವನು ಹೋದ ಮೇಲೆ ಎಳೆ ಮಗುವನ್ನು ಹಿಡಿದುಕೊಂಡು ವಿರಹ ವೇದನೆಯಲ್ಲಿ ದಿನ ಕಳೆದ ಅವಳ ಸ್ಥಿತಿಯನ್ನು ಊಹಿಸಬಲ್ಲಿರಾ?' ಎಂದು ಹೇಳುತ್ತಾ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಕ್ರಾಂತಿಕಾರಿ ಪ್ರಶ್ನೆಯನ್ನು ಕೇಳುವಳು. ನೀಲಾಂಬಿಕೆಯಂತೆ ಅವರಿಗೆ ಸ್ವಂತಿಕೆಯಿರುವ ಮಾರಯ್ಯನ ಹೆಂಡತಿಯ ಪಾತ್ರವು ಅಚ್ಚುಮೆಚ್ಚಿನದಾಗಿದೆ.

048756


ಹನ್ನೆರಡನೆಯ ಶತಮಾನದ ಶರಣಶರಣೆಯರ ಚರಿತೆಯನ್ನು ಕುರಿತು ಬರೆದ ಈ ಪುಸ್ತಕದ ಕುರಿತು ಶ್ರೀ ಸದಾಶಿವ ಒಡೆಯರ, ಕರ್ನಾಟಕ ಯುನಿವರ್ಸಿಟಿ, ಧಾರವಾಡ. ಅವರು ಸರಸ್ವತಿಯನರ ಕೃತಿಗಳಿಗೆ ಈ ರೀತಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


'Smt. Saraswati Goudar herself one of the finest flowers of enlightened Indian women hood, who has made a deep study of the lives of Veerashiva women saints, has choosen to

present the life and philosophy of ten such women saints. Smt. Goudar is a writer of repute, who has enriched Kannada ----------- with many of her writings' Sadashiv Wodeyar.


ಇವರ ಮಾತಿನಿಂದ ಸರಸ್ವತಿದೇವಿಯವರ ಜನಪ್ರಿಯತೆ ತಿಳಿಯುತ್ತದೆ. ಇವರು ಚಾರಿತ್ರಿಕ ಮಹಿಳೆಯರಾದ ಚನ್ನಮ್ಮನನ್ನು ಕುರಿತು ಬರೆದು ನಾಡಪ್ರೇಮವನ್ನು ಮೆರೆದಿರುವರು ಹೀಗೆ ನಾಡಿನ ಸ್ವತಂತ್ರ ಹೋರಾಟ, ದೇಶಪ್ರೇಮಿಗಳಾದ ದೇಶಭಕ್ತರನ್ನು ಕೂಡ ಸರಸ್ವತಿಯವರು ಬದುಕು ಬರಹವನ್ನು ಪ್ರಭಾವಿಸಿದೆ.

ಸಾಮಾಜಿಕ ನಾಟಕಗಳಲ್ಲಿ ಲಘು ಹರಟೆಯ ರೂಪದಲ್ಲಿಯೇ ಸಾಮಾಜಿಕ ಸಮಸ್ಯೆಯಾದ ವರದಕ್ಷಿಣೆಯನ್ನು ಕುರಿತು ಚರ್ಚಿಸಿದ್ದಾರೆ. ವರದಕ್ಷಿಣೆ ನೀಡುವ ಮತ್ತು ಪಡೆಯುವವರ ದುರಾಸೆಯನ್ನು ಹಾಸ್ಯದೊಂದಿಗೆ ಖಂಡಿಸುವರು. ಇದರೊಂದಿಗೆ ಕೌಟುಂಬಿಕ ಸರಸ ಪ್ರಸಂಗಗಳೂ ಸಹ ಇವರ ನಾಟಕಗಳ ವಸ್ತುವಾಗಿ ಬಳಕೆಯಾಗಿವೆ. 'ಕಳೆದ ಕೈಗಡಿಯಾರ'ದಲ್ಲಿ ತುಂಬ ಸಾಮಾನ್ಯವಾದ ವಿಷಯವನ್ನು ನಾಟಕವಾಗಿ ರೂಪಿಸಿದ್ದಾರೆ.


ಸಾರ ಸರಸ್ವತಿ
ಸಂ: ವಿಜಯಾ ದಬ್ಬೆ


कर्नाटक-शिवशरणियाँ
मूल कन्नड :
सरस्वतीदेवी गौडर
रूपान्तर :
प्रो. शंकरराव कप्पीकरी
एस. शिवमूर्तिस्वामी
कर्नाटक प्रांतीय हिन्दी प्रचार सभा, धारवाड
मूल्य : १·२५


ಅಲ್ಪ ವಿರಾಮ
ಸೀತಾ ಸ್ವೀಕಾರ
?
ಸೀತಾಪರಿತ್ಯಾಗ


ಮೋಳಿಗೆಯ ಮಾರಯ್ಯ

ಅಧ್ಯಾಯ ೬
ಪ್ರಬಂಧಗಳು ಮತ್ತು ಇತರ ಸಾಹಿತ್ಯಕ ಮಾದರಿಗಳು

ಸರಸ್ವತಿ ದೇವಿಯವರು ಕತೆಗಳು, ಕವಿತೆಗಳು, ನಾಟಕಗಳನ್ನು ಬರೆದಂತೆ ಪ್ರಬಂಧಗಳು, ಲಘು ಭಾಷಣಗಳನ್ನು ಬರೆದಿದ್ದಾರೆ. ಈ ಸಾಹಿತ್ಯದ ಪ್ರಕಾರದಲ್ಲಿ ಅವರ ತೀಕ್ಷ್ಣದೃಷ್ಟಿ, ವಿಚಾರದ ಸ್ಪಷ್ಟತೆ, ಭಾಷಾಸ್ವಾಮ್ಯಾ, ಸ್ಪಷ್ಟ ನಿಲುವುಗಳು ಅವರೊಬ್ಬ ಉತ್ತಮ ಬರಹಗಾರರು ಎಂಬುದು ತಿಳಿದು ಬರುತ್ತದೆ.

ಅವರ ಒಟ್ಟು ೨೮ ಇತರ ಸಾಹಿತ್ಯಕ ಮಾದರಿಗಳು ಲಭ್ಯವಿವೆ. ಅದರಲ್ಲಿ ಎರಡು ಅಧ್ಯಕ್ಷ ಭಾಷಣ , ಉಳಿದ ೨೬ ರಲ್ಲಿ ಪ್ರಭಂದಗಳು ಮತ್ತು ಇತರ ಸಾಹಿತ್ಯಕ ಮಾದರಿಗಳು ಲಭ್ಯವಿವೆ. ಇವುಗಳಲ್ಲಿ ಕೆಲವು ಪ್ರಬಂಧಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕೆಲವು ಪ್ರಬಂಧಗಳನ್ನು ಇಲ್ಲಿ ಚರ್ಚಿಸಲಾಗಿದೆ

೧] ಮನೆಯಲ್ಲಿದ್ದು ರಾಷ್ಟ್ರಸೇವೆ.

'ಮನೆ ಎಂದರೆ ಬರೀ ಇಟ್ಟಿಗೆಗಳ ಗೋಡೆಯಲ್ಲ,ರಾಷ್ಟ್ರ ನಿರ್ಮಾಣದ ಕಾರ್ಯಕ್ಷೇತ್ರ ವಾಗಬಲ್ಲುದು' ಎಂಬುದು ಲೇಖಕಿಯ ಅಭಿಪ್ರಾಯವಾಗಿದೆ.

ಮನೆಯಲ್ಲಿಯೇ ಇದ್ದು ಮನೆಯೊಡತಿ ರಾಷ್ಟ್ರಸೇವೆ ಮಾಡುವುದು ಸಾಧ್ಯವೆ? ಸೀಮಿತ ಕಾರ್ಯಕ್ಷೇತ್ರದಲ್ಲಿ ವ್ಯವಹರಿಸುವ ಅವಳು ಯಾವ ರೀತಿ ತನ್ನ ಸೇವೆ ಸಲ್ಲಿಸಬಲ್ಲಳು?.... ಎಂಬ ಇತ್ಯಾದಿ ಪ್ರಶ್ನೆಗಳನ್ನು ಸರಸ್ವತಿ ದೇವಿಯವರು ಮುಂದಿಟ್ಟುಕೊಂಡೇ ಸೂಕ್ಷ್ಮ ಉತ್ತರ ನೀಡುವರು. 'ಒಂದು ಮನೆಯನ್ನು ಸುಸಂಪವನ್ನಾಗಿ, ಸುಸಜ್ಜಿತವಾಗಿ, ಸುಶಿಕ್ಷಿತವಾಗಿ, ಸುಸಂಸ್ಕೃತವಾಗಿ, ಸುಭದ್ರವಾಗಿ ಊರ್ಜಿತಕ್ಕೆ ಬರುವಂತೆ ಆಕೆ ಅಚ್ಚು ಕಟ್ಟಾಗಿ ನೋಡಿಕೊಂಡರೆ ಅದುವೇ ರಾಷ್ಟ್ರಸೇವೆಯೆನಿಸುವುದು. ಗಾಂಧೀಜಿಯವರ ರಾಷ್ಟ್ರಸೇವೆಯನ್ನು ಒಪ್ಪಿಕೊಳ್ಳುವ ನಾವು ಕಸ್ತೂರಿಬಾಳನ್ನು ರಾಷ್ಟ್ರ ಸೇವಕಿ ಅನ್ನಲಾಗದು ಭಾರತೀಯ ಗೃಹಿಣಿಯ ತ್ಯಾಗ, ಪರೋಪಕಾರ, ಧಾರ್ಮಿಕ, ಆಚಾರಗಳಿಂದ ಸದ್ಗುಣಗಳಿಂದ ಶೋಭಿಸುವಳು. ತನ್ನ ಕುಟುಂಬದ ಸಮಾಜದ ಒಳತಿಗಾಗಿ ಆಚರಿಸುತ್ತಿದ್ದ ಹಬ್ಬ-ಹರಿದಿನಗಳು, ಯಜ್ಞ-ಯಾಗಾದಿಗಳು, ವ್ರತ-ವೈಕಲ್ಪಗಳಷ್ಟೇ ಮೀಸಲಾಗಿಡದೇ ಇಂದು ರಾಷ್ಟ್ರೀಯ ಹಬ್ಬಗಳನ್ನು ಸಹ ರಾಷ್ಟ್ರಾಭಿಮಾನದಿಂದ ವಿಜೃಂಭಣೆಯಿಂದ ಆಚರಿಸಬೇಕು.

ಮಧ್ಯಮ ವರ್ಗದ ಗೃಹಿಣಿ ಪ್ರಸ್ತುತ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಮಿತವ್ಯಯವಾಗಿ, ಹಣ ಶೇಖರಿಸಿಡಬೇಕು, ಗೃಹ ಕೈಗಾರಿಕೆಗಳಿಗೆ ಸ್ಪಂದಿಸಬೇಕು, ಕುಟುಂಬದ ಎಲ್ಲರ ಆರೋಗ್ಯ, ಯೋಗಕ್ಷೇಮ, ನೋಡಿಕೊಂಡು ಮಕ್ಕಳ ದಿನನಿತ್ಯದ

ಪಾಠದೊಂದಿಗೆ ಸಂಸ್ಕಾರಗಳನ್ನು ಧಾರೆಯರೆಯಬೇಕು ಸಚ್ಚಿಲರೂ, ಸದಾಚಾರಿಗಳು, ಧೈರ್ಯವಂತರನ್ನಾಗಿಗೂ ಬೆಳೆಸಬೇಕು. ಒಳ್ಳೆಯ ಪರಿಸರ ಮನೆಯ ಒಳಗೂ-ಹೊರಗೂ ಇರಬೇಕೆಂಬುದು ಲೇಖಕಿಯ ಆಶಯವಾಗಿದೆ.

ಸರಸ್ವತಿ ದೇವಿ ಗೌಡರು ಶರಣರ ವಚನಗಳನ್ನು ಪರಿಪಾಲಿಸಿದವರು. 'ಕಾಯಕವೇ ಕೈಲಾಸ'ವೆಂದಂತೆ, ಧನ ಸಹಾಯವನ್ನು ಸಾರ್ವಜನಿಕ ಸಂಘ-ಸಂಸ್ಥೆಗಳಿಗೆ ಯೋಗ್ಯತಾನುಸಾರ ನೀಡಬೇಕು. 'ಹನಿ ಹನಿ ಗೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ಬಳ್ಳ' ಎಂಬ ಗಾದೆಯಂತೆ ಎಲ್ಲರ ಆಶಯದಿಂದ ಸಮಾಜಸೇವೆ ಸಾಧ್ಯ. ಬಿಡುವಿನ ವೇಳೆಯ ಸದುಪಯೋಗ ಪಡಿಸಿಕೊಂಡು ಸಮಾಜ ಕಲ್ಯಾಣ ಕೇಂದ್ರಗಳಲ್ಲಿ ಸಾಧ್ಯವಾದಷ್ಟು ಸೇವೆ ಸಲ್ಲಿಸಬೇಕು. ಮಹಿಳೆಯರಷ್ಟೆ ಅಲ್ಲದೇ ರಾಷ್ಟ್ರೀಯ ಮುಂದಾಳುಗಳು, ಸಮಾಜದ ಧರೀಣರು, ಸಂಘ ಸಂಸ್ಥೆಗಳು ಜನ ಜಾಗೃತಿಯನ್ನುಂಟು ಮಾಡಬೇಕು. ಹೀಗೆ ವಿಚಾರಮಾಡುತ್ತಾ ಮನೆಯ ಒಳಗಿದ್ದೂ ಮಾಡುವ ಕೆಲಸಗಳಿಗೆ ಬೆಲೆ-ಗೌರವ ಇದೆ ಎಂಬುದನ್ನು ಹೇಳುತ್ತಿದ್ದಾರೆ. ಈಗ ನಾವು House- wife ನ್ನು Homemaker ಎನ್ನುತ್ತೇವೆ.

೨] ಮಹಿಳಾ ಶಿಕ್ಷಣ ಪ್ರಪಂಚ

ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣವೊಂದೇ ಮೂಲಮಂತ್ರ. ಕ್ಷಣದಿಂದ ಅವಳು ತನ್ನ ಬಾಳನ್ನು ರೂಪಿಸಿಕೊಂಡು ಇತರರಿಗೆ ಮಾದರಿಯಾಗಲಲ್ಲಳು. ಈ ಲೇಖನದಲ್ಲಿ ಅವರು ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಭಾರತೀಯರ ಸ್ಥಿತಿಯನ್ನು ವಿಮರ್ಶಿಸುವರು. ಕಾಲದಿಂದ ಕಾಲಕ್ಕೆ ಪ್ರಭುತ್ವಗಳು ಬದಲಾಗುತ್ತ ಅಲ್ಲಿನ ಜನರ ಮನಸ್ಸು ತಿಳಿಯಾಗುತ್ತ 'ಹೊಸತನ' ವನ್ನು ಹಪಿಹಪಿಸುತ್ತಾ ಅನೇಕ ಸುಧಾರಣೆಗಳನ್ನು ಕಾನೂನು-ಕಾಯಿದೆಗಳನ್ನು ಹೊರಡಿಸಿ ಶಿಕ್ಷಣ ದೊರೆಯುವಂತೆ ಮಾಡಬೇಕು ಅನ್ನುವ ಮನೋಭಾವ ಭಾರತೀಯರಲ್ಲಿ ಒಡ ಮೂಡಿತು. ಇದನ್ನೇ ಮಹಿಳಾ ಶಿಕ್ಷಣ ಪ್ರಸಾರದ ಮೂಲ ಎನ್ನಬಹುದೆಂದು ಲೇಖಕಿಯ ಅಭಿಪ್ರಾಯ.

ಪ್ರಾಚೀನ ಕಾಲದಲ್ಲಿ ಮಹಿಳೆಯರು ವಿದುಷಿಯ, ಗಣಿತಜ್ಞೆಯರು, ರಸಾಯನಶಾಸ್ತ್ರ, ಭೂಗರ್ಬಶಾಸ್ತ್ರ, ಖಗೋಲಶಾಸ್ತ್ರಗಳಲ್ಲಿಯೂ ಪರಿಣಿತಿ ಹೊಂದಿದ್ದರೆಂದು 'ಭಕ್ತಿ ವಿಜಯ' ಎಂಬ ಗ್ರಂಥದಲ್ಲಿ ಉಲ್ಲೇಖವಿದೆ. ಗಾರ್ಗಿ, ಮೈತ್ರೇಯಿ ತತ್ವಜ್ಞೆಯರಾದರೆ ಸುಲಭ ಯೋಗಶಾಸ್ತ್ರದಲ್ಲಿಯೂ, ಸಂಘಮಿತ್ರೆಯೂ ಧರ್ಮ ಪ್ರಸಾರದಲ್ಲಿಯೂ ಸಕ್ರೀಯವಾಗಿ ಪಾಲುಗೊಂಡವರು. ಕೇವಲ ಅಕ್ಷರ ಜ್ಞಾನವೇ

ಶಿಕ್ಷಣವಲ್ಲ ಸಾಮಾಜಿಕ, ನೈತಿಕ ಮೌಲ್ಯಗಳು ಹೇಗೆ ಶಿಕ್ಷಣವಾಗಬಲ್ಲವು ಎಂದು ಹೇಳುವಲ್ಲಿ ಅವರ ಸ್ವಂತಿಕೆ ಎದ್ದು ಕಾಣುತ್ತದೆ.

ಲೇಖಕಿ ಬಾಲ್ಯ ವಿವಾಹ, ಸತಿಪದ್ಧತಿಯ ಕುರಿತು ವಿವಾಹದ ಸೂಕ್ತ ಸಮಯವನ್ನು ತಿಳಿಸಿದ್ದಾರೆ. ಭಾರತದಲ್ಲಿ ಪ್ರಾರಂಭಗೊಂಡ ಮೊದಲ ಮಹಿಳಾ ಶಿಕ್ಷಣ ಸಂಸ್ಥೆಗಳು ಮತ್ತು ಮೊದಲ ಮಹಿಳಾ ಪದವೀಧರರು ೧೮೪೯ ರಲ್ಲಿ ಸ್ಥಾಪಿತವಾದ ಮೊದಲನೆಯ ಮಹಿಳಾ ಶಿಕ್ಷಣ ಸಂಸ್ಥೆ ಬೆಮ್ರಾನ ಕಾಲೇಜ ಮೊದಲಿನದು. ಕೆಲವು ಮಹಿಳಾ ಪದವೀಧರರ ಹೆಸರಗಳನ್ನು ಸಂಗ್ರಹಿಸಿದ್ದಾರೆ.

ಕಲಕತ್ತಾ ವಿಶ್ವವಿದ್ಯಾಲಯ : ಚಂದ್ರಮುಖಿ ಬಸು-೧೮೮೪

ಮದ್ರಾಸ ವಿಶ್ವವಿಧ್ಯಾಲಯ : ಮ್ಯಾನರೀಶಿಯಾ ನಾನಪಿಜೆಂಟ

ಮುಂಬೈ ವಿಶ್ವವಿಧ್ಯಾಲಯ : ಕಾರ್ನೇಲಿಯಾ ಸೋರಾಬಿ -೧೮೮೭

ಅಲ್ಹಾಬಾದ ವಿಶ್ವವಿದ್ಯಾಲಯ : ಸೋಫಿಯಾ ಡಿ. ಅಬ್ರಾನ -೧೮೯೧

ಪಂಜಾಬ ವಿಶ್ವವಿಧ್ಯಾಲಯ : ಆಲ್ ದಸರತ್-೧೯೧೩

ಬನಾರಸ ವಿಶ್ವವಿದ್ಯಾಲಯ : ವೃಜಕುಮಾರಿ ಹುಕ್ಕಾ -೧೯೧೮

ಅಲೀಗಡ ವಿಶ್ವವಿಧ್ಯಾಲಯ : ಪಾಶಾಬೇಗಮ್ -೧೯೨೪

ನಾಗಪುರ ವಿಶ್ವವಿದ್ಯಾಲಯ : ಮಾರ್ಗರೇಟ್.ಬ. ಸ್ಯಾಮುಯೆಲ್. ಇವುಗಳಷ್ಟೇ ಅಲ್ಲದೇ ವಿವಿದ ಕ್ಷೇತ್ರಗಳಲ್ಲಿ ಮೊದಲನೆಯವರೆನಿಸಿದ ಕೆಲವು ಮಹಿಳೆಯರ ಹೆಸರುಗಳನ್ನು ನೀಡಿರುವರು. ಲೇಡಿ ಹಾರ್ಡಿಂಜ ಮಹಿಳಾ ಮೆಡಿಕಲ್ ಕಾಲೇಜು-೧೯೧೬ (ಪ್ರತ್ಯೇಕ ಮಹಿಳೆಯರಿಗಾಗಿ) ಮಹರ್ಷಿ ಡಿ.ಕೆ. ಕರ್ಲೆಯಿಂದ-ಎಸ್.ಎನ್.ಡಿ.ಟಿ ಮಹಿಳಾ ವಿಶ್ವವಿಧ್ಯಾಲಯ -ಪುಣೆ.

ವಿವಿಧ ಕ್ಷೇತ್ರಗಳಲ್ಲಿ ಪ್ರಥಮರು :-

ಶ್ರೀಮತಿ ವಿ.ಡಬ್ಲೂ ಜಗನ್ನಾಥರು ವೈದ್ಯಕೀಯ ವಿದೇಶಯಾನ

ಶ್ರೀಮತಿ ಲೇಡಿ ಭೋಸ (ಸಸ್ಯ ವಿಜ್ಞಾನಿ ಜಗದೀಶ ಚಂದ್ರಬೋಸರ ಪತ್ನಿ)

ಮದ್ರಾಸಿನ ಮೇಡಿಕಲ್ ಕಾಲೇಜಿನಲ್ಲಿ ಓದಿದ ಪ್ರಥಮ ಮಹಿಳೆ ಕು. ಕಾರ್ನೆಲಿಯಾ ಸೋರಾಬಜಿ ಆಕ್ಷಫರ್ಡ ವಿ.ವಿ ದಿಂದಾ ಕಾಯಿದೆ ಪದವಿ ಪಡೆದ ಪ್ರಥಮ ಮಹಿಳೆ ಕು. ಮಿಥಾನ ತಾತಾ ಪ್ರಥಮ ಬ್ಯಾರಿಸ್ಟರ ಮಹಿಳೆ. ಉತ್ತರ ಕರ್ನಾಟಕದಲ್ಲಿ ಧಾರವಾಡದ ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜು ಪ್ರಥಮವೆಂದು ಹೇಳಬಹುದು. ಅವರ ಈ ಎಲ್ಲ ದಾಖಲೆಗಳು ನಮ್ಮ ಸ್ತ್ರೀವಾದ ಅಧ್ಯಯನಕ್ಕೆ ಅತ್ಯಂತ ಸಹಾಯಕವಾಗಿವೆ. ಸುಶಿಕ್ಷಿತವಾದ ಮಹೀಳೆ ವ್ಯಕ್ತಿ ವಿಕಾಸದೊಂದಿಗೆ ಕುಟುಂಬದ

ಹಾಗೂ ಸಮಾಜದ ಸರ್ವತೋಮುಖ ವಿಕಾಸವನ್ನು ಸಾಧಿಸುವಲ್ಲಿ ಪಣತೊಡಬೇಕೆಂದು ಸರಸ್ವತಿ ಗೌಡರರು ಹಾರೈಸಿ ಇದರಲ್ಲಿ ಶಿಕ್ಷಕಿಯರ ಪಾತ್ರ ಅತೀ ಮಹತ್ವದೆಂದು ಧಾರವಾಡ ಟ್ರೇನಿಂಗ ಕಾಲೇಜಿನ ವಜ್ರ ಮಹೋತ್ಸವದ ಸಮಯದಲ್ಲಿ ಅದರ ಉತ್ತರೋತ್ತರ ಅಭಿವೃದ್ಧಿಗಾಗಿ ಹೃದಯ ತುಂಬಿ ಹಾರೈಸಿದ್ದಾರೆ.

೩] ೪೨ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾಗೋಷ್ಠಿಯ ಅಧ್ಯಕ್ಷ ಭಾಷಣ

ದಿ: ೨೯-೧೯೬೧ ಗದಗ –ಬೇಟಗೇರಿ

ಈ ಅಧ್ಯಕ್ಷ ಭಾಷಣದಲ್ಲಿ ಗದುಗಿನ ಪ್ರಾಚೀನತೆಯನ್ನು ಸಾಹಿತಿಗಳನ್ನು ಕನ್ನಡ ನಾಡು ಉದಯಿಸಿದರೂ ಸೂಕ್ತ ಹೆಸರಿಡುವಲ್ಲಿಯ ವಿಳಂಬವನ್ನು ನೆನೆಯುವರು. ಸಾಹಿತ್ಯ ಸಮ್ಮೇಳನಗಳಲ್ಲಿ ಮಹಿಳಾ ಗೋಷ್ಟಿಯ ಪಾತ್ರ ಜನರ ಜನಾರ್ದತೆಯಿಂದ, ಸಹಕಾರದಿಂದ ಮಹಿಳೆಯರು ಮುಂದು ಬರಲು ಸಾಧ್ಯವೆಂದು ಈ ಸೌಹಾರ್ಧಭಾವ ಜಾಗೃತವಾಗಿರಲಿ ಎಂದರು.

ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲ್ಲವರಿದ್ದು ಬಲವಿಲ್ಲ । ಸಾಹಿತ್ಯ
ಎಲ್ಲರಿಗಿಲ್ಲ ಸರ್ವಜ್ಞ ॥ ಈ ತ್ರಿಪದಿಯಲ್ಲಿಯ ಕೊನೆಯ

ಸಾಲು ಮಹಿಳೆಯರಿಗೆ ಅನ್ವಯಿಸುತ್ತದೆ. ಮಹಿಳೆಯರ ಕೃತಿ ಕಡಿಮೆಯಿದ್ದರೂ, ರಚಿತಗೊಂಡ ಕೆಲವೇ ಕೃತಿಗಳಲ್ಲಿ ಆಕೆಯ ಪ್ರತಿಭೆ ಮಿಂಚಿದೆ. ತ್ರಿಪದಿಯ ಸಾಲುಗಳಲ್ಲಿ ಮೂರು ಲೋಕದ ವಿಸ್ತಾರವನ್ನು ಅಳೆದು ತೋರಿಸುವ ಗರತಿಯ ಹಾಡುಗಳೆ ಈ ಮಾತಿಗೆ ನಿದರ್ಶನ ಜನಪದ ಸಾಹಿತ್ಯದಲ್ಲಿನ ವಿವಿಧ ಪ್ರಕಾರದ ಹಾಡುಗಳು ಸಾಹಿತ್ಯ ಗಂಗೆಯಾಗಿ ಹರಿದು ಬಂದಿದೆ. ಸಾಹಿತ್ಯ ಸೃಷ್ಟಿಗೆ ಸಮಯ ಮೀಸಲಿಟ್ಟು ಮಹಿಳೆಯರು ಶ್ರಮಿಸಬೇಕು. ಮಹಿಳಾ ಸಾಹಿತ್ಯವನ್ನು ಮಹಿಳೆಯರಿಂದ ರಚಿತವಾದದ್ದು ಮಹಿಳೆಯರನ್ನು ಕುರಿತು ರಚಿತವಾದದೆಂದು ವಿಂಗಡಿಸಬಹುದು. ಮೊದಲನೆಯದರಲ್ಲಿ ವಾಸ್ತವಾಂಶ ಹೆಚ್ಚು, ನಂತರದಲ್ಲಿ ಪಾಂಡಿತ್ಯವಿದ್ದರೂ ವಾಸ್ತವಾಂಶದ ಕೊರತೆ ಇರಬಹುದು ಮನರಂಜನೆಗಿಂತ ಮಾನವ ವಿಕಾಸಕ್ಕಾಗಿ ಸಾಹಿತ್ಯ ರಚನೆಯಾಗಬೇಕು. ವ್ಯಾಪಾರ, ವೃತ್ತಿ, ವ್ಯವಸಾಯದ ಅಭಿವೃದ್ಧಿಗೆ ಮುಂಗಡ ಹಣ ಸರಕಾರದಿಂದ ದೊರೆಯುವಂತೆ ಮಹಿಳೆಯರ ಸಾಹಿತ್ಯ ಪ್ರಕಟಣೆಗೆ ದೊರೆಯಬೇಕೆನ್ನುವ ಹಂಬಲ ಅವರ ಸಾಹಿತ್ಯದ ಕಾಳಜಿಯನ್ನು ನಮಗೆ ಕಾಣಿಸುತ್ತದೆ.

ಇಂದಿನ ಯಾಂತ್ರಿಕ ಬದುಕಿನಿಂದ ಜನಪದ ಸಾಹಿತ್ಯದ ಗರತಿಯ ಹಾಡುಗಳು ಮಾಯವಾಗುತ್ತಿವೆ. ಕಥೆ, ಸಣ್ಣಕಥೆ, ಪ್ರಬಂಧಗಳು ಮೂಡಿ ಬರಲಿ. ವಾಚನಾಭಿರುಚಿಯು ಬರೆದುದನ್ನು ಪೋಷಿಸಲಿ ಮಕ್ಕಳಿಗೆ ಸ್ವಾಸ್ಥ್ಯ ಸಾಹಿತ್ಯದ

ಪರಿಚಯ ನೀಡಿ ಮಹಿಳಾಗೋಷ್ಠಿಯ ಗೊತ್ತುಗುರಿಗಳನ್ನು ಕಾರ್ಯಗತಗೊಳಲಿ ಎಂಬ ಹಾರೈಕೆಯೊಂದಿಗೆ ಅಧ್ಯಕ್ಷ ಭಾಷಣಕ್ಕೆ ಪೂರ್ಣವಿರಾಮವನ್ನಿಡುವರು. ಅವರ ಈ ಹಾರೈಕೆಯು ನಮ್ಮ ದೈನಂದಿನ ಬದುಕಿಗೆ, ಸಮಾಜದ ಎಲ್ಲ ವಿಧದ ಜನರಿಗೆ ಬಲು ಉಪಯುಕ್ತವಾದ ಅಂಶವಾಗಿವೆ.

೪] ಹೊಸ ಹಿಂದೂ ಕಾಯಿದೆ.

ಲೇಖಕಿಯು ಅಂದಿನ ಸಮಯದಲ್ಲಿ ಸಾಕಷ್ಟು ಚರ್ಚಿತವಾಗಿ ನೆನೆಗುದಿಗೆ ಬಿದ್ದಿರುವ ೧೯೪೪ ರಲ್ಲಿ ನಾಂದೀ ಹಾಡಿ ೧೯೪೮ ರವರೆಗೂ ಕಾರ್ಯಗತವಾಗದೇ ಇರುವ ಹೊಸ ಹಿಂದೂ ಕಾಯಿದೆಯ ಕುರಿತು ಹೇಳುವರು. ಈ ಹೊಸ ಹಿಂದೂ ಕಾಯಿದೆಯ ಪ್ರಕಾರ ಹೆಣ್ಣು ಮಕ್ಕಳಿಗೆ ಸ್ತ್ರೀಧನ ಸಂಪೂರ್ಣ ಒಡೆತನ ಹಾಗೂ ವಿನಿಯೋಗದ ಅಧಿಕಾರವು ಇರುವುದೆಂದು ಹೇಳುವಲ್ಲಿ ಅವರಿಗಿದ್ದ ಇನ್ನೊಂದು ಮಹತ್ವದ ಆಸಕ್ತಿ ವಲಯ ಬಯಲಾಗುವುದು. ಮಗಳು ಮಗನಷ್ಟು ಪಾಲು ತೆಗೆದುಕೊಂಡಾಗ ಆಗುವ ಲಾಭ-ಹಾನಿಯ ಕುರಿತು ಹೇಳುವಲ್ಲಿ ಅವರ ಆ ಕಾಯಿದೆಯನ್ನು ಸ್ವೀಕರಿಸಬೇಕಾದ ಸಮಾಜದ ಜನರ ತುಡಿತವು ಎದ್ದು ಕಾಣುವುದು ಡಾ॥ ದೇಶಮುಖರ ತಾಯಿಯಂತೆ ಗಂಡನ ತರುವಾಯ (ಹೆಂಡತಿಗೆ) ವಿಧವೆಗೆ ವಾರಸಾ ದೊರೆತಿದ್ದು ಸ್ವಾಗತಾರ್ಹ ಅದು ಅವಳ ಜೀವನಕ್ಕೊಂದು ದಾರಿಯಾಗಿದೆ. ಈ ಹೊಸ ಕಾಯಿದೆಯ ಹೊಣೆಗಾರಿಕೆ, ನೈತಿಕ ಪರಿಣಾಮಗಳ ಕುರಿತು ಬರೆದಿರುವರು. ೧೯೪೬ ರಲ್ಲಿ ಬಂದ ಕಾಯಿದೆಯನ್ವಯ ಹೆಂಡತಿಯು ಗಂಡನಿಂದ ಬೇರೆ ಇದ್ದ ವಿಷಯ ಸ್ಥಿತಿಯಲ್ಲಿ ಜೀವನಾಂಶವನ್ನು ಪಡೆಯಬಹುದಾದರೂ ಅವನು ಕುಟಿಲತೆಯಿಂದ ಪಾರಾಗಬಹುದು. ಈ ಕಾಯಿದೆಯಲ್ಲಿ ದ್ವಿಪತ್ನಿ ವಿವಾಹ ಪ್ರತಿಬಂಧಕ ಕಾಯಿದೆ ಮತ್ತು ವಿವಾಹ ವಿಚ್ಛೇದನಗಳು ಸೇರಿವೆ. ಜನರಲ್ಲಿಯ ದ್ವಂದ್ವಗಳನ್ನು ನಿವಾರಿಸಿ, ಎಲ್ಲರ ಸಭಿಮತಗಳನ್ನು ಪಡೆದುಕೊಂಡು ಕಾಯಿದೆಗಳು ಪಾಸಾಗಲಿ ಮತ್ತು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗಲಿ ಎನ್ನುವ ಅವರ ಅಭಿಲಾಷೆ ಧರ್ಮ ಸಹಿಷ್ಣತೆಯನ್ನು ಎತ್ತಿ ಹಿಡಿದಿದೆ.

೫) ಕರ್ನಾಟಕದ ಏಕೀಕರಣ

ಇಂದಿಗೂ ಬೂದಿ ಮುಚ್ಚಿದ ಕೆಂಡದಂತೆ ದಹಿಸುತ್ತಿರುವ ಗಡಿ ಪ್ರದೇಶಗಳ ಸಮಸ್ಯೆಯನ್ನೂ ಸಹ ನಾವು ಅವರ ಈ ಮಾತುಗಳಿಂದ ತಿಳಿಯಬಹುದು. 'ಭಾರತಕ್ಕೆ ಸ್ವಾತಂತ್ರ್ಯ ಹೇಗೋ ಹಾಗೆ ಕರ್ನಾಟಕಕ್ಕೆ ಸ್ವಾಯತ್ತತೆ, ಯಾವ ತೆರೆಮರೆಯ ಕಾರಸ್ಥಾನವೂ ಸಫಲವಾಗಲಾರದು. ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯೂ ಇವೇ ಹೇತುವಿನಿಂದ ಹೊಂಚು ಹಾಕಿಕೊಂಡು ಕುಳಿತಿದೆ. ಉತ್ತರ ಕರ್ನಾಟಕದ ಶಿಕ್ಷಣ

ಸಂಸ್ಥೆಗಳನ್ನು ಸಾಧ್ಯವಿದ್ದಷ್ಟು ಕಬಳಿಸಿ ಉತ್ತರ ಕರ್ನಾಟಕಕ್ಕೆ ದಕ್ಷಿಣ ಮಹಾರಾಷ್ಟ್ರದ ದೀಕ್ಷೆಕೊಡಲು ಬಕಧ್ಯಾನ ಮಾಡುತ್ತಿದೆ. ಕನ್ನಡಿಗರು ಇತ್ತಕಡೆಗೂ ಎಚ್ಚರದಿಂದರಬೇಕಾಗಿದೆ. ಇಷ್ಟೇ ಅಲ್ಲ, ಕನ್ನಡದ ಉಪ್ಪುಂಡು ಇಲ್ಲಿಯೇ ನೆಲೆನಿಂತರೂ ನಾಡವರಿಂದು ಸಿಡಿದು ನಿಂತು ನಾಡಿನ ಹಿತಕ್ಕೆ ಅಡ್ಡಗಾಲು ಹೊಡೆಯುವ ಪಂಚಮದಲದವರಿಂದಲೂ ಕನ್ನಡಿಗರು ಜಾಗರೂಕರಾಗಬೇಕಾಗಿದೆ.'

ಕನ್ನಡಿಗರ ಬಲುದಿನದ ಕನಸಾದ ಕರ್ನಾಟಕದ ಏಕೀಕರಣ ಕುರಿತ ಈ ಪ್ರಬಂಧದಲ್ಲಿ ೧೯೧೫ ರಲ್ಲಿ ಸ್ಥಾಪಿತವಾಗಿ ಮುಂಬೈಯಲ್ಲಿ ನಡೆದ ಸಭೆಯಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಮನ್ನಿಸಿ ಕರ್ನಾಟಕ ಏಕೀಕರಣದ ಬಗ್ಗೆ ನೆಹರೂ ಸಮಿತಿಯವರು ಬಲವಾದ ಶಿಫಾರಸ್ಸು ಮಾಡಿದರು.

ಕರ್ನಾಟಕ ಏಕೀಕರಣವಾದರೆ ಆಗಬಹುದಾದ ಸಾಧಕಗಳನ್ನು ಕುರಿತು ಚರ್ಚಿಸಿದ್ದಾರೆ. ವ್ಯಾಪಾರ, ಉದ್ಯೋಗ, ವಿದ್ಯುತ್ ಶಕ್ತಿಯ ಉತ್ಪಾದನೆ, ನೀರಾವರಿ ಯೋಜನೆ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೊಂಡರೆ ಅದರಿಂದ ವೈದ್ಯ, ಶಿಲ್ಪ, ಕೃತಿ, ವಿಜ್ಞಾನ ಕಲೆ, ವಾಣಿಜ್ಯ, ಮತ್ತಿತ್ತರ ಕ್ಷೇತ್ರಗಳಲ್ಲಿ ಮಾರ್ಪಾಡು ಉಂಟಾಗಿ ಅಭಿವೃದ್ಧಿ ಅಗಸಕ್ಕೇರುವುದು ಎಲ್ಲೆಲ್ಲೂ ಅಲ್ಪ ಸಂಖ್ಯಾತರಾಗಿ ಕೊಟ್ಟಷ್ಟರಲ್ಲಿಯೆ ತೃಪ್ತರಾಗಬೇಕಿಲ್ಲ ಎನ್ನುವಲ್ಲಿ ಅವರ ಸ್ವಾಭಿಮಾನದ ಸೆಲೆಯ ಆಳ ತಿಳಿಯುತ್ತದೆ. ಚಿಕ್ಕ-ಪುಟ್ಟ ಸಂಸ್ಥಾನಗಳ ವಿಲೀನಿಕರಣ ಮತ್ತು ಅದಕ್ಕೆ ಅಡ್ಡಿಪಡಿಸಿದ ಕುಹಕಿಗಳ ಕುರಿತು ಜಾಗರೂಕರಾಗಿರಬೇಕು. ಮಹಿಳೆಯರೂ ಸಹ ಆಂದೋಲನಗಳಲ್ಲಿ ಭಾಗವಹಿಸಬೇಕು ನಾಡಭಕ್ತಿ ಮೆರೆಯಬೇಕು. ಕನ್ನಡ ಸಿರಿ ಮೈಗೂಡಿ ಬರಲಿ, ಕರ್ನಾಟಕ ಏಕೀಕರಣ ಕೈಗೂಡಿ ಬರಲಿ ಕನ್ನಡಿಗರ ಬಲುದಿನದ ತಪಸ್ಸು ಪೂರ್ತಿ ಫಲಿಸಲಿ – ಈ ಮಾತುಗಳಿಂದ ಅವರಿಗಿರುವ ತಾಯ್ನಾಡ ಪ್ರೇಮ ಬಿಂಬಿತವಾಗಿದೆ.

೩) ಬಸವೇಶ್ವರರ ತತ್ವದರ್ಶನ

೮೦೦ವರ್ಷಗಳ ನಂತರ ಕಲ್ಯಾಣದಲ್ಲಿ ಜರುಗಿದ ಬಸವೇಶ್ವರರ ತತ್ವದರ್ಶನ'ದ ಮಹಿಳಾಗೋಷ್ಠಿಯ ಭಾಷಣವು ಇದಾಗಿದೆ. ಕಲ್ಯಾಣ ಪಟ್ಟಣವು ಚಾಲುಕ್ಯ ಅರಸನಾದ ಸೋಮೇಶ್ವರನಿಂದ ೧೧ ನೇ ಶತಮಾನದಲ್ಲಿ ನಿರ್ಮಿತಗೊಂಡಿತು. ವಿಕ್ರಮಾದಿತ್ಯನ ಕಾಲದಲ್ಲಿ ಇದರ ಕೀರ್ತಿ ಉತ್ತುಂಗಕ್ಕೇರಿತ್ತು. ನಂತರ ಕಲಚೂರಿ ಅರಸರ ಆಧಿಪತ್ಯ ಅದಕ್ಕಿಂತಲೂ ವಿಶೇಷವಾದದ್ದು, ಬಸವಣ್ಣನವರು ಸ್ಥಾಪಿಸಿದ ಧರ್ಮದ ಪ್ರಭುತ್ವ ಚನ್ನಬಸವಣ್ಣನ ಕಲ್ಲಿನ ಶಾಸನದಿಂದ ಇದರ ವಿಸ್ತಾರ ತಿಳಿಯಬಹುದು. 'ಮಹಾಮನೆ' ನಿಜವಾಗಿಯೂ ಮಹಾನ್ ಆಚಾರದಿಂದುಳ್ಳ ಮಹಾಜನರ ಮನೆಯಾಗಿತ್ತು. ಈ ಭೂ

ಕೈಲಾಸಕ್ಕೆ ಲಿಂಗದ್ರಷ್ಟಾಕರು, ಲಿಂಗವೈದ್ಯರು, ಲಿಂಗ ಗಂಭೀರರಿಗೆ ಮಾತ್ರ ಪ್ರವೇಶ ಕಲ್ಯಾಣದ ಉಚ್ಛ್ರಾಯ ಸ್ಥಿತಿ ಮತ್ತು ಕೊನೆಗಾಲವನ್ನು ತಿಳಿದಿರುವ ನಾವಿಂದು ಮಹಾನುಭಾವಿ ಬಸವಣ್ಣನವರ ಅಷ್ಟ ಶತಮಾನೋತ್ಸವನ್ನು ಆಚರಿಸುತ್ತಿದ್ದೇವೆ. ಈ ಶುಭ ಪ್ರಸಂಗದಲ್ಲಿ ಕಲ್ಯಾಣವು ಮತ್ತೆ ಚೈತನ್ಯ ತುಂಬಿ ರಾರಾಜಿಸುತ್ತಿರುವಂತೆ ಭಾಸವಾಗುತ್ತಿದ್ದೆಯೆಂದು ಲೇಖಕಿಯು ಭಾವಾವೇಶಗೊಳ್ಳುತ್ತಾರೆ.

ಭಾರತದ ಬೇರೆ ಯಾವ ಧರ್ಮಗಳು ನೀಡದಂತಹ ಸ್ತ್ರೀ ಧಾರ್ಮಿಕ ಸ್ವಾತಂತ್ರ್ಯವನ್ನು ವೀರಶ್ವೈವ ಧರ್ಮವು ಮಹಿಳೆಯರಿಗೆ ನೀಡಿದೆ. ಶಿವಶರಣರಿಗೆ ಹೆಗಲು ಕೊಟ್ಟು ಅವಿರತ ದುಡಿದರು. ಆಪತ್ತು ಬಂದಾಗ ದೃತಿಗೆಡದೆ ಧರ್ಮರಕ್ಷಣೆ ಮಾಡಿದರು. ವಚನಗಳಿಂದ ಧರ್ಮ, ಜ್ಞಾನಬೋಧನೆಗಳನ್ನು ನಡೆಸಿದರು. ಶರಣೆ ಅಕ್ಕ ನಾಗಮ್ಮನ ಪತಿ 'ಶಿವಸ್ವಾಮಿ' ಯ ಉಲ್ಲೇಖ ಕೇವಲ ಸಿಂಗಿರಾಜನ ಕೃತಿಯಲ್ಲಿ ಎನ್ನುವ ಖಚಿತತೆಯಿಂದ ಸರಸ್ವತಿಯವರ ಜ್ಞಾನದ ಆಳವು ನಮಗೆ ದೊರೆಯುವುದು. ವೀರಶೈವ ಧರ್ಮದ ರಕ್ಷಣೆಯಲ್ಲಿ ಅವಳು ಮಹತ್ವದ ಪಾತ್ರ ನಿರ್ವಹಿಸಿರುವಳು.

ವೀರಶೈವ ಮಹಿಳೆಯರು ನಾಡಿನ ಪ್ರಗತಿ ಪಥದಲ್ಲಿ ಮುನ್ನಡೆಯಬೇಕು. ಸಾಮಾಜಿಕ, ಆರ್ಥಿಕ, ರಾಜಕಾರಣ,ವಿಜ್ಞಾನ ಮತ್ತು ಕಲೆ ಇತ್ಯಾದಿ ರಂಗಗಳಲ್ಲಿಯೂ ಮುಂದುವರೆಯುತ್ತಿರುವರು. ಅಕ್ಕನ ಬಳಗಗಳನ್ನು ಸಂಘಟಿಸಿ ಧರ್ಮಜಾಗೃತಿ ಮಾಡಬೇಕು. ಗೊಂಚಲು ಒತ್ತಿ ಹಿಡಿದರೆ ಭಕ್ತಿ ಎಂಬ ರಸವಯ್ಯ' ಎಂಬ ಮಡಿವಾಳ ಮಾಚಿದೇವರ ಮಾತಿನಂತೆ ಸರಸ್ವತಿ ದೇವಿಯವರಿಗೆ ವೀರಶೈವ ಧರ್ಮದ ಅಭ್ಯುದಯಕ್ಕಾಗಿ ಶ್ರಮಿಸುವ ತುಡಿತದ ಪರಿಯನ್ನು ಕಾಣುತ್ತೇವೆ.

೭) ನಾನು ಓದುವುದೇನು?

ಓದುವ ಹವ್ಯಾಸವು ಚಿಕ್ಕಂದಿನಿಂದಲೂ ಸರಸ್ವತಿ ದೇವಿಯವರಿಗೆ ಪ್ರಿಯವಾದ ಸಂಗತಿ. ಪ್ರಾಥಮಿಕ ಶಿಕ್ಷಣದ ನಂತರ ತಂದೆಯವರ ಬೆಂಬಲದಿಂದ ಮನೆಯಲ್ಲಿಯೇ ಸಾಹಿತ್ಯಾಭ್ಯಾಸವನ್ನು ಆರಂಭಿಸಿದರು. ಅಷ್ಟೆ ಅಲ್ಲದೇ ಅವರು ನಾಲ್ಕು ಭಾಷೆಗಳಲ್ಲಿಯೂ ಪಾಂಡಿತ್ಯವನ್ನು ಹೊಂದಿದ್ದರು. ಕಥೆ, ಕಾದಂಬರಿ, ನಾಟಕಗಳಿಂದ ಆರಂಭವಾಗಿ ನಿರ್ದಿಷ್ಟ ಗುರಿಯ ಜಾಡು ಹಿಡಿದು ಕಾಯಿದೆ ಗ್ರಂಥಗಳು, ನಾಡು-ನುಡಿಯ ಇತಿಹಾಸ ಗ್ರಂಥಗಳು, ಮಹಿಳೆಯರ ಸಮಸ್ಯೆ ಮತ್ತು ಪರಿಹಾರಗಳ ಕುರಿತ ಗ್ರಂಥಗಳನ್ನೆ ಅಲ್ಲದೇ ವೀರಶೈವ ಧರ್ಮದ ಗ್ರಂಥಗಳನ್ನು ಅಭ್ಯಸಿಸಿದರು. ಭಾರವಾರ ಹೃದಯಕ್ಕೆ ಧಾರ್ಮಿಕ ತತ್ವಗಳಿಂದ ಹೃದಯ ಹಗುರವಾಯಿತು.

ದಿನಿನಿತ್ಯ ಓದುವುದೇನು? ಈ ಪ್ರಶ್ನೆ ಇಂದಿಗೂ ನಿತ್ಯ ನೂತನವಾಗಿದೆ. ಓದುವುದೇನು? ಏಕೆ? ಯಾವಾಗ? ಎಂಬಿತ್ಯಾದಿ ಪ್ರಶ್ನೆಗಳಿಗೆ ಸರಳವಾದ ಸಲಹೆ ನೀಡಿರುವರು. ಸತತ ಅಭ್ಯಾಸ ನಿಗಧಿತ ಸಮಯ ಅವಶ್ಯ ಮನೆಯ ಕೆಲಸದಲ್ಲಿ ಇಲ್ಲದ ಬಿಡುವು ಮಾಡಿಕೊಂಡು ಓದಿ ವಿಷಯ ಸಂಗ್ರಹಣೆ ಮಾಡಿಕೊಳ್ಳಬೇಕೆನ್ನುವ ಅವರ ಈ ಮಾತು ತುಂಬು ಕೆಲಸದ ತುಂಬು ಮನೆಯ ಗೃಹಿಣಿಗೂ ಒಂದು ಕಿವಿಮಾತಾಗಿದೆ.

ಬೇಸರ ಕಳೆಯಲು ಸಹ ಒಳ್ಳೆಯ ಪುಸ್ತಕಗಳು ಪತ್ರಿಕೆಗಳು ನಿಯತ ಕಾಲಿಕೆಗಳು ನಮ್ಮ ಓದಿಗೆ ಸಾಮಗ್ರಿಯಾಗುವವು ಒಳ್ಳೆಯ ವಿಶ್ರಾಂತಿಯನ್ನು ಓದಿನಿಂದ ಪಡೆಯಬಹುದು. ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಅವರಿಗೆ ಈ ಓದೆ ಜೀವನ ಭಾರವನ್ನು ಹಗುರಗೊಳಿಸಿದೆ. "ಓದು ಒಕ್ಕಾಲು, ಬುದ್ಧಿ ಮುಕ್ಕಾಲು' ದಂತೆಯೇ ಓದು ಮುಕ್ಕಾಲು ಬುದ್ಧಿ ಒಕ್ಕಾಲು ಆದರೂ ಓದಲು ಸಾಮಗ್ರಿ ವಿಫುಲವಾಗಿದೆ. ಓದಿದ್ದನ್ನು ಅರಗಿಸಿಕೊಂಡು ಹಿತವೆನಿಸಿದನ್ನು ಬರೆದು ಸಹೃದಯರಿಗೆ ನೀಡಬೇಕೆಂದು ಆಶಯ ಸರಸ್ವತಿ ದೇವಿಯವರದು.

ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ನಮ್ಮ ಲೇಖಕಿಯರು ಸಾಹಿತ್ಯ ಲೋಕದಲ್ಲಿ ಕಾಣಿಸಲಾರಂಭಿಸಿದ್ದರು. ಆದರೆ ಸರಸ್ವತಿ ದೇವಿಯವರ ಕಾಲದಲ್ಲಿಯೂ ಸ್ತ್ರೀ ಸಂವೇದನೆ ಮತ್ತು ಸ್ತ್ರೀವಾದಿಗಳ ಶಾಸ್ತ್ರೀಯವಾದ ಅರಿವು ಅವರಿಗೆ ಇರಲಿಲ್ಲ. ಅಲ್ಲದೇ ತಾವು ದೊಡ್ಡ ಸಾಹಿತ್ಯ (ಮಹಿಳಾ ಸಾಹಿತ್ಯ)ದ ಚಳುವಳಿಯ ಭಾಗವಾಗಿ ಬರೆಯುತ್ತಿದ್ದೇವೆ ಎಂಬ ಕಲ್ಪನೆಯೂ ಮೂಡಿರಲಿಲ್ಲ. ಸೃಜನಶೀಲತೆಯ ಒತ್ತಡವೋ ಉತ್ಸುಕತೆಯಿಂದಲೋ, ವೈಧವ್ಯದಿಂದ ಬಾಳು ನೂಕಲಸಾಧ್ಯವಾಗಿ ಬರೆದವರೇ ಅಧಿಕವಾಗಿದ್ದಾರೆ. ಅವರು ಒಂದು ಕಡೆಯಿಂದ ಧಾರ್ಮಿಕ ಮೋಹದಿಂದ ದೇವರ ನಾಮಗಳು ಸಂಪ್ರದಾಯಕ ಹಾಡುಗಳನ್ನು ಬರೆದವರಾದರೆ, ಇನ್ನೊಂದು ಕಡೆ ಆಧುನಿಕತೆ, ಸೃಜನಶೀಲತೆ ಅರಳುತ್ತಿರುವ ಮಹಿಳೆಯರ ಬದುಕನ್ನು ತಮ್ಮ ಕತೆಗಳಲ್ಲಿ ಸಾಹಿತ್ಯದಲ್ಲಿ ಪ್ರತಿನಿಧಿಸಿದ ಲೇಖಕಿಯರಿದ್ದಾರೆ. ಆದರೆ ಸರಸ್ವತಿ ದೇವಿಯವರ ಆಶಯ ದೊಡ್ಡದಿದೆ. ಅದನ್ನು ಅವರು ತಂದೆಯವರ ಆರ್ಶೀವಾದಿಂದ ಪಡೆದಿದ್ದಾರೆ. ಆ ಉದ್ದೇಶವನ್ನು ಪೂರ್ಣಗೊಳಿಸಲು ನಿರಂತರ ಪ್ರಯತ್ನವನ್ನು ಮಾಡಿದ್ದಾರೆ.

ಸರಸ್ವತಿಯವರು ಒಬ್ಬ ಉತ್ತಮ ಪ್ರಬಂಧಕಾರರೂ ಹೌದು. ಇವರ ಬರಹಗಳಲ್ಲಿ ಸೂಕ್ಷ್ಮತೆ, ಸ್ಪಷ್ಟತೆ, ಸ್ವಂತಿಕೆ ಎದ್ದು ಕಾಣುತ್ತದೆ. 1960 ರಲ್ಲಿ ಪ್ರಕಟವಾದ ಇವರ 'ಮಹಿಳಾ ಸಮಸ್ಯೆಗಳೂ ಮತ್ತು ಪರಿಹಾರ' ಪ್ರಬಂಧಕ್ಕೆ ಮೈಸೂರು ರಾಜ್ಯ ಪಾರಿತೋಷಕ ಪ್ರಶಸ್ತಿ ದೊರೆತ್ತಿದೆ. ಇವರು ಬರೆದ ಬರವಣಿಗೆಯಲ್ಲಿ ಸ್ತ್ರೀ ಸಂವೇದನೆಯ

ಗುಣವಿದೆ. ಮಹಿಳಾಪರ ಕಾಳಜಿ ಇದೆ. 'ಊಟದ ನಂತರ ತಟ್ಟೆ-ಲೋಟವನ್ನು ಮಗ ಎತ್ತಿಟ್ಟರೆ ಅದು ತಪ್ಪು, ಮಗಳು ಇಟ್ಟರೆ ಅದು ಅಪೇಕ್ಷಿತವಾದದ್ದು, ಎಂಬ ಇಂತಹ ಚಿಕ್ಕ ವಿಷಯದಲ್ಲೂ ಅವರು ಮಹಿಳೆಯ ಸ್ಥಿತಿ-ಗತಿಯನ್ನು ಗುರುತಿಸಿದ್ದಾರೆ. ವಿಧವೆಯರಿಗೂ ಮದುವೆಯ ಸೌಭಾಗ್ಯ ನೀಡಬೇಕು, ವಿಧವೆಯರನ್ನು ವಿಧುರರು, ಪರಿತ್ಯಜಿಸಿದವರು ಪರಿತ್ಯಕ್ತೆಯನ್ನು ಕಡ್ಡಾಯವಾಗಿ ಮದುವೆಯಾಗುವಂತಹ ಕಾನೂನು ಬರಬೇಕೆಂದು ಹೇಳಿದ್ದಾರೆ.

ನಾಡು- ನುಡಿಯ ರಕ್ಷಣೆಯ ಗುರುತರ ಜವಾಬ್ದಾರಿಯೂ ಪ್ರತಿಯೊಬ್ಬರ ಆದ್ಯ ಕರ್ತವ್ಯವೆಂದು ಹೇಳಿದ್ದಾರೆ. ಗಡಿನಾಡಿನ ರಕ್ಷಣೆ ಮಾಡಬೇಕು. ಗಂಡು ಮಕ್ಕಳ ಶ್ರೇಯಸ್ಸಿನ ಹಿಂದೆ ಹೆಣ್ಣು ಮಕ್ಕಳ ತ್ಯಾಗವಿದೆಯೆನ್ನುವಲ್ಲಿ ಅವರು ಕಸ್ತೂರಿಬಾರನ್ನು ನೆನೆಯುವವರು. ಪ್ರತಿಯೊಬ್ಬ ಗೃಹಣಿಯೂ ಚೊಕ್ಕಟವಾಗಿ ಸಂಸಾರ ಸಾಗಿಸಿಕೊಂಡು ಹೋಗಬೇಕು. ಮಕ್ಕಳನ್ನು ಉತ್ತಮರಾಗಿ ಬೆಳಸಬೇಕು. ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಸಹಕರಿಸಬೇಕು. ಗಂಡು ಮಕ್ಕಳಂತೆ ಹೆಣ್ಣು ಮಕ್ಕಳೂ ಸಹ ಶೈಕ್ಷಣಿಕ ರಂಗಗಳಲ್ಲಿ ಉತ್ತಮ ಸಾಧನೆ ತೋರಬೇಕು ಎಂಬುದು ಅವರ ವಿಚಾರವಾಗಿತ್ತು.

ಹೊಸದಾಗಿ ಬರುವ ಕಾಯ್ದೆ ಕಾನೂನುಗಳೂ ಸಹ ಸಮಾಜದ ಪ್ರತಿಯೊಂದು ವರ್ಗದ ಹೆಣ್ಣುಮಕ್ಕಳಿಗೂ ತಲುಪಬೇಕು. ಶರಣರ ದಾರಿಯಲ್ಲಿ ಬದಕಲು ಪ್ರಯತ್ನಿಸಬೇಕು ವೀರಶೈವ ಧರ್ಮದ ರಕ್ಷಣೆ ಹಾಗೂ ಬೆಳವಣಿಗೆಯಾಗಬೇಕು. ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಸಮಯವನ್ನು ನಿಗದಿಪಡಿಸಿರಬೇಕು. ಓದಿದ್ದರಲ್ಲಿ ಉತ್ತಮವೆನಿಸಿದ್ದನ್ನು ಬರೆದು ಇತರರಿಗೆ ತಿಳಿಸಬೇಕು.- ಎಂದೆಲ್ಲಾ ತಮ್ಮ ವೈಚಾರಿಕ ಕತೆಯನ್ನು ಪ್ರಬಂಧಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಅಧ್ಯಾಯ–೭

ಸಮಾರೋಪ

ಭಾರತದಲ್ಲಿ ರಾಷ್ಟ್ರೀಯ ಚಳುವಳಿಗಳು ತೀವ್ರಗೊಂಡು ಬದುಕಿನ ಮೇಲೆ ಪರಿಣಾಮ ಬೀರಿದ ಸಂದರ್ಭದಲ್ಲಿ ಸರಸ್ವತಿ ದೇವಿಗೌಡರರು ಬರವಣಿಗೆ ಪ್ರಾರಂಭಿಸಿದ್ದರು. ದೇಸೀ ಹಾಗೂ ವಿದೇಶಿ ಸಂಸ್ಕೃತಿ ಮುಖಾಮುಖಿಯಾದವು. ಮಹರ್ಷಿ, ಧೊಂಡೋ ಕೇಶವ ಕರ್ವೆ, ರಾಜಾರಾಮ ಮೋಹನರಾಯ, ಜ್ಯೋತಿಬಾ ಫುಳೆ, ಈಶ್ವರ ಚಂದ್ರ ವಿದ್ಯಾಸಾಗರ ಇತ್ಯಾದಿ ಸಮಾಜ ಸುಧಾರಕರ ನೆರವಿನಿಂದ ಸತಿ ನಿರ್ಮೂಲನ, ವಿಧವಾ ವಿವಾಹ, ಮಹಿಳಾ ಶಿಕ್ಷಣಕ್ಕೆ ಒತ್ತು ಕೊಡಲಾಗಿದೆ.

ಆ ದಿನಗಳಲ್ಲಿ ಆಧುನಿಕ ಸಾಹಿತ್ಯದ ಮೊದಲ ಘಟ್ಟದ ಲೇಖಕರಾದ ಗುಲ್ವಾಡಿ ವೆಂಕಟರಾಯರು, ಬೋಳಾರ ಬಾಬುರಾವ, ಲಕ್ಷ್ಮಣ ಭೀಮರಾಯ ಗದಕಗರ–ಇವರು ಹೆಣ್ಣಿನ ಸಾಮರ್ಥ್ಯ ಸಾಧ್ಯತೆಗಳನ್ನು ಗೌರವಿಸಿದ್ದರು. ಸಾಂಸ್ಕೃತಿಕ ಇತಿಹಾಸದಲ್ಲಿನ ಮೌಲ್ಯಗಳೇ ಹೆಣ್ಣಿನ ಮೌಲ್ಯಗಳೆಂದೇ ಸಾರಿದ್ದರು. ತಿರುಮಲಾಂಬ, ಕಲ್ಯಾಣಮ್ಮ, ಗೌರಮ್ಮ, ಶ್ಯಾಮಲಾದೇವಿ ಮೊದಲಾದ ಲೇಖಕಿಯರು ವೈಯಕ್ತಿಕ ಬದುಕಿನಲ್ಲಿ ನೊಂದವರು ಸ್ತ್ರೀ ಪರ ಕಾಳಜಿಗಳನ್ನು ಕೇಂದ್ರವಿಟ್ಟುಕೊಂಡು ಸಮಾಜದಲ್ಲಿ ಜಾಗೃತಿ ಮೂಡಿಸಲು ಯತ್ನಿಸಿದ್ದರು.

ಸರಸ್ವತಿ ದೇವಿಯವರ ಕತೆಗಳಲ್ಲಿ 'ಅಲ್ಪವಿರಾಮದ' ಮೊದಲ ಕಥೆಯಲ್ಲಿಯೇ ಅವರು ಮಧ್ಯಮ ಹಾಗೂ ಕೆಳವರ್ಗದ ಬದುಕಿನ ತೌಲನಿಕ ನೋಟವನ್ನಿತ್ತಿದ್ದಾರೆ. ಆರ್ಥಿಕ ಅಸಮಾನತೆಯೇ ಅನೇಕ ಸಮಸ್ಯೆಗಳಿಗೆ ಕಾರಣ ಎಂದಿದ್ದಾರೆ. ಪರಿತ್ಯಕ್ತಳು ಸ್ವತಂತ್ರ ಬದುಕನ್ನಾರಿಸಿಕೊಳ್ಳುವುದು, 'ಸತಿ', 'ಅವಳು ವಿಧವೆ' ಮೊದಲಾದ ಕಥೆಗಳಲ್ಲಿ ಭಾರತೀಯ ಸಮಾಜದಲ್ಲಿ ಪ್ರಚಲಿತವಿರುವ ಸತಿ, ವಿಧವೆಯರ, ಪರಿತ್ಯಕ್ತರ ಜೀವನವನ್ನು ಹಿಡಿದಿಟ್ಟಿದ್ದಾರೆ.

'ಹೊಸ ಹಿಂದೂ ಕಾಯಿದೆ' ಯಂತಹ ವಿಚಾರಶೀಲ ಲೇಖನಗಳಿವೆ ಅಂದು ಹೊರಡಿಸಲ್ಪಟ್ಟ ಹೊಸ ಕಾಯಿದೆ ಕಾನೂನುಗಳ ಎಲ್ಲ ವರ್ಗದ ಮಹಿಳೆಯರಿಗೆ ತಲುಪಲಿ ಅನ್ನುವ ಕಾಳಜಿಯು ಇವರ ಬರವಣಿಗೆಯ ಮೂಲಧ್ಯೇಯ. ಮಹಿಳಾ ಸಬಲೀಕರಣ, ಶರಣರ ಬದುಕನ್ನು ಪರಿಪಾಲಿಸುವುದು, ನಾಡು–ಕನ್ನಡ ನುಡಿಗೆ ಹಂಬಲಿಸುವುದು, ಮಕ್ಕಳನ್ನು ಸಂರಕ್ಷಿಸಿ ಸದ್ಗುಣಿಯನ್ನಾಗಿಸುವುದು ಇತ್ಯಾದಿ ಸತ್ಕಾರ್ಯಗಳ ಸೂತ್ರವನ್ನೇ ಕಾಣಿಕೆಯಾಗಿ ಇವರು ನೀಡಿರುವರು ಅನ್ಯಾಯದ ವಿರುದ್ಧ ಆತ್ಮವಿಶ್ವಾಸದಿಂದ ಎದುರಿಸಬೇಕು ಎಂಬ ಇವರ ದೃಷ್ಟಿಕೋನ ಎಲ್ಲ ಕಾಲಕ್ಕೂ ಪ್ರಸ್ತುತ.

ಶಿಷ್ಟ ಭಾಷೆಯಿಂದ ರಚಿತವಾದ ಸರಸ್ವತಿಯವರ ಸಾಹಿತ್ಯವು ಶರಣ ಸಾಹಿತ್ಯದಿಂದ ಪ್ರೇರಿತವಾದುದು. ಮಹಿಳೆಯರ ಉದ್ಧಾರ ಹಕ್ಕು -ಕರ್ತವ್ಯಗಳನ್ನು ತಿಳಿಸುವುದು, ಅವರ ಸ್ವಾವಲಂಬನೆಗೆ ಹವಣಿಸುವ ಹಂಬಲವುಳ್ಳದ್ದಾಗಿದೆ. ಶಿಷ್ಟ ಭಾಷೆಯ ಶಿಷ್ಟ ಸಂಪ್ರದಾಯವು ಸರಸ್ವತಿಯವರದಾಗಿದ್ದು ಅವರ ನೇರ, ಖಚಿತ, ಪುಟ್ಟ ವಾಕ್ಯಗಳ ತುಂಬು ಅರ್ಥದ ಮಾತುಗಳು ಓದುಗರ ಮನವನ್ನು ಕಲಕಿ ತಾರ್ಕಿಕತೆಗೆ ಎಡೆ ಮಾಡುತ್ತವೆ.

ಉತ್ತರ ಕರ್ನಾಟಕದ ಮೊದಲ ತಲೆಮಾರಿನ ಲೇಖಕಿಯಾದ ಸರಸ್ವತಿ ದೇವಿಯವರ ಕಥೆ, ಕವಿತೆ, ಪ್ರಬಂಧಗಳು ಅಂದಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದರೂ ಅವರ ಇಡಿ ಸಾಹಿತ್ಯದ ಸಂಶೋಧನ ಅಧ್ಯಯನ ನಡೆದಿಲ್ಲ. ಈ ದಿಸೆಯಲ್ಲಿ ಇದು ಪ್ರಥಮ ಪ್ರಯತ್ನ ಎನ್ನಬಹುದು.

ಈ ಅಧ್ಯಯನ ಪ್ರಬಂಧದಲ್ಲಿ 'ಮಗು ಪರಿಸರದ ಕೂಸು' ಎಂಬ ಉಕ್ತಿಯ ಹಿನ್ನಲೆಯಲ್ಲಿ ಸಾಹಿತ್ಯ, ಕಾಯ್ದೆ, ಕಾನೂನು ಪ್ರಜ್ಞೆಗಳು ಸರಸ್ವತಿಯವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಹೇಗೆ ಸಹಾಯಕಾರಿಯಾದವು? ತಂದೆ-ತಾಯಿ, ಗುರು- ಹಿರಿಯರ, ಜೊತೆಗೆ ಗೆಳತಿಯರ ಒಡನಾಟದೊಂದಿಗೆ ಸಾಹಿತ್ಯ ಕೃಷಿಯೂ ಬೆಳೆದು ಬಂದುದನ್ನು ನಾನು ಈ ಪ್ರಬಂಧದಲ್ಲಿ ಗುರುತಿಸಿಲು ಪ್ರಯತ್ನಿಸಿದ್ದೇನೆ.

ಸರಸ್ವತಿ ದೇವಿಯವರ ಸ್ತ್ರೀವಾದದ ಅರಿವಿಲ್ಲದೆ ರಚಿತವಾದ ಕತೆಗಳಲ್ಲಿ ಸ್ತ್ರೀ ಕೇಂದ್ರಿತ ದೃಷ್ಟಿಕೋನ, ಮಹಿಳಾಪರ ಕಾಳಜಿಯೂ ಮೂಡಿದೆ. ಉನ್ನತ ಅಧಿಕಾರಿ ತಂದೆಯವರ ಸಹಾಯದಿಂದ ಕಾಯ್ದೆ ಕಾನೂನುಗಳನ್ನು ಅರಗಿಸಕೊಂಡ ಅವರು ಪ್ರತಿಯೊಂದು ವರ್ಗದ ಪ್ರತಿಯೊಬ್ಬ ಮಹಿಳೆಗೆ ತಲುಪುವಂತಹ ಆಶಯವನ್ನು ಅವರ ಕಥೆಗಳಲ್ಲಿ ಕಾಣಲಾಗಿದೆ. ಲೇಖಕಿಯು ಕಾಯ್ದೆ ಕಾನೂನುಗಳು ಬೇಡವೆಂತಲ್ಲ. ಆದರೆ ಕಾಯ್ದೆ ಕಾನೂನುಗಳಿಗಿಂತ 'ಹೃದಯ ಪರಿವರ್ತನೆ' ಅತ್ಯಂತ ಮುಖ್ಯ ಎಂದು ತಮ್ಮ ಕಥೆಗಳಲ್ಲಿ ತಿಳಿಸಿದ್ದಾರೆ. ಉದಾಹರಣೆಗಾಗಿ 'ಸೋತು ಗೆದ್ದವಳು', ' ವಾಗ್ದತ ವಧು', 'ಹಾಲು ಉಕ್ಕಿತು', 'ಅವಳು ವಿಧವೆ', 'ಸೌಭಾಗ್ಯವತಿ' ಇತ್ಯಾದಿ ಕಥೆಗಳಲ್ಲಿ ಕಾಣುತ್ತೇವೆ.

ಅವರ ಕವಿತೆಗಳಲ್ಲಿ ಆತ್ಮಕಥನವೊಂದು ಅವರ ಜೀವನದ ಬದಕು ಬರಹ ತಿಳಿಸಿದರೆ, ಉಳಿದ ಕಥೆಗಳಲ್ಲಿ ಕೆಲವು ಮಹನೀಯರ ಕಾರ್ಯಕ್ಷಮತೆಯನ್ನು ನೆನೆದು ಉಪಕಾರ ಸ್ಮರಿಸಿದ್ದಾರೆ. ಕಸ್ತೂರಿ ಬಾ, ಜಯದೇವಿ ತಾಯಿ ಲಿಗಾಡೆಯವರನ್ನು ಸ್ಮರಿಸಿವರು. ಇಂದಿಗೂ ಜ್ವಲಂತವಾಗಿರುವ ಗಡಿನಾಡು ಸಮಸ್ಯೆಯನ್ನು ಕುರಿತು.
ಅವರು
↑ಹೇಳಿದ್ದಾರೆ.

ಅವರು ಹೇಳಿದ ರಂಗ ಚಿಂತನೆಗಳು ಇಂದಿಗೂ ಅರ್ಥಪೂರ್ಣವಾಗಿವೆ. ಅವರ ನಾಟಕಗಳಲ್ಲಿಯೂ ಸ್ತ್ರೀ ಸಂವೇದನೆಯಿದೆ. ಸಾಂಪ್ರದಾಯಕ ಚೌಕಟ್ಟಿನಲಿದ್ದೂ, ಪಾತ್ರಗಳು ಕ್ರಾಂತಿಕಾರಿ ಆಲೋಚನೆ ಮಾಡುತ್ತವೆ. ಇವರು ಶಿವಶರಣರ ಬದುಕನ್ನು ಕುರಿತು ರಚಿಸಿದ ನಾಟಕಗಳನ್ನು, ಸಾಮಾಜಿಕ ನಾಟಕಗಳನ್ನೂ ಸಹ ಅಭ್ಯಸಿಸಲಾಗಿದೆ.

ಪ್ರಬಂಧ ಮತ್ತು ಇತರ ಸಾಹಿತ್ಯಿಕ ಮಾದರಿಗಳಲ್ಲಿ ಪ್ರಬಂಧಗಳಲ್ಲಿ ವೈಚಾರಿಕತೆಯನ್ನು ಗುರುತಿಸಲಾಗಿದೆ. ಮನೆಯಲ್ಲಿದ್ದು ರಾಷ್ಟ್ರ ಸೇವೆ ಸಲ್ಲಿಸುವ, ಗಡಿನಾಡನ್ನು ಸಂರಕ್ಷಿಸುವ, ಹೊಸ ಹಿಂದೂ ಕಾಯಿದೆ, ಮಹಿಳಾ ಶಿಕ್ಷಣವನ್ನು ಮತ್ತು ಓದುವ ಹವ್ಯಾಸವನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಪರಾಮರ್ಶನ ಗ್ರಂಥಗಳು

೧.. 'ಸಾರಸರಸ್ವತಿ' -ಸಂಪಾದಕರು ವಿಜಯಾ ದಬ್ಬೆ ೧೯೯೫
ಮಹಿಳಾ ಸಾಹಿತ್ಯಕ ಪ್ರಕಾಶನ ಹುಬ್ಬಳ್ಳಿ

೨. 'ಅಲ್ಪವಿರಾಮ'-ಸರಸ್ವತಿದೇವಿ ಗೌಡರ ೧೯೫೮
ಸಹಜೀವನ ಪ್ರಕಾಶನ ಕೋಟೆ ಧಾರವಾಡ.

೩. 'ಮೋಳಗೆಯ ಮಾರಯ್ಯ' -ಸರಸ್ವತಿದೇವಿ ಗೌಡರ
ಕರ್ನಾಟಕ ಸಾಹಿತ್ಯ ಸಂಘ.೮. ಧಾರವಾಡ ೧೯೬೬.

೪. 'ಸ್ತ್ರೀಮತವನ್ನುತ್ತರಿಸಲಾಗದೇ?'
ಸಾಹಿತ್ಯ-ಸಂಸ್ಕೃತಿ ಕುರಿತ ಲೇಖನಗಳು.
-ಎಂ.ಎಸ್. ಆಶಾದೇವಿ

೫. 'ಪ್ರಶಾಂತ'
ಶ್ರೀಮತಿ ಶಾಂತಾದೇವಿ ಮಾಳವಾಡ ಅಭಿನಂದನ ಗ್ರಂಥ (೧೯೮೨)
ಸಂಪಾದಕಿಯರು - ಶ್ರೀಮತಿ ಶಾಂತಾದೇವಿ ಕಣವಿ,
ಡಾ॥ ಚೆನ್ನಕ್ಕ ಎಲಿಗಾರ, ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ.
ಪ್ರಕಾಶಕರು- ವಾಗ್ದೇವಿ ಮಸ್ತಕಗಳು -67-ಬಿ ದೇವರಾಜ ರಸ್ತೆ, ಮೈಸೂರು.

೬. 'ಶಾಂತಾಕಿರಣ'
ಪ್ರೋ. ಎಚ್.ಎಮ್.ಬೀಳಗಿ
ಕನ್ನಡ ಸಾಹಿತ್ಯ ಪರಿಷತ್ತು -೧೯೯೪

೭. 'ಶ್ರೀಮತಿ ಶಾಂತಾದೇವಿ ಮಾಳವಾಡ'
ಕ.ವೆಂ.ರಾಜಗೋಪಾಲ
ಕನ್ನಡ ಸಾಹಿತ್ಯ ಪರಿಷತ್ತು -೨೦೦೦

೮. 'ಜಯದೇವಿ ತಾಯಿ ಲಿಗಾಡೆ'
ಡಾ॥ ಚೆನ್ನಾಂಬಿಕಾ ಪಾವಟೆ
ಕನ್ನಡ ಸಾಹಿತ್ಯ ಪರಿಷತ್ತು-
ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ -ಬೆಂಗಳೂರು-೧೯೯೨

೯. 'ಡಾ॥ ಜಯದೇವಿ ತಾಯಿ ಲಿಗಾಡೆ'
ಡಾ॥ ಶ್ರೀಮತಿ ರತ್ನಶೀಲಾ.ಎಸ್. ಗುರಡಿ.

೧೦. 'ಜಯದೇವಿ ತಾಯಿ ಲಿಗಾಡೆ'
ಬದುಕು-ಬರಹ-ಸಾಧನೆಗಳ ಸಮಗ್ರ ಅಧ್ಯಯನ
ಡಾ॥ ಸರೋಜಿನಿ ಚವಲಾರ
ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು- ೧೯೯೨

ಕರ್ನಾಟಕ ಲೇಖಕಿಯರ ಸಂಘ (ರಿ) ಬೆಂಗಳೂರು.

೧೨. 'ಕಥನ ಕಲೆಯ ನೆಲೆಗಳು'
ಸಂಪಾದಕರು –ಡಾ॥ ಕರೀಗೌಡ ಬೀಚನಹಳ್ಳಿ
ಡಾ॥ ರಾಜಶೇಖರ ನೀರಮಾನ್ವಿ
ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

೧೩. 'ದಶವಾರ್ಷಿಕ ಸಾಹಿತ್ಯ ಸಮಿಕ್ಷೆ'
ಬೆಂಗಳೂರು ವಿಶ್ವವಿದ್ಯಾಲಯ

೧೪. 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ'
ಸಂಪಾದಕರು –ಡಾ॥ ಎಚ್.ಎಸ್. ಶ್ರೀಮತಿ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

೧೫. '**PROMINENT VEERASHAIYA WOMEN**'
BY –
VIMALA CHANNABASAPPA

೧೬ '**REFERENCE VOL- 1**
ASIA'S FIRST WHO'S WHO
OF MEN AND WOMEN
OF ACHIEVEMENTS AND
DISTINCTIONS'-TRADESMAN

೧೭. 'ಕಾಮಧೇನು'
ಸಂಪಾದಕರು –ಸೂರ್ಯನಾರಾಯಣ ಚಡಗ
ನಾರಾಯಣ ಬಲ್ಲಾಳ
ರಮಾತನಯ

೧೮. 'ಹಚ್ಚೇವು ಕನ್ನಡದ ದೀಪ'– ಶಾಂತಾದೇವಿ ಮಾಳವಾಡ

೧೯. 'ಶಾಮಲಾ ಸಂಚಯ'– ಸಂಪಾದಕರು ವಿಜಯಾ ದಬ್ಬೆ
ಕರ್ನಾಟಕ ಲೇಖಕಿಯರ ಸಂಘ, ಚಾಮರಾಜಪೇಟೆ ಬೆಂಗಳೂರು.

೨೦. 'ವಿಚಯ'–ಡಾ॥ ಬಿ.ಎನ್. ಸುಮಿತ್ರಾಬಾಯಿ

೨೧. 'ಲೇಖ-ಲೋಕ ೨'
(ಮಹಿಳಾ ಸಾಹಿತ್ಯ : ಒಂದು ಆತ್ಮಕಥಾನಕ)
ಸಂ. ನಾಗಮಣಿ ಎಸ್.ರಾವ
ಕರ್ನಾಟಕ ಲೇಖಕಿಯರ ಸಂಘ (ರಿ) ಚಾಮರಾಜಪೇಟೆ ಬೆಂಗಳೂರು.

೨೨. 'ಲೇಖ-ಲೋಕ ೩'
(ಮಹಿಳಾ ಸಾಹಿತ್ಯ : ಒಂದು ಆತ್ಮಕಥಾನಕ)
ಸಂಪಾದಕರು-ಕೆ. ಉಷಾ.ಪಿ.ರೈ
ಡಾ॥ ಕೆ.ಆರ್.ಸಂಧ್ಯಾರೆಡ್ಡಿ
ಕರ್ನಾಟಕ ಲೇಖಕಿಯರ ಸಂಘ (ರಿ) ಚಾಮರಾಜಪೇಟೆ ಬೆಂಗಳೂರು.

೨೩. 'ಲೇಖ-ಲೋಕ ೪'
(ಮಹಿಳಾ ಸಾಹಿತ್ಯ : ಒಂದು ಆತ್ಮಕಥಾನಕ)
ಸಂಪಾದಕರು-ಕೆ. ಉಷಾ.ಪಿ.ರೈ
ಡಾ॥ ಕೆ.ಎಮ್.ವಿಜಯಲಕ್ಷ್ಮೀ
ಕರ್ನಾಟಕ ಲೇಖಕಿಯರ ಸಂಘ (ರಿ) ಚಾಮರಾಜಪೇಟೆ ಬೆಂಗಳೂರು.

ವಿವಿಧ ದಿನಪತ್ರಿಕೆಗಳಿಂದ ಸರಸ್ವತಿ ದೇವಿಯವರಿಗೆ ಶೃದ್ಧಾಂಜಲಿ

ಖ್ಯಾತ ಕನ್ನಡತಿಯ ಕಣ್ಮರೆ



ಹುಬ್ಬಳ್ಳಿ ೩— ಸ್ವಪ್ರಯತ್ನದಿಂದ ಮುಂದೆ ಬಂದು ಕನ್ನಡನಾಡಿನ ಸ್ತ್ರೀಯರ ಉನ್ನತಿಗಾಗಿ ಜೀವ ಶ್ರಮಿಸಿದ ಹೆಸರಾಂತ ಮಹಿಳಾ ಲೇಖಕಿ ಶ್ರೀಮತಿ ಸರಸ್ವತಿ ದೇವಿ ಗೌಡರ ಅವರು ಕಳೆದ ದಿ ೧—೭—೭೩ ರಂದು ನಿಧನ ಹೊಂದಿದರು. (ಈ ಮೊದಲು ಪ್ರಕಟವಾದಂತೆ ದಿ ೨೯—೬—೭೩ ರಂದು ಅಲ್ಲ ಎಂದು ಹುಬ್ಬಳ್ಳಿಯ ಡಾ ಎಸ್ ವಾಯ್ ಕಬಾಡೆ ಅವರು ತಿಳಿಸುತ್ತಾರೆ)

ದಿವಂಗತರಿಗೆ ಮರಣ ಸಮಯಕ್ಕೆ ಕೇವಲ ಐವತ್ತು ವರುಷಗಳಾಗಿದ್ದವು

ಯಾವ ಶಾಲೆ ಕಾಲೇಜಗಳಿಗೆ ಹೋಗದೆ ಮನೆಯಲ್ಲಿಯೇ ಸ್ವಪ್ರಯತ್ನದಿಂದ ಕಲಿತು ನಾಲ್ಕು ಭಾಷೆಗಳ ಮೇಲೆ ಪ್ರಭುತ್ವ ಸ್ಥಾಪಿಸಿದ್ದ ಶ್ರೀಮತಿ ಸರಸ್ವತಿದೇವಿ ಅವರು ಕನ್ನಡ ನಾಡದೇವಿ, ಕರ್ನಾಟಕ ಏಕೀಕರಣ ಮತ್ತು ಸ್ತ್ರೀಯರು, ಹಿಂದೂ ಕಾಯಿದೆ ಹಾಗೂ ಸ್ತ್ರೀಧನ ಮೊದಲಾದ ಹತ್ತು ಉತ್ಕೃಷ್ಟ ಗ್ರಂಥಗಳನ್ನು ಕನ್ನಡಕ್ಕಿತ್ತು ಉಪಕರಿಸಿದ್ದಾರೆ. ಇವರು ಸಾಹಿತಿಗಳಂತೆ ವಿಮರ್ಶಕರೂ ಭಾಷಣಕಾರರೂ ಆಗಿದ್ದಲ್ಲದೆ ಅನೇಕ ಸಂಘಸಂಸ್ಥೆಗಳೊಡನೆ ಸಂಬಂಧವಿಟ್ಟುಕೊಂಡು ಸಾಮಾಜಿಕ ಸೇವೆ ಸಲ್ಲಿಸಿದ್ದಾರೆ ಇವರ ಮರಣದಿಂದ ಕನ್ನಡ ನಾಡಿಗೆ, ಕನ್ನಡಭಾಷೆಗೆ ವಿಶೇಷವಾಗಿ ಸ್ತ್ರೀಸಮಾಜಕ್ಕೆ ತುಂಬಬಾರದ ಹಾನಿಯಾಗಿದೆ

ದೇವರು ದಿವಂಗತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಶ್ರೀಮತಿ ಸರಸ್ವತಿದೇವಿ ಗೌಡರ ನಿಧನ

ಧಾರವಾಡ ೩— ಕನ್ನಡದ ಪ್ರಮುಖ ಮಹಿಳಾ ಲೇಖಕಿಯರಲ್ಲೊಬ್ಬರಾದ ಶ್ರೀಮತಿ ಸರಸ್ವತಿ ದೇವಿಗೌಡರ ಅವರು ಜೂನ ೩೦ ರಂದು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದವಾಗುತ್ತದೆ

ಧಾರವಾಡದ ಸಾಹಿತ್ಯ ಚಟುವಟಿಕೆಗಳಲ್ಲಿ ಜೀವಂತ ಶಕ್ತಿಯಾಗಿ ಕಾರ್ಯ ಮಾಡುತ್ತಿದ್ದ ಶ್ರೀಮತಿ ಗೌಡರ ಅವರು ತಮ್ಮ ಸಣ್ಣಕಥೆಗಳಿಂದ ಕಾದಂಬರಿಗಳಿಂದ ಹಾಗು ಇತರ ಸಾಹಿತ್ಯಿಕ ಕೃತಿಗಳಿಂದ ಜನಪ್ರಿಯತೆ ಹೊಂದಿದ್ದರು. ಅಕ್ಕನ ಬಳಗದ ಸಕ್ರಿಯ ಸದಸ್ಯರಾಗಿ ಮಹಿಳಾ ಸೇವೆ ಹಾಗೂ ಸಮಾಜ ಸೇವೆಯನ್ನು ಅವರು ಮಾಡಿದ್ದಾರೆ ಸಾಹಿತ್ಯ ಪರಿಷತ್ತಿನ ಮಹಿಳಾ ಗೋಷ್ಠಿಯ ಅಧ್ಯಕ್ಷತೆಯನ್ನು ಅಲಂಕರಿಸಿದ್ದರು.

ಶ್ರೀಮತಿ ಸರಸ್ವತಿದೇವಿಯವರ ಪತಿ ನಿವೃತ್ತ ತಹಶೀಲದಾರ ಶ್ರೀ ಗೌಡರು ಕಳೆದ ವರ್ಷ ಲಿಂಗೈಕರಾಗಿದ್ದಾರೆ.

ಗೌಡರ ದಂಪತಿಗಳಿಗೆ ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರ ಇರುವರು ನಿನ್ನೆ ಧಾರವಾಡದಲ್ಲಿ ನಡೆದ ಶ್ರೀಮತಿ ಸರಸ್ವತಿ ದೇವಿಯವರ ಅಂತ್ಯಯಾತ್ರೆಗೆ ಅನೇಕ ಪ್ರತಿಷ್ಠಿತರು ಆಗಮಿಸಿ ಗೌರವ ಸಲ್ಲಿಸಿದರು,

ಸಾಹಿತ್ಯ ಸರಸ್ವತಿ

ಧಾರವಾಡದ ಸಾಂಸ್ಕೃತಿಕ ಜೀವನದ ಶ್ರೀಮಂತಿಕೆಗೆ ವಿಶೇಷವಾಗಿ ಮಹಿಳೆಯರ ಸರ್ವತೋಮುಖ ಏಳಿಗೆಗಾಗಿ ಹೋರಾಡಿದ ಶ್ರೀಮತಿ ಸರಸ್ವತಿದೇವಿ ಗೌಡರ ಆಕಸ್ಮಿಕ ನಿಧನದಿಂದ ನಾಡಿನ ಹಿರಿಯ ಜಾಗೃತ ಮಹಿಳಾ ಚೇತನವೊಂದು ಕಣ್ಮರೆಯಾದಂತಾಗಿದೆ. ದಿಂ. ಶ್ರೀಮತಿ ಸರಸ್ವತಿದೇವಿಯವರು ಹೆಸರಿಗೆ ತಕ್ಕಂತೆ ಕನ್ನಡ ಸಾಹಿತ್ಯ ಸರಸ್ವತಿಯೇ ಆಗಿದ್ದರು. ಸ್ವಪ್ರಯತ್ನದಿಂದ ನಾಲ್ಕು ಭಾಷೆಗಳ ಮೇಲೆ ಅವರ ಪ್ರಭುತ್ವವಿತ್ತು. ಮಹಿಳಾ ಜೀವನದ ವಿವಿಧ ಸಮಸ್ಯೆಗಳ ಬಗೆಗೆ ಆಳವಾದ ಆಲೋಚನೆ ಮಾಡಿದವರಾಗಿದ್ದರು ಅವರ ಸಾಮರ್ಥ್ಯ ಹಿರಿಯ ಸಾಹಿತಿಗಳು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಇತ್ತೀಚೆಗೆ ಅವರ ಲೇಖನಿಯಿಂದ ಪುಣ್ಯಸ್ಮೃತಿ ಕಥೆಗಳ ಸಂಕಲನ ಹೊರ ಬಂದಿತ್ತು. ಅದು ಅವರ ಆಳವಾದ ಅಭ್ಯಾಸದ ರಸಘಟ್ಟಿ. ಅವರ ಕ್ರಾಂತಿಕಾರಿ ವಿಚಾರಗಳನ್ನು ಇಲ್ಲಿ ನೋಡಬಹುದು. ಮುತ್ತು ಪೋಣಿಸಿದಂತೆ ಮಾತು ಜೋಡಿಸುವ ಅವರ ಕುಶಲತೆಯನ್ನು ಪುಸ್ತಕವನ್ನು ಓದಿಯೇ ತಿಳಿಯಬೇಕು. ಅವರ ಅಗಲುವಿಕೆಯಿಂದ ಕನ್ನಡ ಸಾಹಿತ್ಯಕ್ಕೆ ವಿಶೇಷವಾದ ಹಾನಿಯಾಗಿದೆ.

ಧಾರವಾಡ —ಎಸ್. ಎಸ್. ಭೂಸರಡ್ಡಿ

ಕಂಬನಿ

ಹೊಸದಿಲ್ಲಿ ೧೩— ಕನ್ನಡ ಸಾಹಿ
ಏಳ್ಗೆಗಾಗಿ ಮಹಿಳೆಯರ ಉನ್ನತಿಗಾಗಿ
ದುಡಿದ ಶ್ರೀಮತಿ ಸರಸ್ವತಿದೇವಿ ಗೌಡ
ಅವರ ಅಕಾಲಿಕ ನಿಧನದಿಂದ ಕನ್ನ
ಸಾಹಿತ್ಯ ಪ್ರಪಂಚಕ್ಕೆ ತುಂಬಿ ಬಾರ
ಹಾನಿಯಾಗಿದೆ ಎಂದು ಕೇಂದ್ರ ನಾಗರಿ
ವಿಮಾನೋದ್ಯಾನ ಮತ್ತು ಪ್ರವಾಸೋ
ದ್ಯಮ ಖಾತೆಯ ಮಂತ್ರಿ ಶ್ರೀಮ
ಸರೋಜಿನಿ ಮಹಿಷಿ ಅವರು ಶ್ರದ್ಧಾಂಜಲಿ
ಸಲ್ಲಿಸಿದ್ದಾರೆ.

AKSHARA GRANTHALAYA
ACC.NO. 048756

048756

[illegible]